ಕೃಷಿ ವಿಜ್ಞಾನ

ಸಂಪುಟ 46 ಸಂಚಿಕೆ 2 ಏಪ್ರಿಲ್–ಜೂನ್ 2022

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ವಿಜ್ಞಾನ

ಸಂಪುಟ 46, ಸಂಚಿಕೆ 2

ಏಪ್ರಿಲ್–ಜೂನ್ 2022

ಸಂಪಾದಕ ಮಂಡಳಿ

ಅಧ್ಯಕ್ಷರು

ಶಿಕ್ಷಣ ನಿರ್ದೇಶಕರು

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಸದಸ್ಯರು

ವಿಸ್ತರಣಾ ನಿರ್ದೇಶಕರು, ಕೃ.ವಿ.ವಿ., ಬೆಂಗಳೂರು

ಸಂಶೋಧನಾ ನಿರ್ದೇಶಕರು, ಕೃ.ವಿ.ವಿ., ಬೆಂಗಳೂರು

ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃ.ವಿ.ವಿ., ಬೆಂಗಳೂರು

ಸಹ ಸಂಪಾದಕರು, ಕೃ.ವಿ.ವಿ., ಬೆಂಗಳೂರು

ಹಿರಿಯ ವಾರ್ತಾ ತಜ್ಞರು, ಕೃ.ವಿ.ವಿ., ಬೆಂಗಳೂರು

ಸದಸ್ಯ–ಕಾರ್ಯದರ್ಶಿ

ಸಂಪಾದಕರು, ಕೃ.ವಿ.ವಿ., ಬೆಂಗಳೂರು

ಸಂಪಾದಕರು

ಡಾ. ಕೆ. ಹೆಚ್. ನಾಗರಾಜ್

ಸಂವಹನ ಕೇಂದ್ರ

ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ., ಬೆಂಗಳೂರು

ದೂರವಾಣಿ : 080–23622684

ಕೃಷಿ ವಿಜ್ಞಾನ ಪತ್ರಿಕೆಯ ಚಂದಾ ವಿವರ

ವಾರ್ಷಿಕ ಚಂದಾ

ವ್ಯಕ್ತಿಗಳಿಗೆ	ರೂ.	100–00
ಸಂಸ್ಥೆಗಳಿಗೆ	ರೂ.	200–00
ಆಜೀವ ಸದಸ್ಯತ್ವ	ರೂ.	500–00
ಮಹಾ ಪೋಷಕರು	ರೂ.	3000–00

ಲೇಖನಗಳಲ್ಲಿ ಲೇಖಕ(ರು) ಮಂಡಿಸಿದ ವಿಷಯ, ಅಭಿಪ್ರಾಯಗಳು ಹಾಗೂ ದತ್ತಾಂಶಗಳು ಅವರದ್ದೇ ಹಾಗಿದ್ದು ಸಂಪಾದಕ ಮಂಡಳಿಯು ಅದರ ಹೊಣೆಯಾಗುವುದಿಲ್ಲ



ಒಳ ಪುಟಗಳಲ್ಲಿ . . . .

- ಕೃಷಿ ವಿದ್ಯಾಭ್ಯಾಸ ಮತ್ತು ಅದರ ಉದ್ಯೋಗವಕಾಶಗಳು — 1
  ಬಸವೇಗೌಡ
- ಕಾಚಕ್ಕಿ – ಪೌಷ್ಟಿಕ ಮಹತ್ವ ಹಾಗೂ ಮೌಲ್ಯವರ್ಧನೆ — 8
  ಡಿ. ಶೋಭ ಮತ್ತು ಎಂ. ಎಸ್. ಶ್ರೀದೇವಿ
- ಅಸಹಜತೆಯ ಉತ್ತುಂಗದಲ್ಲಿ ಸಹಜ ಕೃಷಿಯ ಕೂಗು : ಅವಲೋಕನ ಮತ್ತು ನಿರೀಕ್ಷೆಗಳು — 13
  ಅರ್. ಮೋಹನ್ ಕುಮಾರ್, ಯಮನೂರ ಮತ್ತು ಬಿ. ಬೋರಯ್ಯ
- ತುಡುವೆ ಜೇನು ಕುಟುಂಬಗಳ ನಿರ್ವಹಣೆಗಾಗಿ ಜೋಡಿ ರಾಣಿ ಪದ್ಧತಿ — 18
  ಕೆ. ಟಿ. ವಿಜಯಕುಮಾರ್, ಟಿ. ನಯಿಮಬಾನು, ಎನ್. ಎಸ್. ಭಟ್, ಜಿ. ಸಿ. ಕುಬೇರಪ್ಪ ಮತ್ತು ಹೆಚ್. ಎಲ್. ನಿತಿನ್ ಕುಮಾರ್
- ಬೇಸಿಗೆಯಲ್ಲಿ ರಾಗಿ ಬೇಸಾಯ — 23
  ಟಿ. ಎಸ್. ಸುಕನ್ಯ, ಟಿ. ಇ. ನಾಗರಾಜ ಮತ್ತು ಸಿ. ಚೈತ್ರ
- ಹೊಂಗೆ ಮರವನ್ನು ಬೆನ್ನಟ್ಟುವ ಕೀಟ — 26
  ಕೆ. ವಿ. ಪ್ರಕಾಶ್, ಎಚ್. ಎಂ. ಯಶ್ವಂತ್ ಮತ್ತು ಎ. ಎನ್. ಶೃಂಗೇಶ್ವರ
- ಸಹ್ಯಾದ್ರಿ ಪಂಚಮುಖಿ ಭತ್ತದ ತಳಿಯ ಭಗಿರಥ – ದಯಾನಂದ ಕುಲಾಲ್ ದೇಲಂತುಬೆಟ್ಟು — 29
  ಬಿ. ಟಿ. ನವೀನ್ ಕುಮಾರ್, ಟಿ. ಜೆ. ರಮೇಶ ಮತ್ತು ಎಲ್. ಮಲ್ಲಿಕಾರ್ಜುನ್
- ಭಾರತದಲ್ಲಿನ ಬೆಳೆ ವಿಮೆಯ ಪ್ರಸ್ತುತ ಸ್ಥಿತಿಯ ಅವಲೋಕನ — 32
  ಆರ್. ರಾಜು, ಎಂ. ಎಲ್. ನಿತ್ಯಶ್ರೀ, ಟಿ. ಎಂ. ಕಿರಣ್ ಕುಮಾರ, ಸಿದ್ಧಯ್ಯ, ಜಿ. ನಾಗೇಶ
- ಭಾರತದ ಆರ್ಥಿಕಾಭಿವೃದ್ಧಿಯ ಓಟದಲ್ಲಿ – ಕರ್ನಾಟಕದ ಕಡೆ ಒಂದು ನೋಟ — 36
  ಆರ್. ರಘುಪತಿ ಮತ್ತು ಕೆ. ಬಿ. ಉಮೇಶ್
- ಅಪ್ಪಾರಾವ ಭೋಸಲೆ ಕೆಂಪು ಭೂಮಿಯಲ್ಲಿ ಕೊನರಿದ ಸೇಬು — 43
  ಜಿ. ಚಂದ್ರಕಾಂತ

ಚಂದಾ ಮೊತ್ತವನ್ನು ಸಂಪಾದಕರ ಹೆಸರಿನಲ್ಲಿರುವ ಕೆನರಾ ಬ್ಯಾಂಕ್, ಜಿ.ಕೆ.ವಿ.ಕೆ., ಬೆಂಗಳೂರು ಶಾಖೆಯ S.B. A/c. No. 0425101030928 (IFSC Code : CNRB0002737) ಗೆ ಜಮಾಯಿಸಿ ತಮ್ಮ ಪೂರ್ಣ ಸಂಪರ್ಕ ವಿಳಾಸದೊಂದಿಗೆ ವಿವರಗಳನ್ನು e-mail ID : editoruasb@gmail.com ಅಥವಾ editor@uasbangalore.edu.in ಮುಖಾಂತರ ಸಂಪಾದಕರಿಗೆ ಕಳುಹಿಸಬಹುದು

ಕೃಷಿ ವಿಜ್ಞಾನ, ಏಪ್ರಿಲ್–ಜೂನ್, 2022, ಸಂಚಿಕೆ 46(2) / 1–7

ಕೃಷಿ ವಿದ್ಯಾಭ್ಯಾಸ ಮತ್ತು ಅದರ ಉದ್ಯೋಗವಕಾಶಗಳು

ಬಸವೇಗೌಡ
ಕುಲಸಚಿವರು, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ., ಬೆಂಗಳೂರು–560065
e-Mail : bavaniseeds@gmail.com Mob. : 9380108423

ಕೃಷಿ ಭಾರತದ ಒಂದು ಪ್ರಮುಖ ಉದ್ಯಮ. ಸುಮಾರು 60% ಜನಸಂಖ್ಯೆಯು ಕೃಷಿ ಮತ್ತು ಕೃಷಿ ಆಧಾರಿತ ಉದ್ಯಮದಲ್ಲಿ ತೊಡಗಿರುತ್ತಾರೆ. ಕೃಷಿಯು ಗ್ರಾಮೀಣ ಭಾಗದ ಒಂದು ಪ್ರಮುಖ ಆದಾಯ ತರುವ ಚಟುವಟಿಕೆ. ಕೃಷಿಯಿಂದ ದೇಶದ ಆದಾಯಕ್ಕೆ (ಜಿಟಿಪಿ) ಸುಮಾರು 15% ರಿಂದ 16% ರಷ್ಟು ಕೊಡುಗೆ ನೀಡುತ್ತದೆ.

ಇತ್ತೀಚಿನ ಕೋವಿಡ್–19 ಸಾಂಕ್ರಾಮಿಕ ಸಂದರ್ಭದಲ್ಲಿ ಎಲ್ಲಾ ಚಟುವಟಿಕೆಗಳು ಕುಂಠಿತವಾದರೂ ಸಹ, ಕೃಷಿ ಚಟುವಟಿಕೆಗಳಿಗೆ ಹೆಚ್ಚು ತೊಂದರೆಯಾಗಿರುವುದಿಲ್ಲ ಮತ್ತು ನಗರ ಪ್ರದೇಶದಲ್ಲಿ ವಾಸ ಮಾಡುತ್ತಿದ್ದ ಹಲವಾರು ಯುವಕ ಯುವತಿಯರು ಗ್ರಾಮೀಣ ಪ್ರದೇಶಕ್ಕೆ ವಲಸೆ ಬಂದು ಕೃಷಿ ಚಟುವಟಿಕೆಗಳಲ್ಲಿ ಪಾಲ್ಗೊಂಡಿರುವುದು ಒಂದು ಹೆಮ್ಮೆಯ ವಿಷಯ. ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಜಿಯವರು ದೇಶದ ರೈತರ ಕೃಷಿ ಆದಾಯವನ್ನು ದುಪ್ಪಟ್ಟು ಮಾಡಲು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿರುತ್ತಾರೆ. ಅದರಂತೆ ಕೃಷಿ ಆದಾಯವನ್ನು ದುಪ್ಪಟ್ಟು ಮಾಡಬೇಕಾದರೆ ರೈತರು ಸಮಗ್ರ ಬೇಸಾಯ ಪದ್ಧತಿ, ಹೊಸ ತಂತಜ್ಞಾನಗಳು, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ, ರಾಜ್ಯ, ಅಂತರರಾಜ್ಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಮಾರುಕಟ್ಟೆ ಜ್ಞಾನವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ.

ಕೃಷಿಯಲ್ಲಿ ಆಗಿರುವ ಹೊಸ ತಂತ್ರಜ್ಞಾನಗಳು ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆ ಬಗ್ಗೆ ಗ್ರಾಮೀಣ ಯುವಕರಿಗೆ ಹೆಚ್ಚು ಕೃಷಿಗೆ ಸಂಬಂಧಿಸಿದ ವಿದ್ಯಾಭ್ಯಾಸದ ಅವಶ್ಯಕತೆ ಇರುತ್ತದೆ, ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಸುಮಾರು 3 ಕೃಷಿ ವಿಶ್ವ ವಿದ್ಯಾನಿಲಯಗಳು, 1 ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾನಿಲಯ, 1 ತೋಟಗಾರಿಕಾ ವಿಜ್ಞಾನಗಳ ವಿಶ್ವ ವಿದ್ಯಾನಿಲಯ ಹಾಗೂ 1 ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿ ವಿವಿಧ ವಿಷಯಗಳಲ್ಲಿ ಡಿಪ್ಲೋಮಾ, ಸ್ನಾತಕ, ಸ್ನಾತಕೋತ್ತರ ಮತ್ತು ಡಾಕ್ಟರಲ್ ಕಾರ್ಯಕ್ರಮಗಳ ಬಗ್ಗೆ ಬೋಧಿಸಲಾಗುತ್ತಿದೆ. ಆದರೆ ಜನಸಾಮನ್ಯರಿಗೆ ಈ ಕಾರ್ಯಕ್ರಮಗಳ ಬಗ್ಗೆ ಹೆಚ್ಚು ಮಾಹಿತಿ ಇರುವುದಿಲ್ಲ ಆದ್ದರಿಂದ ಈ ಲೇಖನದಲ್ಲಿ ಕರ್ನಾಟಕದಲ್ಲಿನ ಕೃಷಿ ಮತ್ತು ಕೃಷಿ ಸಂಬಂಧಿತ ವಿದ್ಯಾಭ್ಯಾಸ ಮತ್ತು ಉದ್ಯೋಗಾವಕಾಶಗಳ ಬಗ್ಗೆ ತಿಳಿಸಿ ಕೊಡಲು ಪ್ರಯತ್ನಿಸಲಾಗಿದೆ.

ಕರ್ನಾಟಕ ರಾಜ್ಯದಲ್ಲಿನ ವಿವಿಧ ವಿಶ್ವವಿದ್ಯಾನಿಲಯಗಳು

1. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
2. ಕೃಷಿ ವಿಶ್ವವಿದ್ಯಾಲಯ, ಧಾರವಾಡ
3. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
4. ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕ ವಿಶ್ವವಿದ್ಯಾಲಯ, ಶಿವಮೊಗ್ಗ
5. ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ
6. ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್

ಉದ್ಯೋಗಾವಕಾಶಗಳು

1. ಕೃಷಿ ಮತ್ತು ತೋಟಗಾರಿಕಾ ವಿಷಯಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಕರ್ನಾಟಕ ಸರ್ಕಾರದಕೃಷಿ ಅಧಿಕಾರ್ ಹಾಗೂ ತೋಟಗಾರಿಕಾ ಅಧಿಕಾರಿ ಆಗುವ ಅವಕಾಶವಿರುತ್ತದೆ ಜೊತೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬಹಳಷ್ಟು ಉದ್ಯೋಗವಕಾಶಗಳು ಇರುತ್ತದೆ.
2. ಖಾಸಗಿ ಸಂಸ್ಥೆಗಳಲ್ಲಿ ಕೃಷಿ ಪದವೀಧರರಿಗೆ ಹಲವಾರು ಕ್ಷೇತ್ರಗಳಲ್ಲಿ ಹೆಚ್ಚಿನ ಉದ್ಯೋಗವಕಾಶಗಳು ಇರುತ್ತದೆ ಅವುಗಳಲ್ಲಿ ಬೀಜ ಕೃಷಿ ಪರಿಕರ ಮತ್ತು ಕೃಷಿ ಸೇವೆಗಳು ಇತ್ಯಾದಿ.
3. ಕೃಷಿಯಲ್ಲಿ ಪದವಿ ಪಡೆದ ವಿದ್ಯಾರ್ಥಿಗಳಿಗೆ ಹೊಸದಾಗಿ ಸ್ವಂತ ಆಹಾರಕ್ಕೆ ಸಂಭಧಿಸಿದ ಉದ್ಯಮ ಸ್ಥಾಪಿಸುವ ಅವಕಾಶವಿರುತ್ತದೆ ಅವುಗಳಲ್ಲಿ ಬೀಜ ಸಾವಯವ ಕೃಷಿ,

ಕೋರ್ಸ್‌ಗಳು ಮತ್ತು ಕಾಲೇಜಿನ ವಿವರಗಳು

ಸ್ನಾತಕ ಪದವಿಗಳು, ಸ್ನಾತಕೋತ್ತರ ಮತ್ತು ಡಾಕ್ಟರಲ್ ಪದವಿಗಳು

ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

(ಕುಲಸಚಿವರ ಕಛೇರಿ:080–23330984/ವೆಬ್‌ಸೈಟ್–www.uasbangalore.edu.in)

ಕ್ರ.ಸಂ.	ಕಾಲೇಜಿನ ವಿಳಾಸ	ಕೋರ್ಸ್ ವಿವರ
01	ಕೃಷಿ ಮಹಾವಿದ್ಯಾನಿಲಯ, ಗಾಕೃವಿಕೆ, ಬೆಂಗಳೂರು	1. ಬಿ.ಎಸ್ಸಿ. (ಆನರ್ಸ್.) ಕೃಷಿ 2. ಬಿ.ಎಸ್ಸಿ. (ಆನರ್ಸ್.) ಕೃಷಿ ವ್ಯವಹಾರ ನಿರ್ವಹಣೆ
02	ಕೃಷಿ ಇಂಜಿನಿಯರಿಂಗ್ ಮಹಾವಿದ್ಯಾನಿಲಯ ಗಾಕೃವಿಕೆ, ಬೆಂಗಳೂರು	ಬಿ.ಟೆಕ್. (ಕೃಷಿ ಇಂಜಿನಿಯರಿಂಗ್)
03	ಕೃಷಿ ಮಹಾವಿದ್ಯಾನಿಲಯ, ವಿಸಿ ಫಾರಂ, ಮಂಡ್ಯ	ಬಿ.ಎಸ್ಸಿ. (ಆನರ್ಸ್.) ಕೃಷಿ
04	ಕೃಷಿ ಮಹಾವಿದ್ಯಾನಿಲಯ, ಕಾರೇಕೆರೆ, ಹಾಸನ	1. ಬಿ.ಎಸ್ಸಿ. (ಆನರ್ಸ್.) ಕೃಷಿ 2. ಬಿ.ಟೆಕ್. (ಜೈವಿಕ ತಂತ್ರಜ್ಞಾನ) 3. ಬಿ.ಟೆಕ್. (ಆಹಾರ ತಂತ್ರಜ್ಞಾನ)
05	ಕೃಷಿ ಮಹಾವಿದ್ಯಾನಿಲಯ, ಚಿಂತಾಮಣಿ	1. ಬಿ.ಎಸ್ಸಿ. (ಆನರ್ಸ್.) ಕೃಷಿ 2. ಬಿ.ಎಸ್ಸಿ. (ಆನರ್ಸ್.) ರೇಷ್ಮೇಕೃಷಿ
06	ಕೃಷಿ ಮಹಾವಿದ್ಯಾನಿಲಯ, ಚಾಮರಾಜನಗರ	ಬಿ.ಎಸ್ಸಿ. (ಆನರ್ಸ್.) ಕೃಷಿ
07	ಕೃಷಿ ಮಹಾವಿದ್ಯಾನಿಲಯವ, ಗಾಕೃವಿಕೆ, ಬೆಂಗಳೂರು/ ಮಂಡ್ಯ/ಹಾಸನ/ಚಿಂತಾಮಣಿ	ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳು
08	ಕೃಷಿ ಮಹಾವಿದ್ಯಾನಿಲಯ, ಗಾಕೃವಿಕೆ, ಬೆಂಗಳೂರು/ಮಂಡ್ಯ	ವಿವಿಧ ವಿಷಯಗಳಲ್ಲಿ ಪಿಹೆಚ್.ಡಿ ಕಾರ್ಯಕ್ರಮಗಳು

ಕೃಷಿ ವಿಶ್ವವಿದ್ಯಾಲಯ, ಧಾರವಾಡ

(ಕುಲಸಚಿವರ ಕಛೇರಿ:0836–2440947, ವೆಬ್‌ಸೈಟ್–www.uasd.edu)

ಕ್ರ.ಸಂ.	ಕಾಲೇಜಿನ ವಿಳಾಸ	ಕೋರ್ಸ್ ವಿವರ
01	ಕೃಷಿ ಮಹಾವಿದ್ಯಾನಿಲಯ, ಕೃವಿವಿ, ಧಾರವಾಡ	1. ಬಿ.ಎಸ್ಸಿ. (ಆನರ್ಸ್.) ಕೃಷಿ 2. ಬಿ.ಎಸ್ಸಿ. (ಆನರ್ಸ್.) ಕೃಷಿ ವ್ಯವಹಾರ ನಿರ್ವಹಣೆ
02	ಸಮುದಾಯ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ	1. ಬಿ.ಎಸ್ಸಿ. (ಆನರ್ಸ್.), ಸಮುದಾಯ ವಿಜ್ಞಾನ 2. ಬಿ.ಟೆಕ್. (ಆಹಾರತಂತ್ರಜ್ಞಾನ)
03	ಕೃಷಿ ಮಹಾವಿದ್ಯಾನಿಲಯ, ವಿಜಯಪುರ	ಬಿ.ಎಸ್ಸಿ. (ಆನರ್ಸ್.) ಕೃಷಿ
04	ಕೃಷಿ ಮಹಾವಿದ್ಯಾನಿಲಯ, ಹನುಮನಹಟ್ಟಿ, ಹಾವೇರಿ	ಬಿ.ಎಸ್ಸಿ. (ಆನರ್ಸ್.) ಕೃಷಿ
05	ಕೃಷಿ ಅರಣ್ಯ ಮಹಾವಿದ್ಯಾನಿಲಯ, ಶಿರಸಿ, ಉತ್ತರಕನ್ನಡ	ಬಿ.ಎಸ್ಸಿ. (ಆನರ್ಸ್.) ಕೃಷಿ ಅರಣ್ಯ
06	ಕೃಷಿ ಮಹಾವಿದ್ಯಾನಿಲಯ, ಧಾರವಾಡ/ವಿಜಯಪುರ	ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳು
07	ಕೃಷಿ ಮಹಾವಿದ್ಯಾನಿಲಯ, ಧಾರವಾಡ/ಶಿರಸಿ	ವಿವಿಧ ವಿಷಯಗಳಲ್ಲಿ ಪಿಹೆಚ್.ಡಿ ಕಾರ್ಯಕ್ರಮಗಳು

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
(ಕುಲಸಚಿವರ ಕಛೇರಿ : 08532-220157 ವೆಬ್‌ಸೈಟ್-www.uasraichur.edu.in)

ಕ್ರ.ಸಂ.	ಕಾಲೇಜಿನ ವಿಳಾಸ	ಕೋರ್ಸ್ ವಿವರ
01	ಕೃಷಿ ಮಹಾವಿದ್ಯಾನಿಲಯ, ರಾಯಚೂರು	ಬಿ.ಎಸ್ಸಿ. (ಆನರ್ಸ್.) ಕೃಷಿ
02	ಕೃಷಿ ಮಹಾವಿದ್ಯಾನಿಲಯ, ಭೀಮರಾಯನಗುಡಿ	ಬಿ.ಎಸ್ಸಿ. (ಆನರ್ಸ್.) ಕೃಷಿ
03	ಕೃಷಿ ಮಹಾವಿದ್ಯಾನಿಲಯ, ಕಲಬುರ್ಗಿ	ಬಿ.ಎಸ್ಸಿ. (ಆನರ್ಸ್.) ಕೃಷಿ
04	ಕೃಷಿ ಇಂಜಿನಿಯರಿಂಗ್ ಮಹಾವಿದ್ಯಾನಿಲಯ, ರಾಯಚೂರು	ಬಿ.ಟೆಕ್. (ಕೃಷಿ ಇಂಜಿನಿಯರಿಂಗ್)
05	ಕೃಷಿ ಮಹಾವಿದ್ಯಾನಿಲಯ, ಗಂಗಾವತಿ	ಬಿ.ಎಸ್ಸಿ. (ಆನರ್ಸ್.) ಕೃಷಿ
06	ಕೃಷಿ ಮಹಾವಿದ್ಯಾನಿಲಯ, ರಾಯಚೂರು	ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳು
07	ಕೃಷಿ ತಾಂತ್ರಿಕ ಮಹಾವಿದ್ಯಾನಿಲಯ, ರಾಯಚೂರು	ವಿವಿಧ ವಿಷಯಗಳಲ್ಲಿ ಪಿಹೆಚ್.ಡಿ ಕಾರ್ಯಕ್ರಮಗಳು

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ
(ಕುಲಸಚಿವರ ಕಛೇರಿ : 08354-230280 ವೆಬ್‌ಸೈಟ್-www.uhsbagalkot.edu.in)

ಕ್ರ.ಸಂ.	ಕಾಲೇಜಿನ ವಿಳಾಸ	ಕೋರ್ಸ್ ವಿವರ
01	ತೋಟಗಾರಿಕೆ ಮಹಾವಿದ್ಯಾನಿಲಯ, ಬಾಗಲಕೋಟೆ	ಬಿ.ಎಸ್ಸಿ. (ಆನರ್ಸ್.) ತೋಟಗಾರಿಕೆ
02	ತೋಟಗಾರಿಕೆ ಮಹಾವಿದ್ಯಾನಿಲಯ, ಬೀದರ್	ಬಿ.ಎಸ್ಸಿ. (ಆನರ್ಸ್.) ತೋಟಗಾರಿಕೆ
03	ಕಿತ್ತೂರುರಾಣಿ ಚೆನ್ನಮ್ಮ ತೋಟಗಾರಿಕೆ ಮಹಾವಿದ್ಯಾನಿಲಯ, ಅರಬಾವಿ, ಬೆಳಗಾಂ	ಬಿ.ಎಸ್ಸಿ. (ಆನರ್ಸ್.) ತೋಟಗಾರಿಕೆ
04	ತೋಟಗಾರಿಕೆ ಮಹಾವಿದ್ಯಾನಿಲಯ, ಕೋಲಾರ	ಬಿ.ಎಸ್ಸಿ. (ಆನರ್ಸ್.) ತೋಟಗಾರಿಕೆ
05	ತೋಟಗಾರಿಕೆ ಮಹಾವಿದ್ಯಾನಿಲಯ, ಮೈಸೂರು	ಬಿ.ಎಸ್ಸಿ. (ಆನರ್ಸ್.) ತೋಟಗಾರಿಕೆ
06	ತೋಟಗಾರಿಕೆ ಮಹಾವಿದ್ಯಾನಿಲಯ, ಶಿರಸಿ, ಉತ್ತರಕನ್ನಡ	ಬಿ.ಎಸ್ಸಿ. (ಆನರ್ಸ್.) ತೋಟಗಾರಿಕೆ
07	ತೋಟಗಾರಿಕೆ ಮಹಾವಿದ್ಯಾನಿಲಯ, ಮುನಿರಾಬಾದ್,ಕೊಪ್ಪಳ	ಬಿ.ಎಸ್ಸಿ. (ಆನರ್ಸ್.) ತೋಟಗಾರಿಕೆ
08	ತೋಟಗಾರಿಕೆ ಮಹಾವಿದ್ಯಾನಿಲಯ, ಬೆಂಗಳೂರು	ಬಿ.ಎಸ್ಸಿ. (ಆನರ್ಸ್.) ತೋಟಗಾರಿಕೆ
09	ತೋಟಗಾರಿಕೆ ಇಂಜಿನಿಯರಿಂಗ್ ಮತ್ತು ಆಹಾರ ತಂತ್ರಜ್ಞಾನ ಮಹಾವಿದ್ಯಾನಿಲಯ, ದೇವಿಹೊಸೂರು, ಹಾವೇರಿ	ಬಿ.ಟೆಕ್. (ಆಹಾರ ತಂತ್ರಜ್ಞಾನ)
10	ತೋಟಗಾರಿಕೆ ಮಹಾವಿದ್ಯಾನಿಲಯ, ಬಾಗಲಕೋಟೆ/ ಅರಬಾವಿ/ಬೆಂಗಳೂರು	ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳು
11	ತೋಟಗಾರಿಕೆ ಮಹಾವಿದ್ಯಾನಿಲಯ, ಬಾಗಲಕೋಟೆ/ ಅರಬಾವಿ/ಬೆಂಗಳೂರು	ವಿವಿಧ ವಿಷಯಗಳಲ್ಲಿ ಪಿಹೆಚ್.ಡಿ ಕಾರ್ಯಕ್ರಮಗಳು

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತುತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ
(ಕುಲಸಚಿವರ ಕಛೇರಿ : 08182–267011, ವೆಬ್‌ಸೈಟ್–www.uahs.edu.in)

ಕ್ರ.ಸಂ.	ಕಾಲೇಜಿನ ವಿಳಾಸ	ಕೋರ್ಸ್ ವಿವರ
01	ಕೃಷಿ ಮಹಾವಿದ್ಯಾನಿಲಯ, ನವಿಲೇ, ಶಿವಮೊಗ್ಗ	ಬಿ.ಎಸ್ಸಿ. (ಆನರ್ಸ್.) ಕೃಷಿ
02	ಕೃಷಿ ಮಹಾವಿದ್ಯಾನಿಲಯ, ಇರುವಕ್ಕಿ, ಶಿವಮೊಗ್ಗ	ಬಿ.ಎಸ್ಸಿ. (ಆನರ್ಸ್.) ಕೃಷಿ
03	ತೋಟಗಾರಿಕಾ ಮಹಾವಿದ್ಯಾನಿಲಯ, ಮೂಡಿಗೇರೆ	ಬಿ.ಎಸ್ಸಿ. (ಆನರ್ಸ್.) ತೋಟಗಾರಿಕೆ
04	ಕೃಷಿ ಅರಣ್ಯ ಮಹಾವಿದ್ಯಾನಿಲಯ, ಪೊನ್ನಂಪೇಟೆ	ಬಿ.ಎಸ್ಸಿ. (ಆನರ್ಸ್.) ಕೃಷಿ ಅರಣ್ಯ
05	ತೋಟಗಾರಿಕಾ ಮಹಾವಿದ್ಯಾನಿಲಯ, ಹಿರಿಯೂರು	ಬಿ.ಎಸ್ಸಿ. (ಆನರ್ಸ್.) ತೋಟಗಾರಿಕೆ
06	ತೋಟಗಾರಿಕಾ ಮಹಾವಿದ್ಯಾನಿಲಯ, ಶಿವಮೊಗ್ಗ/ ಮೂಡಿಗೇರೆ/ಪೊನ್ನಂಪೇಟೆ	ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳು
07	ತೋಟಗಾರಿಕಾ ಮಹಾವಿದ್ಯಾನಿಲಯ, ಶಿವಮೊಗ್ಗ/ ಪೊನ್ನಂಪೇಟೆ	ವಿವಿಧ ವಿಷಯಗಳಲ್ಲಿ ಪಿಹೆಚ್.ಡಿ ಕಾರ್ಯಕ್ರಮಗಳು

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೀದರ್
(ಕುಲಸಚಿವರ ಕಛೇರಿ : 08482–245241, ವೆಬ್‌ಸೈಟ್–www.kvafsu.edu.in)

ಕ್ರ.ಸಂ.	ಕಾಲೇಜಿನ ವಿಳಾಸ	ಕೋರ್ಸ್ ವಿವರ
01	ಪಶುವೈದ್ಯಕೀಯ ಮಹಾವಿದ್ಯಾನಿಲಯ, ಬೆಂಗಳೂರು	ಬಿ.ವಿ.ಎಸ್ಸಿ. ಮತ್ತು ಎ.ಎಚ್.
02	ಪಶುವೈದ್ಯಕೀಯ ಮಹಾವಿದ್ಯಾನಿಲಯ, ಬೀದರ್	ಬಿ.ವಿ.ಎಸ್ಸಿ. ಮತ್ತು ಎ.ಎಚ್.
03	ಪಶುವೈದ್ಯಕೀಯ ಮಹಾವಿದ್ಯಾನಿಲಯ, ಶಿವಮೊಗ್ಗ	ಬಿ.ವಿ.ಎಸ್ಸಿ. ಮತ್ತು ಎ.ಎಚ್.
04	ಪಶುವೈದ್ಯಕೀಯ ಮಹಾವಿದ್ಯಾನಿಲಯ, ಹಾಸನ	ಬಿ.ವಿ.ಎಸ್ಸಿ. ಮತ್ತು ಎ.ಎಚ್.
05	ಪಶುವೈದ್ಯಕೀಯ ಮಹಾವಿದ್ಯಾನಿಲಯ, ಗದಗ್	ಬಿ.ವಿ.ಎಸ್ಸಿ. ಮತ್ತು ಎ.ಎಚ್.
06	ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರು	ಬಿ.ಎಫ್.ಎಸ್ಸಿ.
07	ಹೈನು ಮಹಾವಿದ್ಯಾಲಯ, ಬೆಂಗಳೂರು	ಬಿ.ಟೆಕ್. (ಡಿ.ಟೆಕ್.)
08	ಹೈನು ಮಹಾವಿದ್ಯಾಲಯ, ಕಲಬುರ್ಗಿ	ಬಿ.ಟೆಕ್. (ಡಿ.ಟೆಕ್.)
09	ಪಶುವೈದ್ಯಕೀಯ ಮಹಾವಿದ್ಯಾನಿಲಯ, ಬೆಂಗಳೂರು/ ಬೀದರ್/ಶಿವಮೊಗ್ಗ/ಹಾಸನ/ಮಂಗಳೂರು	ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಗಳು
10	ಪಶುವೈದ್ಯಕೀಯ ಮಹಾವಿದ್ಯಾನಿಲಯ, ಬೆಂಗಳೂರು/ ಮಂಗಳೂರು/ಬೀದರ್	ವಿವಿಧ ವಿಷಯಗಳಲ್ಲಿ ಪಿಹೆಚ್.ಡಿ ಕಾರ್ಯಕ್ರಮಗಳು

ಕೃಷಿ ರಪ್ತು, ಆಹಾರ ತಂತ್ರಜ್ಞಾನ ಮೌಲ್ಯವರ್ಧನೆ ಇತ್ಯಾದಿ ಮತ್ತು ಕೇಂದ್ರ ಮತ್ತು ರಾಜ್ಯ ಸರ್ಕಾರವು ಇಂತಹ ಉದ್ಯಮಕ್ಕೆ ಬಹಳ ಪ್ರೋತ್ಸಾಹ ನೀಡುತ್ತದೆ.

4. ಅದರಂತೆ, ಪಶುವೈದ್ಯಕೀಯ, ಹೈನುಗಾರಿಕೆ, ಮೀನುಗಾರಿಕೆಯಲ್ಲಿ ಪದವಿ ಪಡೆದ ವಿದ್ಯಾರ್ಥಿಗಳಿಗೆ ಆಯಾ ವಿಷಯಕ್ಕೆ ಸಂಭಂಧಪಟ್ಟ ವಿಭಾಗಗಳಲ್ಲಿ ಕೇಂದ್ರ, ರಾಜ್ಯ ಸರ್ಕಾರದಲ್ಲಿ ಮತ್ತು ಖಾಸಗಿ ಕ್ಷೇತ್ರದಲ್ಲಿಕೆಲಸವನ್ನು ಪಡೆಯುವ ಅವಕಾಶವಿರುತ್ತದೆ.

5. ಮುಖ್ಯವಾಗಿ, ಕೃಷಿ, ತೋಟಗಾರಿಕೆ, ಪಶುವೈದ್ಯಕೀಯ, ಹೈನುಗಾರೀಕೆ, ಮೀನುಗಾರಿಕೆ ವಿಷಯಗಳಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಸ್ಪರ್ದಾತ್ಮಕ ಪರೀಕ್ಷೆಗಳನ್ನು ಬರೆಯಲು ಅವಕಾಶವಿರುತ್ತದೆ, ಈ ವಿದ್ಯಾರ್ಥಿಗಳಿಗೆ ತಮ್ಮ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಸ್ನಾತಕೋತ್ತರ/ಡಾಕ್ಟರಲ್ ಪದವಿಯನ್ನು ತಮ್ಮ ಇಚ್ಚೆ ಇರುವ ವಿಷಯದಲ್ಲಿ ವ್ಯಾಸಂಗ ಮಾಡಿ ಆ ವಿಷಯದಲ್ಲಿ ವಿಜ್ಞಾನಿಗಳಾಗಿ/ಸಹಾಯಕ ಪ್ರಾಧ್ಯಾಪಕರಾಗಿ ದೇಶದಾದ್ಯಂತ ಉದ್ಯೋಗವಕಾಶವಿರುತ್ತದೆ.

6. ಐಸಿಎಆರ್ ನಲ್ಲಿ ವಿಜ್ಞಾನಿಗಳ ಮತ್ತು ರಾಜ್ಯ ಕೃಷಿ ವಿವಿಗಳಲ್ಲಿ ಪ್ರಾಧ್ಯಾಪಕ ಹುದ್ದೆಯನ್ನು ಪಡೆಯಲು ಎಎಸ್ಆಬಿ ರವರು ನಡೆಸುವ ಸ್ಪರ್ದಾತ್ಮಕ ಪರೀಕ್ಷೆಗಳಾದ ಎನ್ಇಟಿ/ ಎಆರ್ಎಸ್ಯಲ್ಲಿ ಉತ್ತಮ ಅಂಕಗಳನ್ನು ಪಡೆದು ಉತೀರ್ಣರಾಗಬೇಕಾಗುತ್ತದೆ.

ಈ ಮೇಲೆ ತಿಳಿಸಿರುವ ಉದ್ಯೋಗಾವಕಾಶಗಳು ಕೃಷಿ ಮತ್ತು ಸಂಬಂಧಿತ ವಿಶ್ವವಿದ್ಯಾನಿಲಯಗಳಲ್ಲಿ ಪದವಿ ಪಡೆದವರಿಗೆ ಅವಕಾಶವಿರುತ್ತದೆ.

ಪ್ರವೇಶ ವಿಧಾನ

ರಾಜ್ಯದ ಕೃಷಿ ಮತ್ತು ಕೃಷಿ ಆಧಾರಿತ ಸ್ನಾತಕ ಪದವಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆ ಮೂಲಕ ನಡೆಸಲಾಗುವುದು ಮತ್ತು ರೈತರ ಮಕ್ಕಳ ಕೋಟಾದಡಿಯಲ್ಲಿ ಶೇಕಡ 50ರಷ್ಟು ಸ್ನಾತಕ ಪದವಿಗಳಿಗೆ ಆಯಾ ವಿಶ್ವವಿದ್ಯಾಲಯಗಳು ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಿ ನಂತರ ಮೆರಿಟ್ ಆಧಾರದ ಮೇಲೆ ಸಿಇಟಿ ಮುಖಾಂತರ ಪ್ರವೇಶಾತಿಯನ್ನು ಪಡೆಯಬಹುದು ಮತ್ತು ಶೇಕಡ 25 ಸೀಟುಗಳಿಗೆ ಭಾರತೀಯ ಕೃಷಿ ಅನುಸಂದಾನ ಸಂಸ್ಥೆಯು ನಡೆಸುವ ರಾಷ್ಟ್ರೀಯ ಮಟ್ಟದ ಪರೀಕ್ಷೆಗಳ ಮುಖಾಂತರ ಪ್ರವೇಶಾತಿಯನ್ನು ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಅಭ್ಯರ್ಥಿಗಳು ಆಯಾ ವಿಶ್ವವಿದ್ಯಾಲಯಗಳ ವೆಬ್‌ಸೈಟ್‌ನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ವಿದ್ಯಾರ್ಹತೆ

ಕರ್ನಾಟಕದಲ್ಲಿ ದ್ವಿತೀಯ ಪಿ.ಯು.ಸಿ / 12ನೇ ತರಗತಿಯಲ್ಲಿ ಪಿ.ಸಿ.ಎಂ.ಬಿ/ಪಿ.ಸಿ.ಬಿ/ಪಿ.ಸಿ.ಎಂ ವಿಷಯಗಳ ಸಂಯೋಜನೆಯೊಂದಿಗೆ ವ್ಯಾಸಂಗ ಮಾಡಿ ಉತ್ತೀರ್ಣರಾಗಿರಬೇಕು. ಆಯಾ ಕೋರ್ಸ್‌ಗಳಿಗೆ ಬೇಕಾದ ಅರ್ಹತೆ/ವಿಷಯಗಳ ಬಗ್ಗೆ ಸಂಬಂಧಪಟ್ಟ ವಿಶ್ವವಿದ್ಯಾಲಯುಗಳ ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು.

ಡಿಪ್ಲೋಮಾಕೋರ್ಸ್‌ಗಳ ವಿವರ

ಎಲ್ಲಾ ಕೃಷಿಕರಿಗೂ ತಿಳಿದಿರುವಂತೆ, ಈಗಿರುವ ಹವಾಮಾನದ ವೈಪರಿತ್ಯಗಳು ಕೃಷಿಯಲ್ಲಿ ಅಗುತ್ತಿರುವ ಮಾರುಕಟ್ಟೆ ವ್ಯತ್ಯಯಗಳು, ಗ್ರಾಮೀಣ ಯುವಕ ಯುವತಿಯರನ್ನು ಪಟ್ಟಣದತ್ತ ಮುಖ ಮಾಡುವಂತೆ ಮಾಡಿದೆ. ಡಿಪ್ಲೋಮಾ (ಕೃಷಿ)ಯನ್ನು ಪ್ರಾರಂಭಿಸಿದ ಮೂಲ ಉದ್ದೇಶಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಕೃಷಿ ಮಾಡಲು ಪ್ರೇರೇಪಿಸಿ ಪ್ರಗತಿಪರ ಕೃಷಿಕರನ್ನಾಗಿಸುವುದು. ಡಿಪ್ಲೋಮಾ ಮೂಲಕ ವಿದ್ಯಾರ್ಥಿಗಳಿಗೆ ಬೆಳೆ ಪದ್ಧತಿಗಳು, ಅಭಿವೃದ್ಧಿಪಡಿಸಿದ ಉತ್ತಮ ತಳಿಗಳು, ರೋಗ, ಕೀಟ ಮತ್ತು ಕಳೆಗಳ ವೈಜ್ಞಾನಿಕ ಹಾಗೂ ಸಮಗ್ರ ನಿರ್ವಹಣೆ, ಕೃಷಿ ಮಾರುಕಟ್ಟೆಯ ತಿಳುವಳಿಕೆ ಮತ್ತು ಇನ್ನಿತರ ವಿಷಯಗಳನ್ನು ಬೋಧಿಸಲಾಗುತ್ತಿದೆ.

ಪ್ರಸ್ತುತ ಡಿಪ್ಲೋಮಾ ತರಗತಿಗಳಿಗೆ ಪ್ರವೇಶವನ್ನು ಎಸ್.ಎಸ್.ಎಲ್.ಸಿ ಯಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳು ಹಾಗು ಕರ್ನಾಟಕ ಸರ್ಕಾರದ ಮೀಸಲಾತಿ ಆಧಾರದಲ್ಲಿ ನೀಡಲಾಗುತ್ತಿದೆ. ಸರ್ಕಾರದ ಆದೇಶದಂತೆ ಕೃಷಿಕರ ಕೋಟಾದಡಿಯಲ್ಲಿ ಪ್ರವೇಶ ಮೀಸಲಾತಿಯನ್ನು 2021–22ನೇ ಸಾಲಿನಿಂದ ಶೇ. 50 ಕ್ಕೆ ಹೆಚ್ಚಿಸಿಲಾಗಿರುತ್ತದೆ. ಇದರಿಂದ ಗ್ರಾಮೀಣ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆಯಲು ಅನುಕೂಲವಾಗಿದೆ.

ಡಿಪ್ಲೋಮಾ (ಕೃಷಿ)/ತೋಟಗಾರಿಕೆ ಉತ್ತೀರ್ಣರಾದ ಗ್ರಾಮೀಣ ಮತ್ತು ನಗರ ಪ್ರದೇಶದ ಹೆಚ್ಚಿನ ವಿದ್ಯಾರ್ಥಿಗಳು ಬಿ.ಎಸ್ಸಿ. ಕೃಷಿ/ತೋಟಗಾರಿಕೆ ಪದವಿಗೆ ಪ್ರವೇಶ ಪಡೆಯಲು ಆಸಕ್ತಿ ತೋರಿದ್ದರಿಂದ, ಸ್ನಾತಕ ಪದವಿಯನ್ನು ಪಡೆಯಲು ಹೆಚ್ಚಿನ ಅವಕಾಶ ಕಲ್ಪಿಸುವ ದೃಷ್ಠಿಯಿಂದ ಮೊದಲಿಗೆ ಶೇಕಡ 2ರಷ್ಟಿದ್ದ ಪಾರ್ಶ್ವ ಪ್ರವೇಶದ ವಿದ್ಯಾರ್ಥಿಗಳ ಸಂಖ್ಯೆಯನ್ನು ಶೇಕಡ 5 ಕ್ಕೆ ಹೆಚ್ಚಿಸಿ ಅಳವಡಿಸಿಕೊಳ್ಳಲಾಗಿರುತ್ತದೆ.

ಡಿಪ್ಲೋಮ ಕೋರ್ಸ್‌ಗಳು ಮತ್ತು ಕಾಲೇಜಿನ ವಿವರಗಳು

ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು
(ಕುಲಸಚಿವರ ಕಛೇರಿ : 080–23330984, ವೆಬ್‌ಸೈಟ್–www.uasbangalore.edu.in)

ಕ್ರ.ಸಂ.	ಕಾಲೇಜಿನ ವಿಳಾಸ	ಕೋರ್ಸ್ ವಿವರ
01	ಕೃಷಿ ಮಹಾವಿದ್ಯಾನಿಲಯ, ವಿಸಿ ಫಾರಂ, ಮಂಡ್ಯ	ಡಿಪ್ಲೋಮಾ (ಕೃಷಿ)
02	ಕೃಷಿ ಮಹಾವಿದ್ಯಾನಿಲಯ, ಚಿಂತಾಮಣಿ	ಡಿಪ್ಲೋಮಾ (ರೇಷ್ಮೆಕೃಷಿ)

ಕೃಷಿ ವಿಶ್ವವಿದ್ಯಾಲಯ, ಧಾರವಾಡ
(ಕುಲಸಚಿವರ ಕಛೇರಿ:0836–2440947, ವೆಬ್‌ಸೈಟ್ –www.uasd.edu)

ಕ್ರ.ಸಂ.	ಕಾಲೇಜಿನ ವಿಳಾಸ	ಕೋರ್ಸ್ ವಿವರ
01	ಕೃಷಿ ಮಹಾವಿದ್ಯಾನಿಲಯ, ಕೃವಿವಿ, ಧಾರವಾಡ	ಡಿಪ್ಲೋಮಾ (ಕೃಷಿ)
02	ಕೃಷಿ ಮಹಾವಿದ್ಯಾನಿಲಯ, ವಿಜಯಪುರ	ಡಿಪ್ಲೋಮಾ (ಕೃಷಿ)
03	ಕೃಷಿ ಮಹಾವಿದ್ಯಾನಿಲಯ, ಹನುಮನಹಟ್ಟಿ, ಹಾವೇರಿ	ಡಿಪ್ಲೋಮಾ (ಕೃಷಿ)
04	ಡಿಪ್ಲೋಮಾ ಕಾಲೇಜು, ಕುಮುಟ	ಡಿಪ್ಲೋಮಾ (ಕೃಷಿ)
05	ಡಿಪ್ಲೋಮಾ ಕಾಲೇಜು, ನಿಪ್ಪಾಣಿ	ಡಿಪ್ಲೋಮಾ (ಕೃಷಿ)
06	ಡಿಪ್ಲೋಮಾ ಕಾಲೇಜು, ಜಮಖಂಡಿ	ಡಿಪ್ಲೋಮಾ (ಕೃಷಿ)
07	ಡಿಪ್ಲೋಮಾ ಕಾಲೇಜು, ಕೊಣ್ಣೂರು	ಡಿಪ್ಲೋಮಾ (ಕೃಷಿ)
08	ಡಿಪ್ಲೋಮಾ ಕಾಲೇಜು, ಮಳಗಿ (ಶಿರಸಿ)	ಡಿಪ್ಲೋಮಾ (ಅರಣ್ಯ)

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು
(ಕುಲಸಚಿವರ ಕಛೇರಿ:08532–220157, ವೆಬ್‌ಸೈಟ್–www.uasraichur.edu.in)

ಕ್ರ.ಸಂ.	ಕಾಲೇಜಿನ ವಿಳಾಸ	ಕೋರ್ಸ್ ವಿವರ
01	ಕೃಷಿ ಮಹಾವಿದ್ಯಾನಿಲಯ, ಭೀಮರಾಯನಗುಡಿ	ಡಿಪ್ಲೋಮಾ (ಕೃಷಿ)
02	ಡಿಪ್ಲೋಮಾ ಕಾಲೇಜು, ಬೀದರ್	ಡಿಪ್ಲೋಮಾ (ಕೃಷಿ)
03	ಡಿಪ್ಲೋಮಾ ಕಾಲೇಜು, ಹಗರಿ	ಡಿಪ್ಲೋಮಾ (ಕೃಷಿ)
04	ಕೃಷಿ ತಾಂತ್ರಿಕ ಮಹಾವಿದ್ಯಾನಿಲಯ, ರಾಯಚೂರು	ಡಿಪ್ಲೋಮಾ (ಕೃಷಿ ಇಂಜಿನಿಯರಿಂಗ್)

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

(ಕುಲಸಚಿವರ ಕಛೇರಿ : 08354-230280, ವೆಬ್‌ಸೈಟ್-www.uhsbagalkot.edu.in)

ಕ್ರ.ಸಂ.	ಕಾಲೇಜಿನ ವಿಳಾಸ	ಕೋರ್ಸ್ ವಿವರ
01	ಕಿತ್ತೂರುರಾಣಿಚೆನ್ನಮ್ಮತೋಟಗಾರಿಕೆ ಮಹಾವಿದ್ಯಾನಿಲಯ, ಅರಬಾವಿ, ಬೆಳಗಾಂ	ತೋಟಗಾರಿಕೆ (ಡಿಪ್ಲೋಮ)
02	ತೋಟಗಾರಿಕಾ ಸಂಶೋದನೆ ಮತ್ತು ವಿಸ್ತರಣಾಕೇಂದ್ರ (ಡಿಪ್ಲೋಮ ಕೇಂದ್ರ)	ತೋಟಗಾರಿಕೆ (ಡಿಪ್ಲೋಮ)

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ

(ಕುಲಸಚಿವರ ಕಛೇರಿ : 08182-267011, ವೆಬ್‌ಸೈಟ್-www.uahs.edu.in)

ಕ್ರ.ಸಂ.	ಕಾಲೇಜಿನ ವಿಳಾಸ	ಕೋರ್ಸ್ ವಿವರ
01	ಡಿಪ್ಲೋಮ ಕಾಲೇಜು, ಬ್ರಹ್ಮಾವರ	ಡಿಪ್ಲೋಮಾ (ಕೃಷಿ)
02	ಡಿಪ್ಲೋಮ ಕಾಲೇಜು, ಕತ್ತಲಗೆರೆ	ಡಿಪ್ಲೋಮಾ (ಕೃಷಿ)

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬೀದರ್

(ಕುಲಸಚಿವರ ಕಛೇರಿ : 08482-245241, ವೆಬ್‌ಸೈಟ್-www.kvafsu.edu.in)

ಕ್ರ.ಸಂ.	ಕಾಲೇಜಿನ ವಿಳಾಸ	ಕೋರ್ಸ್ ವಿವರ
01	ಪಶುಸಂಗೋಪನಾ ಪಾಲಿಟೆಕ್ನಿಕ್, ಶಹಪುರ, ಯಾದಗಿರಿ	ಡಿಪ್ಲೋಮಾ (ಪಶು ಸಂಗೋಪನಾ)
02	ಪಶುಸಂಗೋಪನಾ ಪಾಲಿಟೆಕ್ನಿಕ್, ತುಮಕೂರು	ಡಿಪ್ಲೋಮಾ (ಪಶು ಸಂಗೋಪನಾ)
03	ಪಶುಸಂಗೋಪನಾ ಪಾಲಿಟೆಕ್ನಿಕ್, ಹಾಸನ	ಡಿಪ್ಲೋಮಾ (ಪಶು ಸಂಗೋಪನಾ)
04	ಪಶುಸಂಗೋಪನಾ ಪಾಲಿಟೆಕ್ನಿಕ್, ಹಾವೇರಿ	ಡಿಪ್ಲೋಮಾ (ಪಶು ಸಂಗೋಪನಾ)
05	ಪಶುಸಂಗೋಪನಾ ಪಾಲಿಟೆಕ್ನಿಕ್, ಚಾಮರಾಜನಗರ	ಡಿಪ್ಲೋಮಾ (ಪಶು ಸಂಗೋಪನಾ)

ಪ್ರಸ್ತುತ ಡಿಪ್ಲೋಮಾ(ಕೃಷಿ) ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿ.ಇ.ಟಿ)ಯ ಮೂಲಕ ಸ್ನಾತಕ ಪದವಿಗೆ ಪಾರ್ಶ್ವ ಪ್ರವೇಶ ನೀಡಲಾಗುತ್ತಿದೆ.

ಡಿಪ್ಲೋಮಾ (ಕೃಷಿ) ನಂತರದ ಅವಕಾಶಗಳು

ಡಿಪ್ಲೋಮಾ(ಕೃಷಿ) ಪ್ರಮಾಣಪತ್ರ ಪಡೆದ ವಿದ್ಯಾರ್ಥಿಗಳಿಗೆ ಖಾಸಗಿ ವಲಯದಲ್ಲಿ ಸಾಕಷ್ಟು ಅವಕಾಶಗಳಿವೆ. ಖಾಸಗಿ ಬೀಜಉತ್ಪಾದನಾ ಸಂಸ್ಥೆಗಳಲ್ಲಿ (Seed Production Org.) ನರ್ಸರಿ ಉದ್ಯಮದಲ್ಲಿ ಮೇಲ್ವಿಚಾರಕರಾಗಿ, ಸಕ್ಕರೆ ಕಾರ್ಖಾನೆ ಗಳಲ್ಲಿ ಕಬ್ಬು ಬೆಳೆ ಮೇಲ್ವಿಚಾರಕರಾಗಿ ಮತ್ತು ಹಲವಾರು ಕೃಷಿಗೆ ಸಂಬಂಧಿಸಿದ ಖಾಸಗಿ ಕಂಪನಿಗಳಲ್ಲಿ ಕ್ಷೇತ್ರ ಸಹಾಯಕರು (Field Assistants), ತಾಂತ್ರಿಕ ಸಲಹೆಗಾರರು (Technical Advisor), ಕ್ಷೇತ್ರಾಧಿಕಾರಿಗಳು (Field Officers), ಕ್ಷೇತ್ರ ಮೇಲ್ವಿಚಾರಕರು (Field Supervisors) ಕೃಷಿ ವ್ಯವಸ್ಥಾಪಕರು (Farm Manager), ಮಾರುಕಟ್ಟೆ ನಿರ್ವಾಹಕರು (Marketing Managers) ಆಗಿ ಕಾರ್ಯ ನಿರ್ವಹಿಸಬಹುದಾಗಿದೆ. ಇವುಗಳಲ್ಲದೆ, ಸ್ವಂತ ಉದ್ದಿಮೆಯನ್ನು ಕೂಡ ಮಾಡಬಹುದಾಗಿದೆ. ಕೃಷಿ ಪರಿಕರಗಳಾದ ಗೊಬ್ಬರ, ಔಷಧಿ, ಕೀಟನಾಶಕ ಹಾಗೂ ಕಳೆ ನಾಶಕ; ನೀರಾವರಿಗೆ ಸಂಬಂಧಿಸಿದ ಸಲಕರಣೆಗಳು, ಕೃಷಿ ಯಂತ್ರೋಪಕರಣಗಳ ಮಾರಾಟಗಾರರಾಗಿ, ವಿತರಕರಾಗಿ ಮತ್ತು ತಾಂತ್ರಿಕ ಸಲಹೆಗಾರರಾಗಿ ಕಾರ್ಯನಿರ್ವಹಿಸಬಹುದು. ●

ಕೃಷಿ ವಿಜ್ಞಾನ, ಏಪ್ರಿಲ್-ಜೂನ್, 2022, ಸಂಚಿಕೆ 46(2) / 8-12

ಕಾಚಕ್ಕಿ - ಪೌಷ್ಟಿಕ ಮಹತ್ವ ಹಾಗೂ ಮೌಲ್ಯವರ್ಧನೆ

ಡಿ. ಶೋಭ ಮತ್ತು ಎಂ. ಎಸ್. ಶ್ರೀದೇವಿ
ಕೊಯ್ಲೋತ್ತರ ತಂತ್ರಜ್ಞಾನ ಮತ್ತು ಇಂಜನಿಯರಿಂಗ್ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ., ಬೆಂಗಳೂರು-560065
e-Mail : shobhafsn@gmail.com Mob. : 96638 04293

ನಮ್ಮ ದೇಶದಲ್ಲಿ ಬೆಳೆಯುವ ಕಿರುಧಾನ್ಯಗಳಲ್ಲಿ ರಾಗಿ ಬೆಳೆಯ ವಿಸ್ತೀರ್ಣ ಮತ್ತು ಉತ್ಪಾದನೆಯಲ್ಲಿ ಮೂರನೇ ಸ್ಥಾನದಲ್ಲಿದೆ. ನಂತರ ಜೋಳ ಮತ್ತು ಸಜ್ಜೆ ನಾಲ್ಕನೇ ಸ್ಥಾನವನ್ನು ಆಕ್ರಮಿಸಿಕೊಂಡಿವೆ. ಎಳೆಯ ರಾಗಿಯನ್ನು ತರಕಾರಿಯಂತೆ ಉಪಯೋಗಿಸಬಹುದು. ಇದನ್ನು ಸಾಂಪ್ರದಾಯಕವಾಗಿ ಕಾಚಕ್ಕಿ / ತೆನಕ್ಕಿ ಎಂದು ಕರೆಯಲಾಗುತ್ತದೆ. ಈ ಕಾಚಕ್ಕಿಯು, ರಾಗಿ ಬೆಳೆ ಬಿತ್ತಿದ 14 ವಾರಗಳ ನಂತರ ಕಟಾವಿಗೆ ಬರುತ್ತದೆ. ಅಂದರೆ ಹಾಲು ತುಂಬಿದ ಹಂತದಲ್ಲಿ ತೆನೆಗಳನ್ನು ಕಟಾವು ಮಾಡಿ ತೆಗೆಯುವುದರಿಂದ ತಾಜಾ ಹಸಿರು ಕಾಚಕ್ಕಿ ಹಾಗೂ ದನಕರುಗಳಿಗೆ ತಾಜಾ ಹಸಿಮೇವು ಸಹ ದೊರಕುತ್ತದೆ.

ಕಾಚಕ್ಕಿ ತೆನೆ

ಒಣ ರಾಗಿಗೆ ಹೋಲಿಸಿದಾಗ ಹಸಿರಾಗಿಯು ಬೇಗನೆ ಕಟಾವಿಗೆ ಬರುವುದರಿಂದ ಒಣರಾಗಿ ಬೇಸಾಯಕ್ಕೆ ತೆಗೆದುಕೊಳ್ಳುವ ಸಮಯ ಉಳಿಸಬಹುದಲ್ಲದೆ ಹೆಚ್ಚಿನ ಲಾಭವನ್ನೂ ಸಹ ಗಳಿಸಬಹುದು. ಕಾಚಕ್ಕಿಯು ಉತ್ತಮವಾದ ನೋಟ, ಬಣ್ಣ ಮತ್ತು ಸಿಹಿಯಾಗಿರುವುದಲ್ಲದೆ ನಯವಾಗಿದ್ದು, ಬಲಿತ ಒಣರಾಗಿಯಷ್ಟೇ ಸಮನಾದ ಪೌಷ್ಟಿಕತೆ (ಕೋಷ್ಟಕ 1) ಹೊಂದಿದ್ದು, ತಿನ್ನಲು ರುಚಿಯಾಗಿ ಸುವಾಸನೆಯಿಂದ ಕೂಡಿರುತ್ತದೆ. ಕಾಚಕ್ಕಿಯನ್ನು ಬಲಿತ ಒಣರಾಗಿಗೆ ಹೋಲಿಸಿದಾಗ, ಕಾಚಕ್ಕಿಯಲ್ಲಿ ಸುಲಭವಾಗಿ ಜೀರ್ಣವಾಗಬಲ್ಲ ನಾರು ಮತ್ತು ಮಿಟಮಿನ್ 'ಸಿ' ಅನ್ನಾಂಗ ಹಾಗೂ ತೇವಾಂಶ ಹೇರಳವಾಗಿದ್ದು ಉಳಿದೆಲ್ಲ ಪೌಷ್ಟಿಕಾಂಶಗಳು ಹೆಚ್ಚು ಕಡಿಮೆ ಒಂದೇ ಪ್ರಮಾಣದಲ್ಲಿ ಇರುವುದು ಕಂಡುಬಂದಿದೆ.

ತಾಜಾ ಕಾಚಕ್ಕಿಯಿಂದ ಬಗೆ ಬಗೆಯ ತಿಂಡಿಗಳನ್ನು ತಯಾರಿಸಬಹುದಾಗಿದ್ದು, ಬಲಿತ ಕೆಂಪು ಅಥವಾ ಕಂದು ಬಣ್ಣದ ರಾಗಿಯನ್ನು ಇಷ್ಟಪಡದ ಗ್ರಾಹಕರು ಎಳೆಯ ಹಸಿರು ಕಾಚಕ್ಕಿಯನ್ನು ಹೆಚ್ಚಿಗೆ ಬಳಸಬಹುದು. ಬಲಿತ ರಾಗಿಯಂತೆ ಎಳೆ ರಾಗಿಯಲ್ಲಿಯೂ ಸಹ ಮುಖ್ಯವಾಗಿ ಸಸಾರಜನಕ, ಪಿಷ್ಟ ಪದಾರ್ಥ, ನಾರು ಹಾಗೂ ಮಿಟಮಿನ್ 'ಸಿ' ಅನ್ನಾಂಗ ಹೇರಳವಾಗಿರುವುದಲ್ಲದೆ ಸಸ್ಯರಾಸಾನಿಯವಾದ ಟ್ಯಾನಿನ್ ಅಂಶವು ಅತೀ ಕಡಿಮೆ ಪ್ರಮಾಣದಲ್ಲಿವೆ. ಕಾಚಕ್ಕಿಯಲ್ಲಿ ನೀರಿನಾಂಶ ಹೆಚ್ಚಾಗಿದ್ದು, ಮೆತ್ತನೆಯ ನಾರಿನಿಂದ ಕೂಡಿರುವುದರಿಂದ ಇದು ಸುಲಭವಾಗಿ ಜೀರ್ಣವಾಗುತ್ತದೆ.

ಕೋಷ್ಟಕ 1 : ಕಾಚಕ್ಕಿಯ (ಎಳೆಯರಾಗಿ) ಪೌಷ್ಟಿಕತೆ ಬಲಿತ ಒಣರಾಗಿಗೆ ಹೋಲಿಸಿದಾಗ (ಪ್ರತಿ 100ಗ್ರಾಂ ನಲ್ಲಿ)

ಪೌಷ್ಟಿಕಾಂಶ	ಕಾಚಕ್ಕಿ	ಬಲಿತ ಒಣ ರಾಗಿ
ತೇವಾಂಶ (%)	52.00	13.00
ಸಸಾರಜನಕ (ಗ್ರಾಂ)	7.00	7.30
ಕೊಬ್ಬು (ಗ್ರಾಂ)	1.50	1.30
ಖನಿಜಾಂಶ (ಗ್ರಾಂ)	3.00	2.70
ನಾರು (ಗ್ರಾಂ)	3.00	3.60
ಶರ್ಕರ ಪಿಷ್ಟ (ಗ್ರಾಂ)	85.50	85.00
ಕ್ಯಾಲೋರಿ	340	358
ಸುಣ್ಣ (ಮಿ.ಗ್ರಾಂ)	305	344
ರಂಜಕ (ಮಿ.ಗ್ರಾಂ)	128	283
ಕಬ್ಬಿಣ (ಮಿ.ಗ್ರಾಂ)	1.50	3.90
ಮೆಗ್ನೀಷಿಯಂ (ಮಿ.ಗ್ರಾಂ)	292	137
ಸತು (ಮಿ.ಗ್ರಾಂ)	–	2.30
ವಿಟಮಿನ್-'ಸಿ'ಅನ್ನಾಂಗ(ಮಿ.ಗ್ರಾಂ)	9.50	–

ಕಾಚಕ್ಕಿಯ (ಎಳೆರಾಗಿ) ಪ್ರಾಮುಖ್ಯತೆ

ರಾಗಿಯನ್ನು ತರಕಾರಿಯಂತೆ ಹಸಿಯಾಗಿರುವಾಗಲೇ ಕೊಯ್ಲು ಮಾಡಿ, ಸಂಸ್ಕರಿಸಿ, ವಿವಿಧ ತಿಂಡಿ ತಿನಿಸುಗಳನ್ನು ತಯಾರಿಸಿ

ಕೊಂಡಲ್ಲಿ ರಾಗಿಯ ಉಪಯೋಗ ಹೆಚ್ಚುವುದಲ್ಲದೆ, ರಾಗಿ ಬೆಳೆಯುವ ವಿಸ್ತೀರ್ಣವನ್ನೂ ಸಹ ಹೆಚ್ಚಿಸಬಹುದಾಗಿದೆ. ರಾಗಿಯನ್ನು ಕಾಚಕ್ಕಿ ಹಂತದಲ್ಲೇ ಕಟಾವು ಮಾಡುವುದರಿಂದ ಇದರ ಬೇಸಾಯದಲ್ಲಿ ತೆಗೆದುಕೊಳ್ಳುವ ಒಂದೆರಡು ವಾರದ ಸಮಯವನ್ನು ಉಳಿಸಬಹುದಲ್ಲದೆ, ಮಳೆ ಮತ್ತು ಗಾಳಿಯಿಂದ ತೆನೆಗಳು ನೆಲಕ್ಕೆ ಬಿದ್ದು, ಕಾಳು ಉದುರಿ ಪೋಲಾಗುವುದನ್ನು ಸಹಾ ತಡೆಯಬಹುದಾಗಿದೆ. ಎಳೆಯ ರಾಗಿಯಿಂದ ಮಾಡಿದ ಪದಾರ್ಥಗಳು ಹೆಚ್ಚಿನ ಮೌಲ್ಯಭರಿತವಾಗಿರುತ್ತವೆ ಹಾಗೂ ರೈತರು ಇದನ್ನು ಒಣಬೇಸಾಯ ಪದ್ಧತಿಯಲ್ಲಿ ಬೆಳೆಯುವುದರಿಂದ ಇನ್ನೂ ಹೆಚ್ಚಿನ ಲಾಭ ಪಡೆಯಬಹುದಾಗಿದೆ.

ಕಾಚಕ್ಕಿಯನ್ನು ರಾಗಿ ಬಿತ್ತಿದ 14 ವಾರಗಳ ನಂತರ ತೆನೆಗಳನ್ನು ಕೊಯ್ಲು ಮಾಡಿ (ಚಿತ್ರ 1), ತೆನೆಗಳನ್ನು ಉರಿಯುವ ಬೆಂಕಿ ಅಥವಾ ಕೆಂಡದ ಮೇಲೆ ಸುಡುವುದರಿಂದ ಅಥವಾ ಹಬೆಯಲ್ಲಿ ಬೇಯಿಸುವುದರಿಂದ ಅಥವಾ ಬಿಸಿನೀರಿನಲ್ಲಿ ಅದ್ದಿ ತೆಗೆಯುವುದರಿಂದ ಕಾಳನ್ನು ಸಲೀಸಾಗಿ ಬೇರ್ಪಡಿಸಿ ತಿನ್ನಲು ಬೇಕಾದ ಪದಾರ್ಥಗಳನ್ನು ಮಾಡಿಕೊಳ್ಳಬಹುದಾಗಿದೆ.

ತಾಜಾ ಹಸಿರಾಗಿ ತೆನೆಗಳು

↓

1–1½ ನಿಮಿಷ ಬೆಂಕಿಯ ಜ್ವಾಲೆಯಲ್ಲಿ ಸುಡಬೇಕು

↓

ತೆನೆ ಬಿಸಿ ಇರುವಾಗಲೇ ಕೈಯಲ್ಲಿ ಉಜ್ಜಿ ಕಾಚಕ್ಕಿಯನ್ನು ಬೇರ್ಪಡಿಸಿಕೊಳ್ಳುವುದು

↓

ಕೇರಿ ಸ್ವಚ್ಛಗೊಳಿಸುವುದು

↓

ನೀರಿನಲ್ಲಿ ತೊಳೆಯುವುದು

↓

ಗಾಳಿಯಲ್ಲಿ ಸ್ವಲ್ಪ ಸಮಯ ಒಣಗಿಸುವುದು (ಮೇಲ್ಮೈ ತೇವಾಂಶ ಒಣಗುವವರೆಗೆ)

↓

ತಾಜಾ ಕಾಚಕ್ಕಿಯನ್ನು ಹಾಗೇ ತಿನ್ನಬಹುದು ಅಥವಾ ರುಚಿಯಾದ ತಿಂಡಿ–ತಿನಿಸುಗಳನ್ನು ತಯಾರಿಸಿಕೊಳ್ಳಬಹುದು

↓

200 ಗೇಜ್ ಪಾಲಿಥೀನ್ ಚೀಲಗಳಲ್ಲಿ ತುಂಬಿ, ಸೀಲ್ ಮಾಡಿ 8–10 ದಿನಗಳ ಕಾಲ ಶೀತಲ ಪೆಟ್ಟಿಗೆಯಲ್ಲಿ ಶೇಖರಿಸುವುದು

↓

ಮಾರಾಟ

ಚಿತ್ರ : 1. ಕಾಚಕ್ಕಿಯ ಸಂಸ್ಕರಣಾ ರೇಖಾಪಟ್ಟಿ

ಸಾಮಾನ್ಯವಾಗಿ ಹಳ್ಳಿಗಳಲ್ಲಿ ಇಂತಹ ಹಸಿರಾಗಿ ತೆನೆಗಳನ್ನು ತಂದು ಬೆಂಕಿಯಲ್ಲಿ ಸ್ವಲ್ಪ ಸುಟ್ಟು, ಕೈಯಲ್ಲಿ ಉಜ್ಜಿ ಹಸಿರಾಗಿಯನ್ನು ಸುಲಭವಾಗಿ ಬೇರ್ಪಡಿಸಿ ಇದಕ್ಕೆ ಉಪ್ಪು, ಮೆಣಸಿನಕಾಯಿ, ಬೆಳ್ಳುಳ್ಳಿ ಮತ್ತು ಕೊತ್ತಂಬರಿ ಸೇರಿಸಿ ಮಿಶ್ರ ಮಾಡಿ ಸೇವಿಸುತ್ತಾರೆ ಅಥವಾ ಬೆಲ್ಲ, ತುರಿದ ತೆಂಗಿನಕಾಯಿ ಮತ್ತು ಸ್ವಲ್ಪ ಏಲಕ್ಕಿ ಪುಡಿ ಸೇರಿಸಿ ತಿನ್ನುವುದುಂಟು. ಕಾಚಕ್ಕಿಯಿಂದ ತಯಾರಿಸಬಹುದಾದ ಸರಳ ಅಡುಗೆ / ತಿಂಡಿ–ತಿನಿಸುಗಳಲ್ಲಿ ಕೆಲವುಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಕಾಚಕ್ಕಿಯನ್ನು ಬೇಯಿಸಿ ತಯಾರಿಸುವ ತಿಂಡಿಗಳು

ಕಾಚಕ್ಕಿ ಉಸಲಿ (ಖಾರ)

ಬೇಕಾಗುವ ಪದಾರ್ಥಗಳು	*ಪ್ರಮಾಣ*
ಕಾಚಕ್ಕಿ	1 ಕಪ್
ಹೆಚ್ಚಿದ ಈರುಳ್ಳಿ	1 (ದೊಡ್ಡದು)
ಮೆಣಸಿನಕಾಯಿ	2–3
ಸಾಸಿವೆ	1 ಟಿ ಚಮಚ
ಕರಿಬೇವು	ಎರೆಡು ಎಸಲು
ಎಣ್ಣೆ	ಒಗ್ಗರಣೆಗೆ
ಹಸಿ ಕೊಬ್ಬರಿ ತುರಿ	ಸ್ವಲ್ಪ
ನಿಂಬೆರಸ	ಸ್ವಲ್ಪ
ಉಪ್ಪು	ರುಚಿಗೆ ತಕ್ಕಷ್ಟು

ತಯಾರಿಸುವ ವಿಧಾನ : ಸ್ವಚ್ಛವಾದ ಕಾಚಕ್ಕಿಯನ್ನು ನೀರಿಗೆ ಹಾಕಿ, ಚಿಟಿಕೆ ಉಪ್ಪು ಸೇರಿಸಿ 10–15 ನಿಮಿಷ ಬೇಯಿಸುವುದು. ನಂತರ ನೀರು ಬಸಿದು, ಸಾಸಿವೆ, ಕರಿಬೇವು, ಮೆಣಸಿನಕಾಯಿ, ಈರುಳ್ಳಿ ಹಾಕಿ ಒಗ್ಗರಣೆ ಮಾಡಿ, ಬೇಯಿಸಿದ ಕಾಚ್ಚಕ್ಕಿ ಬೇರೆಸುವುದು, ಕೊನೆಯಲ್ಲಿ ಹಸಿ ಕೊಬ್ಬರಿ ತುರಿ ಮತ್ತು ನಿಂಬೆರಸ ಹಾಕಿ ಬೇರೆಸುವುದು.

ಕಾಚಕ್ಕಿ ಉಸಲಿ (ಸಿಹಿ)

ಬೇಕಾಗುವ ಪದಾರ್ಥಗಳು	*ಪ್ರಮಾಣ*
ಕಾಚಕ್ಕಿ	1 ಕಪ್
ಹಸಿ ಕೊಬ್ಬರಿ ತುರಿ	ಸ್ವಲ್ಪ
ಏಲಕ್ಕಿ	ಸ್ವಲ್ಪ
ತುರಿದ ಬೆಲ್ಲ	1/2 ಕಪ್

ತಯಾರಿಸುವ ವಿಧಾನ : ಸ್ವಚ್ಛವಾದ ಕಾಚಕ್ಕಿಯನ್ನು ನೀರಿಗೆ ಹಾಕಿ, ಚಿಟಿಕೆ ಉಪ್ಪು ಸೇರಿಸಿ 10–15 ನಿಮಿಷ ಬೇಯಿಸುವುದು. ನಂತರ ಬೇಯಿಸಿದ ಕಾಚಕ್ಕಿಗೆ ತುರಿದ ಹಸಿ ಕೊಬ್ಬರಿ ಹಾಗೂ ಬೆಲ್ಲದ ಪುಡಿ ಬೇರಿಸಿ, ಚಿಟಿಕೆ ಏಲಕ್ಕಿ ಪುಡಿ ಸೇರಿಸಿ ಸೇವಿಸುವುದು.

ಕಾಚಕ್ಕಿ ಸೂಪ್

ಬೇಕಾಗುವ ಪದಾರ್ಥಗಳು	*ಪ್ರಮಾಣ*
ಕಾಚಕ್ಕಿ	1/4 ಕಪ್
ಕ್ಯಾರೆಟ್ (ಕತ್ತರಿಸಿದ)	1/4 ಕಪ್
ತೊಗರಿಬೇಳೆ	1/4 ಕಪ್
ನಿಂಬೆರಸ	1 ಟಿ ಚಮಚ
ಕರಿಮೆಣಸಿನಪುಡಿ	ಚಿಟಿಕಿ
ಉಪ್ಪು	ರುಚಿಗೆ ತಕ್ಕಷ್ಟು

ತಯಾರಿಸುವ ವಿಧಾನ : ಕ್ಯಾರೆಟ್, ತೊಗರಿಬೇಳೆ ಮತ್ತು ಕಾಚಕ್ಕಿಯನ್ನು ನೀರಿನಲ್ಲಿ ತೊಳೆದು 3 ಕಪ್ ನೀರು ಸೇರಿಸಿ ಚೆನ್ನಾಗಿ ಬೇಯಿಸಿ. ನಂತರ ನುಣ್ಣಗೆ ಮಸೆದು ಸೋಸಿಕೊಳ್ಳಿ ತಿಳಿಯಾದ ರಸಕ್ಕೆ ರುಚಿಗೆ ಬೇಕಾಗುವಷ್ಟು ಉಪ್ಪು ಕರಿಮೆಣಸಿನ ಪುಡಿ ಮತ್ತು ನಿಂಬೆ ರಸವನ್ನು ಸೇರಿಸಿ ಬಿಸಿಬಿಸಿಯಾಗಿ ಕುಡಿಯಲು ಕೊಡಿ.

ಕಾಚಕ್ಕಿ ರವೆ ಉಪ್ಪಿಟ್ಟು

ಬೇಕಾಗುವ ಪದಾರ್ಥಗಳು	*ಪ್ರಮಾಣ*
ಕಾಚಕ್ಕಿ	1/2 ಕಪ್
ರವೆ	1/2 ಕಪ್
ಎಣ್ಣೆ	3 ಟೇಬಲ್ ಚಮಚ
ಈರುಳ್ಳಿ	1/4 ಕಪ್
ಉದ್ದಿನ ಬೇಳೆ	2 ಟೀ ಚಮಚ
ಹಸಿಮೆಣಸಿನಕಾಯಿ	6
ಸಾಸಿವೆ	1/2 ಟೀ ಚಮಚ
ಕರಿಬೇವಿನಸೊಪ್ಪು	1 ಗರಿ
ಕೊಬ್ಬರಿ ತುರಿ	1/4 ಕಪ್
ಉಪ್ಪು	ರುಚಿಗೆ ತಕ್ಕಷ್ಟು
ಅರಿಶಿನ ಪುಡಿ	1/4 ಟೀ ಚಮಚ

ತಯಾರಿಸುವ ವಿಧಾನ : ಬಾಣಲೆಯಲ್ಲಿ ಎಣ್ಣೆ ಕಾಯಿಸಿ, ಸಾಸಿವೆ ಹಾಕಿ ನಂತರ ಕರಿಬೇವು, ಉದ್ದಿನಬೇಳೆ, ಈರುಳ್ಳಿ ಮೆಣಸಿನಕಾಯಿ ಮತ್ತು ಕಾಚಕ್ಕಿ ಸೇರಿಸಿ ಒಗ್ಗರಣೆ ಮಾಡಿ. ಇದಕ್ಕೆ ನೀರು, ಕೊಬ್ಬರಿತುರಿ ಮತ್ತು ಉಪ್ಪನ್ನು ಸೇರಿಸಿ. ನೀರು ಕುದಿಯುವಾಗ ರವೆ (ಪ್ರತ್ಯೇಕವಾಗಿ ಹುರಿದ ರವೆ) ಸುರಿದು ಚೆನ್ನಾಗಿ ಕಲಸಿ ಸ್ವಲ್ಪ ಸಮಯ ಕಡಿಮೆ ಶಾಖದಲ್ಲಿ ಬೇಯಿಸಿ, ಬಿಸಿಬಿಸಿಯಾಗಿ ತಿನ್ನಲು ಬಡಿಸಿ.

ಕಾಚಕ್ಕಿ ತರಕಾರಿ ಪಲ್ಯೆ

ಬೇಕಾಗುವ ಪದಾರ್ಥಗಳು	*ಪ್ರಮಾಣ*
ಕಾಚಕ್ಕಿ	1/2 ಕಪ್
ಬಟಾಣಿ	1/2 ಕಪ್
ಆಲೂಗಡ್ಡೆ ತುಂಡುಗಳು	1 ಕಪ್
ಉಪ್ಪು	ರುಚಿಗೆ ತಕ್ಕಷ್ಟು
ಒಗ್ಗರಣೆಗೆ	
ಎಣ್ಣೆ	1 ಟೇಬಲ್ ಚಮಚ
ಕರಿಬೇವು	1 ಎಸಳು
ಹುರಿಗಡಲೆ	1 ಟಿ ಚಮಚ
ಸಾಸಿವೆ	1/4 ಟಿ ಚಮಚ
ಅರಿಶಿನದ ಪುಡಿ	1/4 ಟಿ ಚಮಚ
ಕತ್ತರಿಸಿದ ಕೆಂಪು ಮೆಣಸಿನಕಾಯಿ	1/4 ಟಿ ಚಮಚ
ಕತ್ತರಿಸಿದ ಈರುಳ್ಳಿ	1/2 ಬಟ್ಟಲು
ಕತ್ತರಿಸಿದ ಕೊತ್ತಂಬರಿ	1/2 ಟಿ ಚಮಚ
ನಿಂಬೆರಸ	1 ಟಿ ಚಮಚ

ತಯಾರಿಸುವ ವಿಧಾನ : ಬಟಾಣಿ ಮತ್ತು ಕಾಚಕ್ಕಿಯನ್ನು ರುಚಿಗೆ ತಕ್ಕಷ್ಟು ಉಪ್ಪಿನ ಜೊತೆ ಪ್ರತ್ಯೇಕವಾಗಿ ಬೇಯಿಸಿಕೊಳ್ಳಿ. ನಂತರ ಆಲೂಗಡ್ಡೆ ಬೇಯಿಸಿ ಸಿಪ್ಪೆ ತೆಗೆದು ಹುಡಿಮಾಡಿಕೊಳ್ಳಿ, ಒಗ್ಗರಣೆಯ ಪದಾರ್ಥಗಳೊಂದಿಗೆ ಪಲ್ಯವನ್ನು ಒಗ್ಗರಣೆಗೆ

ಹಾಕಿ. ಬಟಾಣಿ, ಆಲೂಗಡ್ಡೆ ಹುಡಿ ಮತ್ತು ಕಾಚಕ್ಕಿಯನ್ನು ಸೇರಿಸಿ. ರುಚಿಗೆ ನಿಂಬೆ ರಸ ಸೇರಿಸಿ ಚೆನ್ನಾಗಿ ಬೆರೆಸಿ ತಿನ್ನಲು ಬಡಿಸಿ.

ಕಾಚಕ್ಕಿ ಪಲಾವ್

ಬೇಕಾಗುವ ಪದಾರ್ಥಗಳು	*ಪ್ರಮಾಣ*
ಕಾಚಕ್ಕಿ	$^1/_2$ ಕಪ್
ಅಕ್ಕಿ (ಅರ್ಧ ಹುರಿದ)	$^1/_2$ ಕಪ್
ಕತ್ತರಿಸಿದ ಆಲೂಗಡ್ಡೆ	$^1/_4$ ಕಪ್
ಕತ್ತರಿಸಿದ ಕ್ಯಾರೆಟ್ ಕಪ್	$^1/_4$ ಕಪ್
ಕತ್ತರಿಸಿದ ಟೊಮ್ಯಾಟೋ	$^1/_4$ ಕಪ್
ಮೆಂತ್ಯದ ಎಲೆ	$^1/_4$ ಕಪ್
ಕತ್ತರಿಸಿದ ಹೂಕೋಸು	$^1/_4$ ಕಪ್
ಬಟಾಣಿ	$^1/_4$ ಕಪ್
ತೆಂಗಿನ ಹಾಲು	1 ಕಪ್
ಉಪ್ಪು	ರುಚಿಗೆ ತಕ್ಕಷ್ಟು
ಮಸಾಲೆ ರುಬ್ಬಿಕೊಳ್ಳಲು	
ಟೊಮ್ಯಾಟೋ :	1 ಹಣ್ಣು
ಕತ್ತರಿಸಿದ ಈರುಳ್ಳಿ	1 ದೊಡ್ಡದು
ಲವಂಗ	2
ಬೆಳ್ಳುಳ್ಳಿ	6 ಎಸಳು
ದಾಲ್ಚಿನ್ನಿ	$^1/_2$ ಇಂಚು
ಧನಿಯಾಪುಡಿ	1 ಟೀ ಚಮಚ
ಕೊಬ್ಬರಿತುರಿ	3 ಟೇಬಲ್ ಚಮಚ
ಅರಿಶಿನದಪುಡಿ	$^1/_4$ ಟೀ ಚಮಚ
ಶುಂಠಿ	$^1/_2$ ಇಂಚು
ಕೆಂಪು ಮೆಣಸಿನಕಾಯಿ (ಹುರಿದ)	$^1/_2$ ಟಿ ಚಮಚ
ಒಗ್ಗರಣೆಗೆ	
ಈರುಳ್ಳಿ	ಮಧ್ಯಮ ಗಾತ್ರದ್ದು
ಎಣ್ಣೆ	3 ಟೇಬಲ್ ಚಮಚ

ತಯಾರಿಸುವ ವಿಧಾನ : ಈರುಳ್ಳಿ ಕತ್ತರಿಸಿ ಎಣ್ಣೆಯಲ್ಲಿ ಒಗ್ಗರಣೆ ಹಾಕಿ. ಇದಕ್ಕೆ ತರಕಾರಿಗಳು ಮತ್ತು ಕಾಚಕ್ಕಿಯನ್ನು ಸೇರಿಸಿ ಸ್ವಲ್ಪ ನೀರು ಸುರಿದು 5 ನಿಮಿಷ ಕುದಿಸಿ, ನಂತರ ರುಬ್ಬಿದ ಮಸಾಲೆ, 2 ಕಪ್ ನೀರು, ಕೊಬ್ಬರಿತುರಿ, ಹುರಿದ ಅಕ್ಕಿ ಮತ್ತು ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ತಟ್ಟೆ ಮುಚ್ಚಿ 5 ನಿಮಿಷ ಸಣ್ಣ ಉರಿಯಲ್ಲಿ ಬೇಯಿಸಿ.

ಕಾಚಕ್ಕಿಯ ಬಸ್ಸಾರು

ಬೇಕಾಗುವ ಪದಾರ್ಥಗಳು	*ಪ್ರಮಾಣ*
ಕಾಚಕ್ಕಿ	$^1/_2$ ಕಪ್
ತೊಗರಿ ಬೇಳೆ	$^1/_4$ ಕಪ್
ಮಸಾಲೆಗೆ	
ಈರುಳ್ಳಿ	$^1/_2$ ಕಪ್
ಬೆಳ್ಳುಳ್ಳಿ	1 ಎಸಳು
ಕರಿ ಮೆಣಸು	$^1/_4$ ಟೀ ಚಮಚ
ಮೆಂತ್ಯ	$^1/_4$ ಟೀ ಚಮಚ,
ಹುಣಸೆ ಹಣ್ಣು	1 ಗೋಲಿ ಗಾತ್ರದ್ದು,
ಮೆಣಸಿನಕಾಯಿ ಮತ್ತು ದನಿಯಾ ಪುಡಿ	$1^1/_2$ ಟೀ ಚಮಚ
ಹರಿಶಿನದ ಪುಡಿ	$^1/_4$ ಟೀ ಚಮಚ
ಜೀರಿಗೆ	$^1/_4$ ಟೀ ಚಮಚ,
ಕೊತ್ತಂಬರಿ ಸೊಪ್ಪು	1 ಟೇಬಲ್ ಚಮಚ
ಎಣ್ಣೆ	1 ಟೇಬಲ್ ಚಮಚ,
ಉಪ್ಪು	ರುಚಿಗೆ ತಕ್ಕಷ್ಟು

ತಯಾರಿಸುವ ವಿಧಾನ : ಸಾಕಷ್ಟು ನೀರಿನಲ್ಲಿ ಬೇಳೆ ಅರ್ಧ ಬೆಂದ ನಂತರ ಇದಕ್ಕೆ ಕಾಚಕ್ಕಿ ಮತ್ತು ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ಚೆನ್ನಾಗಿ ಬೇಯಿಸಿ. ನಂತರ ನೀರನ್ನು ಬೇರೆ ಪಾತ್ರೆಗೆ ಬಸಿದುಕೊಳ್ಳಿ. ಮಸಾಲೆಯನ್ನು ಚೆನ್ನಾಗಿ ರುಬ್ಬಿಕೊಂಡು ಹುಣಸೆ ಹಣ್ಣಿನರಸ ಸೇರಿಸಿ ಒಗ್ಗರಣೆ ಮಾಡಿಕೊಂಡು ಇದಕ್ಕೆ ಬೇಳೆ ಮತ್ತು ಕಾಚಕ್ಕಿ ಬೇಯಿಸಿದ ನೀರು ಸೇರಿಸಿ. ಈ ಸಾರನ್ನು ಸ್ವಲ್ಪ ಸಮಯ ಕುದಿಸಿ ಇಳಿಸಿ. ಬೇಯಿಸಿದ ಬೇಳೆ ಮತ್ತು ಕಾಚಕ್ಕಿಯನ್ನು ಈರುಳ್ಳಿಯೊಂದಿಗೆ ಒಗ್ಗರಣೆ ಮಾಡಿಕೊಂಡು ಸಾರಿನ ಜೊತೆ ಊಟಕ್ಕೆ ಬಡಿಸಿ.

ಕಾಚಕ್ಕಿ ಉಸಲಿ (ಖಾರ)

ಕಾಚಕ್ಕಿ ಉಸಲಿ (ಸಿಹಿ)

ಕಾಚಕ್ಕಿ ಪಲಾವ್

ಕಾಚಕ್ಕಿಯ ಬಸ್ಸಾರು

ಕಾಚಕ್ಕಿ ಸೂಪ್

ಕಾಚಕ್ಕಿ ರವೆ ಉಪ್ಪಿಟ್ಟು

ಕಾಚಕ್ಕಿ ರೊಟ್ಟಿ

ಕಾಚಕ್ಕಿ ಚಟ್ನಿ

ಕಾಚಕ್ಕಿಯನ್ನು ಹುರಿದು ತಯಾರಿಸುವ ತಿಂಡಿಗಳು

ಕಾಚಕ್ಕಿ ರೊಟ್ಟಿ

ಬೇಕಾಗುವ ಪದಾರ್ಥಗಳು	*ಪ್ರಮಾಣ*
ಕಾಚಕ್ಕಿ	1 ಕಪ್
ಅಕ್ಕಿ ಹಿಟ್ಟು	$1^3/_4$ ಕಪ್
ಕತ್ತರಿಸಿದ ಈರುಳ್ಳಿ	$^1/_4$ ಕಪ್
ಜೀರಿಗೆ	$^1/_2$ ಟೀ ಚಮಚ
ಹಸಿಮೆಣಸಿನಕಾಯಿ	5
ಕೊಬ್ಬರಿತುರಿ	$^1/_4$ ಕಪ್
ಕರಿಬೇವು (ಸಣ್ಣದಾಗಿ ಕತ್ತರಿಸಿದ)	1 ಟೇಬಲ್ ಚಮಚ
ಬೆಣ್ಣೆ	1 ಟೇಬಲ್ ಚಮಚ,
ಉಪ್ಪು	ರುಚಿಗೆ ತಕ್ಕಷ್ಟು

ತಯಾರಿಸುವ ವಿಧಾನ : ಕಾಚಕ್ಕಿ ಉಬ್ಬಿ ಒಡೆಯುವವರೆಗೂ ಹುರಿದುಕೊಳ್ಳಿ. ನಂತರ ಎಲ್ಲ ಪದಾರ್ಥಗಳನ್ನು ಸೇರಿಸಿ. ಒಗ್ಗರಣೆಗೆ ಹಾಕಿ, ಇದಕ್ಕೆ ಬೇಕಾಗುವಷ್ಟು ನೀರು ಸೇರಿಸಿ ಹದವಾದ ಹಿಟ್ಟಿನ ಮುದ್ದೆ ತಯಾರಿಸಿ. ಕಾವಲಿ ಕಾಯಿಸಿ ರೊಟ್ಟಿ ತಟ್ಟಿ ಇದರ ಮೇಲೆ ಬೆಣ್ಣೆ ಸವರಿ 5-7 ನಿಮಿಷ ಬೇಯಿಸಿ ಬಿಸಿ ಬಿಸಿಯಾಗಿ ತಿನ್ನಲು ಬಡಿಸಿ.

ಕಾಚಕ್ಕಿ ಚಟ್ನಿ

ಬೇಕಾಗುವ ಪದಾರ್ಥಗಳು	*ಪ್ರಮಾಣ*
ಕಾಚಕ್ಕಿ	1 ಕಪ್
ಕೊಬ್ಬರಿತುರಿ	$^1/_4$ ಕಪ್
ಹಸಿಮೆಣಸಿನಕಾಯಿ	6
ಹುಣಸೆಹಣ್ಣು	1 ಗೋಲಿಯಷ್ಟು
ಹುರಿಗಡಲೆ	1 ಟೀ ಚಮಚ
ಪುದೀನ ಎಲೆ	1 ಟೀ ಚಮಚ
ಉದ್ದಿನ ಬೇಳೆ	1 ಟೀ ಚಮಚ
ಕತ್ತರಿಸಿದ ಕೊತ್ತಂಬರಿ ಸೊಪ್ಪು	1 ಟೀ ಚಮಚ
ಸಾಸಿವೆ	1 ಟೀ ಚಮಚ
ಬೆಳ್ಳುಳ್ಳಿ 2 ಎಸಳು; ಎಣ್ಣೆ	ಒಗ್ಗರಣೆಗೆ
ಕೆಂಪು ಮೆಣಸಿನಕಾಯಿ	3

ತಯಾರಿಸುವ ವಿಧಾನ : ಕಾಚಕ್ಕಿ, ಕೊಬ್ಬರಿತುರಿ, ಹಸಿ ಮೆಣಸಿನಕಾಯಿ, ಹುರಿಗಡಲೆ ಮತ್ತು ಬೆಳ್ಳುಳ್ಳಿಯನ್ನು ಎಣ್ಣೆಯಲ್ಲಿ ಸ್ವಲ್ಪ ಕರಿಯಿರಿ. ಇದಕ್ಕೆ ಪುದೀನ, ಹುಣಸೆಹಣ್ಣು ಸೇರಿಸಿ ಚೆನ್ನಾಗಿ ರುಬ್ಬಿಕೊಳ್ಳಿ, ನಂತರ ಸಾಸಿವೆ, ಕೆಂಪು ಮೆಣಸಿನಕಾಯಿ ಉದ್ದಿನಬೇಳೆ ಸೇರಿಸಿ ಒಗ್ಗರಣೆ ತಾಯರಿಸಿ ರುಬ್ಬಿದ ಮಿಶ್ರಣಕ್ಕೆ ಹಾಕಿ. ತುರಿದ ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿ, ಬಿಸಿ ಬಿಸಿ ರೊಟ್ಟಿ ಅಥವಾ ದೋಸೆಗೆ ಹಾಕಿ ತಿನ್ನಲು ಬಡಿಸಿ. ●

ಕೃಷಿ ವಿಜ್ಞಾನ, ಏಪ್ರಿಲ್–ಜೂನ್, 2022, ಸಂಚಿಕೆ 46(2) / 13–17

ಅಸಹಜತೆಯ ಉತ್ತುಂಗದಲ್ಲಿ ಸಹಜ ಕೃಷಿಯ ಕೂಗು : ಅವಲೋಕನ ಮತ್ತು ನಿರೀಕ್ಷೆಗಳು

ಅರ್. ಮೋಹನ್ ಕುಮಾರ್, ಯಮನೂರ ಮತ್ತು ಬಿ. ಬೋರಯ್ಯ
ವಲಯ ಕೃಷಿ ಸಂಶೋಧನಾ ಕೇಂದ್ರ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು – 560065
e-Mail : mohankumarr@uasbangalore.edu.in Mob. : 8970884475

ಕೃಷಿಯಾದರಿತ ದೇಶವಾದ ಭಾರತವು ಆಹಾರ ಧಾನ್ಯಗಳ ಪರಾವಲಂಭನೆಯಿಂದ, ಆಹಾರ ಭದ್ರತೆಯಲ್ಲಿ ಸುಸ್ಥಿರತೆಯನ್ನು ತಲುಪುವಲ್ಲಿ ನಡೆಸಿರುವ ಐದು ದಶಕಗಳ ಮಹಾಯಾನದಲ್ಲಿ ಅಂತಿಮವಾಗಿ ಯಶಸ್ವಿಯಾಗಿರುವಂತೆ ಕಂಡು ಬಂದಿದ್ದರು ಸಹ ಪೋಷಕಾಂಶ ಭದ್ರತೆಯನ್ನು ಸಾದಿಸಲು ಕ್ರಮಿಸಬೇಕಾದ ಮಾರ್ಗ ಸಾಕಷ್ಟಿದೆ. ಇಂತಹ ಸಂದರ್ಭದಲ್ಲಿ ದೇಶದಲ್ಲಿ ಪ್ರತಿಧ್ವನಿಸುತ್ತಿರುವ ಸಹಜ ಕೃಷಿಯ ಕೂಗು ದೇಶದ ರೈತ ಸಮುದಾಯವನ್ನು ಕವಲು ದಾರಿಯಲ್ಲಿ ನಿಲ್ಲಿಸಿರುವುದರಲ್ಲಿ ಯಾವುದೆ ಅನುಮಾನವಿಲ್ಲ. ಕೃಷಿ ದೃಷ್ಟಿಕೋನದಿಂದ ದೇಶದ ಇತಿಹಾಸವನ್ನು ಮೇಲುಕುಹಾಕಿದರೆ ಸ್ವಾತಂತ್ರ್ಯಪೂರ್ವದ ಸಮಯದಲ್ಲಿ ದೇಶ ಕಂಡ ಜ್ವಲಂತ ಸಮಸ್ಯೆಗಳಲ್ಲಿ ಅತಿಮುಖ್ಯ ವಾದುದ್ದು ಆಹಾರ ಧಾನ್ಯಗಳ ಕೊರತೆ ಮತ್ತು ಇದರಿಂದಾಗಿ ದಾಸ್ಯಮುಕ್ತವಾದ ತರುವಾಯ ದೇಶ ಅನುಭವಿಸಿದ ತಲ್ಲಣ. ತದನಂತರ ಈ ವಿಪರ್ಯಾಸಕರ ಸಂದರ್ಭವನ್ನು ಎದುರಿಸಲು ದೇಶವು ಬೇರೊಂದು ದೇಶದ ಮುಂದೆ ಕೈ ಒಡ್ಡುವ ಪರಿಸ್ಥಿತಿ ಯನ್ನೊಳಗೊಂಡಂತೆ ಕೃಷಿ ಉತ್ಪಾದಕತೆಯ ವೃದ್ಧಿಗೆ ಅಗತ್ಯವಿದ್ದ ಹಲವಾರು ತಂತ್ರಜ್ಞಾನಗಳ ಎರವಲು ಪಡೆಯಲು ದೇಶ ಅನುಭವಿಸಿದ ಅಸಹಾಯಕತೆ ನಮ್ಮೆಲ್ಲರ ಕಣ್ಣೆದರಿರುವ ಅಂಶ. ಇಂತಹ ಸಂದರ್ಭದಲ್ಲಿ ಶ್ರೀಯುತ ಪ್ರೊ. ಎಂ. ಎಸ್. ಸ್ವಾಮಿನಾಥನ್ ರಂತಹ ದೀಮಂತ ಹಾಗೂ ದೂರದೃಷ್ಟಿಯುಳ್ಳ ಕೃಷಿ ವಿಜ್ಞಾನಿಗಳ ಅವಿರತ ಪರಿಶ್ರಮದಿಂದಾಗಿ ಭಾರತವು ಹಸಿರು ಕ್ರಾಂತಿಯಂತಹ ಐತಿಹಾಸಿಕ ಹಾಗೂ ಕ್ರಾಂತಿಕಾರಿ ಬದಲಾವಣೆಗೆ ಸಾಕ್ಷಿಯಾಯಿತು. ಹಸಿರು ಕ್ರಾಂತಿಯು ದೇಶದ ಸ್ವಾಭಿಮಾನ ಮತ್ತು ಸಾರ್ವಭೌಮತೆ ಮೆರಗು ನೀಡಿ ಆಹಾರ ಭದ್ರತೆಯ ದಾರಿ ತೋರಿಸಿ ಆಹಾರ ಧಾನ್ಯಗಳ ಬಹುಪಟ್ಟು ಹೆಚ್ಚಿಸುವಲ್ಲಿ ಕಾರಣೀಭೂತವಾಯಿತು. ಹಸಿರುಕ್ರಾಂತಿಯಲ್ಲಿ ಪರಿಚಯಿಸಿದ ಹಲವು ತಳಿ, ತಂತ್ರಜ್ಞಾನ, ಪರಿಕರ ಹಾಗೂ ಕೌಶಲ್ಯಗಳ ಅಸಮರ್ಪಕ ನಿರ್ವಹಣೆಯಿಂದಾಗಿ ದೈವದತ್ತವಾಗಿ ನೀಡಲ್ಪಟ್ಟಿದ್ದ ಅತ್ಯಮೂಲ್ಯ ನೆಲ, ಜಲ, ಜೀವ ವೈವಿದ್ಯ ಹಾಗೂ ಸಂಪ್ರದಾಯಿಕ ಜ್ಞಾನಗಳು ಕ್ರಮೇಣ ಅವನತಿಯತ್ತ ಸಾಗಿ ಪ್ರಸ್ತುತ ದೇಶದ ಹಲವಾರು ಸಕ್ರೀಯ ಕೃಷಿ ವಲಯಗಳು ಇಂದು ಲಾಭದಾಯಕ ಬೇಸಾಯಕ್ಕೆ ಅಸಮರ್ಥ ಭೂ ಭಾಗಗಳೆಂದು ಪರಿಗಣಿಸಲ್ಪಟ್ಟಿರುವುದು ಅತ್ಯಂತ ಶೋಚನೀಯ ಮತ್ತು ಆಗತಕಾರಿಯಲ್ಲವೆ. ಇನ್ನೊಂದೆಡೆ ಅತಿವವಾದ ಜನಸಂಖ್ಯ ಸ್ಪೋಟ, ನಗರೀಕರಣ, ಕೈಗಾರೀಕರಣ ಹಾಗೂ ನೀರಾವರಿ ಶಾಶ್ವತ ಮತ್ತು ಇನ್ನಿತರ ಅಭಿವೃದ್ಧಿ ಯೋಜನೆಗಳಿಗಾಗಿ ಗಣನೀಯ ಪ್ರಮಾಣದ ಕೃಷಿ ಯೋಗ್ಯ ಭೂಮಿಯನ್ನು ಕೃಷಿಯಿಂದ ವಿಮುಕ್ತವಾಗಿಸುತ್ತಿರುವುದು ವಿಪರ್ಯಾಸವೇ ಸರಿ. ಇವೆಲ್ಲವುಗಳ ಹೊರತಾಗಿಯು, ಕ್ಷೀಣಿಸುತ್ತಿರುವ ಜೀವ ವೈವಿದ್ಯತೆ, ಹವಾಮಾನ ವೈಪರಿತ್ಯತೆ, ಕೀಟ, ರೋಗ, ಸಮಸ್ಯಾತ್ಮಕ ಮಣ್ಣು, ಸಸ್ಯ ಪೋಷಕಾಂಶಗಳ ಕೊರತೆ, ಅಂರ್ತಜಲ ಕುಸಿತ ಹಾಗೂ ಒಟ್ಟಾರೆ ಮಣ್ಣಿನ ಅನಾರೋಗ್ಯ ಮುಂತಾದವುಗಳಿಂದಾಗಿ ದಿನ ಕಳೆದಂತೆ ಕೃಷಿಯಲ್ಲಿ ಉತ್ಪಾದಕತೆ ಸಾಮರ್ಥ್ಯ ಗಣನೀಯವಾಗಿ ಕ್ಷೀಣಿಸುತ್ತಿದೆ. ಈ ಎಲ್ಲವುಗಳ ಮದ್ಯೆ ದೇಶದ 139 ಕೋಟಿ ದೇಶವಾಸಿಗಳ ಆಹಾರ ಭದ್ರತೆಯ ಜೊತೆ ಜೊತೆಗೆ ದೇಶವನ್ನು ಪೋಶಕಾಂಶ ಭದ್ರತೆಯುಳ್ಳ ದೇಶವನ್ನಾಗಿಸುವುದು ದೈತ್ಯ ಸವಾಲಿನ ಜೊತೆಗೆ ಜವಾಬ್ದಾರಿಯು ಹೌದು. ಸಹಜ ಕೃಷಿಯನ್ನು ಸರಳಾತಿ ಸರಳ ಪದಗಳಲ್ಲಿ ಹೇಳುವುದಾದರೆ ಕೃಷಿಯನ್ನು ನೈಸರ್ಗಿಕ ಪ್ರಕ್ರಿಯೆಗಳಿಗೆ ಪೂರಕವಾಗಿ ಕೈಗೊಳ್ಳುವ ಒಂದು ಕೃಷಿ ವಿಧಾನ. ಸಹಜ ಕೃಷಿಯ ದ್ಯೇಯಗಳನ್ನು ಈ ಕೆಳಕಂಡಂತೆ ನೋಡಬಹದಾಗಿದೆ.

1. ಉತ್ತಮ ಆರೋಗ್ಯಕ್ಕಾಗಿ ಸುರಕ್ಷಿತ ಹಾಗೂ ಪೋಷಕಾಂಶ ಯುಕ್ತ ಆಹಾರ ದಾನ್ಯಗಳ ಉತ್ಪಾದನೆ
2. ಕೃಷಿಯಲ್ಲಿ ಹೊರ ಉತ್ಪಾದನಾ ಪರಿಕರಗಳ ಖರೀದಿಯನ್ನು ಸಂಪೂರ್ಣವಾಗಿ ನಿಷೇಧಿಸಿ ಸ್ಥಳೀಯ ಹಾಗು ನೈಸರ್ಗಿಕ ಉತ್ಪಾದನಾ ಪರಿಕರಗಳ ಬಳಸಿ ಕೃಷಿ ಉತ್ಪಾದನೆಯಲ್ಲಿ ಸುಸ್ಥಿರತೆ ಸಾದಿಸುವುದು
3. ಸ್ಥಳೀಯವಾಗಿ ದೊರೆಯುವ ಪರಿಕರಗಳ ಬಳಕೆ ಮಾಡಿ ಪರಿಸರ ಸ್ನೇಹಿ ಸರಳ ಉತ್ಪಾದನ ವಿಧಾನ

ಗಳ ಕಂಡುಕೊಂಡು ಕೃಷಿಯಲ್ಲಿ ಸುಸ್ಥಿರತೆ ಸಾಧಿಸುವುದು

4. ಪರಿಸರ ಸಂರಕ್ಷಣೆ ಹಾಗೂ ಮಲಿನಮುಕ್ತ ಕೃಷಿ ಉತ್ಪಾದನಾ ಚಟುವಟಿಕೆಗಳ ಅಳವಡಿಸಿಕೊಳ್ಳುವುದು

ಸಹಜ ಕೃಷಿ ದೃಷ್ಟಿಕೊನದಿಂದ ಭಾರತಿಯ ಕೃಷಿ ವ್ಯವಸ್ಥೆಯ ಅವಲೋಕನ

ಹವಾಮಾನ ವೈಪರಿತ್ಯ : ಮಿತಿ ಮೀರಿದ ನಗರೀಕರಣ, ಅರಣ್ಯನಾಶ, ನವೀಕರಿಸಲಾದ ಇಂಧನಗಳ ಬಳಕೆ ಹಾಗೂ ಪರಿಸರ ಕಲುಷಿತಗೊಳಿಸುವ ರಾಸಾಯನಿಕಗಳಿಂದಾಗಿ ವಾತಾವರಣದಲ್ಲಿ ಇಂಗಾಲದ ಡೈಆಕ್ಸೈಡ್, ಮೀಥೇನ್, ನೈಟ್ರಸ್ ಆಕ್ಸೈಡ್, ಗಂಧಕದ ಆಕ್ಸೈಡ್ ಮುಂತಾದ ಹಸಿರು ಮನೆ ಅನಿಲಗಳ ಪ್ರಮಾಣದಲ್ಲಿ ಕಾಣಸಿಗುವ ಗಣನೀಯ ಏರಿಕೆ ವಾತವರಣದಲ್ಲಿ ಸೂರ್ಯರಶ್ಮಿಯನ್ನು ವಾತವರಣದಿಂದ ಹೊರಹೋಗದಂತೆ ಹಿಡಿದಿಡುವುದರಿಂದ ದಿನದಿಂದ ದಿನಕ್ಕೆ ವಾತವರಣದ ತಾಪಮಾನದಲ್ಲಿ ಗಣನೀಯ ಏರಿಕೆಯಾಗುತ್ತಿದೆ. ಈ ಅಸಹಜ ವಾತವರಣದ ಕಾಯುವಿಕೆಯು ಕೃಷಿಯನ್ನು ಹತ್ತು ಹಲವು ಆಯಾಮಗಳಿಂದ ಬಾಧಿಸುತ್ತಿದೆ. ಅವುಗಳಲ್ಲಿ ಮುಖ್ಯವಾಗಿ ವಾರ್ಷಿಕ ಮಳೆಯ ಪ್ರಮಾಣ ಮತ್ತು ಹಂಚಿಕೆ ಪ್ರಮುಖವಾದುದ್ದು. ಭಾರತವು ವಿಶಿಷ್ಟವಾಗಿ ಮಾನ್‌ಸೂನ್ ಮಾರುತಗಳಿಂದ ನೀರಿನ ನೈಸರ್ಗಿಕ ಮೂಲವಾದ ಮಳೆಗಳನ್ನು ಪಡೆಯುತ್ತಿದೆ. ವೈಜ್ಞಾನಿಕವಾಗಿ ಹೇಳುವುದಾದರೆ ಈ ಮಾನ್‌ಸೂನ್ ಮಾರುತಗಳು ಸಾಮಾನ್ಯವಾಗಿ ಅದಕ್ಕೆ ಹೊಂದಿಕೊಂಡಿರುವ ಭೂಭಾಗಗಳ ಬೇದಾತ್ಮಕ ಕಾಯುವಿಕೆ ಯಿಂದ ಉಂಟಾಗುತ್ತವೆ. ಪ್ರಸ್ತುತ ಸಮಯದ ಹವಮಾನ ವೈಪರಿತ್ಯದಿಂದಾಗಿ ಒಟ್ಟಾರೆ ಮಾನ್‌ಸೂನ್ ಮಾರುತಗಳ ಸಂಪ್ರದಾಯಿಕ ಮಾದರಿಯಲ್ಲಿ ಬಹಳಷ್ಟು ಬದಲಾವಣೆ ಆಗಿರುವುದರಿಂದ ಪ್ರಸ್ಥುತ ವಾರ್ಷಿಕ ಮಳೆಯ ಒಟ್ಟು ಪ್ರಮಾಣ ಹಾಗೂ ಹಂಚುವಿಕೆಯಲ್ಲಿ ಅಸಹಜತೆಯನ್ನು ಕಾಣಬಹುದಾಗಿದೆ. ಇದಲ್ಲದೆ, ವಾತವರಣದ ತಾಪಮಾನ ಏರಿಕೆಯಿಂದ ಬೆಳೆಗಳಲ್ಲಿ ಉತ್ಪಾದಕತೆ ಸಾಮರ್ಥ್ಯ ಕುಂಟಿತ ಗೊಳ್ಳುತ್ತದೆ ಮತ್ತು ಬೆಳೆಗಳ ಬಾಧಿಸುವ ಕೀಟ ರೋಗ ಭಾದೆ ಉಲ್ಬಣಗೊಳ್ಳುತ್ತವೆಯೆಂಬುದು ವೈಜ್ಞಾನಿಕವಾಗಿ ಸಾಭಿತಾಗಿದ್ದು. ಈ ಎಲ್ಲ ಕಾರಣಗಳಿಂದಾಗಿ ಇಂದು ಜಗತ್ತಿನಾದ್ಯಂತ ಈ ಹಸಿರು ಮನೆ ಅನಿಲಗಳ ಹೊರ ಸೂಸುವಿಕೆಯಲ್ಲಿ ನಿಯಂತ್ರಣ ಸಾದಿಸುವಲ್ಲಿ ಕಾರ್ಯಪ್ರವೃತ್ತರಾಗಬೇಕಾದ ಹತ್ತು ಹಲವು ಸುಧಾರಿತ ಕಾರ್ಯಕ್ರಮಗಳನ್ನು ಚಾಚುತಪ್ಪದೆ ಪಾಲಿಸ ಬೇಕಾಗಿದೆ. ಆದಕಾರಣ ಕೃಷಿ ಪ್ರದಾನ ದೇಶವಾದ ಭಾರತದಲ್ಲಿ ಇಂದಿನ ರಾಸಾಯನಿಕ ಆಧಾರಿತ ಕೃಷಿ ಉತ್ಪಾದನಾ ಚಟುವಟಿಕೆಗಳಿಂದ ವಿಮುಕ್ತರಾಗಿ ನೈಸರ್ಗಿಕವಾಗಿ ದೊರೆಯುವ ಹಾಗೂ ನೈಸರ್ಗಿಕ ಪ್ರಕ್ರಿಯಗಳಿಗೆ ಪೂರಕವಾಗುವ ಕೃಷಿ ಚಟುವಟಿಕೆಗಳನ್ನು ಮೈಗೂಡಿಸಿಕೊಂಡು ಕೃಷಿಯಲ್ಲಿ ಸುಸ್ತಿರತೆ ಸಾಧಿಸಬೇಕಾಗಿದೆಯೆಂಬುದು ತರ್ಕಬದ್ಧವಾದ ವಾದವಾಗಿದ್ದರು ದಶಕಗಳಿಂದ ಚಾಲ್ತಿಯಲ್ಲಿರುವ ರಾಸಾಯನಿಕಯುಕ್ತ ಸಸ್ಯ ಪೋಷಕಾಂಶಗಳು, ಸಸ್ಯ ಸಂರಕ್ಷಣೆಗೆ ಬಳಸುವ ರಾಸಾಯನಿಕ ಗಳನ್ನು ಒಮ್ಮಿಂದೊಮ್ಮೆಲೆ ಬದಲಾಯಿಸಿದಲ್ಲಿ ಕೃಷಿ ಉತ್ಪಾದಕತೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುವ ಸನ್ನಿವೇಶಗಳು ಹೇರಳವಾಗಿದ್ದು ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸಹಜ ಕೃಷಿಯ ಅಳವಡಿಕೆಯ ಬಗೆಗಿನ ಕಾರ್ಯಯೋಜನೆಗಳನ್ನು ಸಿದ್ದಪಡಿಸಬೇಕು.

ಕೃಷಿ ಜೀವ ವೈವಿಧ್ಯತೆ : ವೈವಿಧ್ಯತೆ ಸಹಜತೆಯ ಜೀವಾಳ, ಕೃಷಿಯು ಸಹಜವಾಗಿ ಅತ್ಯಂತ ಸಂಕೀರ್ಣ ವ್ಯವಸ್ಥೆಯಾಗಿದ್ದು ಹಲವಾರು ಸ್ಥರದ ಸಸ್ಯ, ಪ್ರಾಣಿ, ಕೀಟ ಹಾಗೂ ಸೂಕ್ಷ್ಮಣು ಜೀವಿಗಳಿಂದ ಹೆಣೆದಿರುವ ಪೂರಕ ವ್ಯವಸ್ಥೆಯಾಗಿದೆ. ಈ ಎಲ್ಲಾ ಸ್ಥರದ ಜೀವಿಗಳ ಒಟ್ಟಾರೆ ಪರಸ್ಪರ ಹೊಂದಾಣಿಕೆ, ಹೊರಾಟ ಹಾಗೂ ಸಾಮರಸ್ಯವೆ ಜೀವ ವೈವಿಧ್ಯಮಯ ಸೌಂದರ್ಯ. ಮಾನವನ ಅತಿಯಾದ ಹಸ್ತಕ್ಷೇಪ, ದುರಾಸೆ ಮತ್ತು ನಿಸರ್ಗದ ಮೇಲಿನ ಹಿಡಿತ ಕ್ರಮೇಣವಾಗಿ ನೈಸರ್ಗಿಕ ಸಮತೋಲನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿ ಜೀವವೈವಿಧ್ಯತೆಯನ್ನು ಕುಂಟಿಸುತ್ತಾ ಸಾಗಿ ಇಂದು ನಾವು ಹಲವಾರು ಅತ್ಯಮೂಲ್ಯ ಸಸ್ಯ ಪ್ರಾಣಿ ಹಾಗು ಕೀಟ ಸಂಕುಲವನ್ನು ಸಂಪೂರ್ಣವಾಗಿ ನಸಿಸಿ ಹೋಗಲು ಕಾರಣೀಕರ್ತರಾಗಿದ್ದೇವೆ. ಉದಾರಣೆಗೆ: ಜಾಗತೀಕ ಆರ್ಥಿಕ ವೇದಿಕೆ 2021 ರ ಅಂದಾಜಿನ ಪ್ರಾಕಾರ ಸರಿಸುಮಾರು 30,000 ವಿವಿಧ ಸಸ್ಯ ಸಂತತಿಗಳು ಮಾನವನು ಆಹಾರಕ್ಕೆ ಯೋಗ್ಯವಾಗಿದ್ದರು ಸಹ ಕೇವಲ 7,000 ಜಾತಿಗಳ ಸಸ್ಯಗಳನ್ನು ಈ ವರೆಗೆ ಕೃಷಿ ದೃಷ್ಟಿಕೋನದಿಂದ ನೋಡಲಾಗಿದ್ದು ಇವುಗಳಲ್ಲಿ ಕೆಲವೇ ಕೆಲವು ಅಂದರೆ 170 ಸಸ್ಯ ಸಂಕುಲವನ್ನು ಕೃಷಿ ಬೆಳೆಗಳೆಂದು ಪರಿಗಣಿಸಿ ಕೃಷಿಯಲ್ಲಿ ಅಳವಡಿಸಿಕೊಳ್ಳಲಾಗಿದೆ ಆದರೆ ಜಗತ್ತಿನ ಶೇ. 90 ಕ್ಕಿಂತ ಹೆಚ್ಚಿನ ಜನಸಂಖ್ಯೆ ದೈನಂದಿನ ಆಹಾರ ಬೇಡಿಕೆಯನ್ನು ಕೇವಲ 30 ಬೆಳೆಗಳು ನೀಗಿಸುತ್ತವೆ. ಅವುಗಳಲ್ಲಿ ಸರಿಸುಮಾರು ಶೇ. 40 ರಷ್ಟು ಭಾಗ ಕೇವಲ ಮೂರು ಪ್ರಮುಖ ಬೆಳೆಗಳಾದ ಭತ್ತ, ಗೋದಿ ಮತ್ತು ಮುಸುಕಿನಜೋಳ ಭರಿಸುತ್ತಿವೆ (ಚಿತ್ರ-1). ಇಂತಹ ಸಂದರ್ಭದಲ್ಲಿ ಜೀವ ವೈವಿಧ್ಯತೆಗಳ ಜೀವಾಳವಾಗಿಸಿಕೊಂಡ ಸಹಜ ಕೃಷಿಯ ಅಳವಡಿಕೆ ಮತ್ತು ಅದರ ಬೆಳವಣಿಗೆ ಭಾರತದಂತಹ ದೇಶಕ್ಕೆ ಸಂಮಜಶವೆಂದು ಕಾಣಲಾರದು. ಏಕೆಂದರೆ, ವೈವಿಧ್ಯಮಯ

ಬೆಳೆ ಪದ್ದತಿಗಳು ಸಮಗ್ರ ಮಣ್ಣು, ಕೀಟ, ರೋಗಗಳ ನ್ನೊಳಗೊಂಡತೆ ಬೆಳೆಗಳ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸಿ ವ್ಯವಸ್ಥೆಯ ಸಂಪೂರ್ಣ ಸುಸ್ಥಿರತೆಗೆ ಸಹಕರಿಸುತ್ತದೆ. ಆದರೆ ಪ್ರಸ್ತುತ ಸಮಯದ ಕೆಲವೇ ಕೆಲವು ಬೆಳೆಗಳನ್ನೊಳ ಗೊಂಡ ಏಕಬೆಳೆ ಪದ್ದತಿಗಳು ಸಹಜ ಕೃಷಿಯ ಧ್ಯೇಯಗಳಿಗೆ ವಿರುದ್ಧ ಪ್ರಕ್ರಿಯೆಯಾಗಿದೆ.



ಚಿತ್ರ 1 : ಜಾಗತಿಕ ಕೃಷಿಯಲ್ಲಿ ಬೆಳೆ ವೈವಿಧ್ಯತೆ

ಜೈವಿಕ ಒತ್ತಡ : ಹಸಿರು ಕ್ರಾಂತಿಯ ಕಾಲಗಟ್ಟದಲ್ಲಿ ಬರಮಾಡಿಕೊಂಡ ಹಾಗೂ ತದನಂತರ ಅಭಿವೃದ್ದಿಪಡಿಸಿದ ತಳಿ ಹಾಗೂ ತಾಂತ್ರಿಕತೆಗಳು ಹೆಚ್ಚಿನ ಪ್ರಮಾಣದಲ್ಲಿ ರಾಸಾಯನಿಕ ಆಧಾರಿತ ಕೃಷಿ ಚಟುವಟಿಕೆಗಳಾಗಿದ್ದು. ಉತ್ಪಾದಕತೆ ಹೆಚ್ಚಿಸುವ ದೃಷ್ಟಿಯಿಂದ ಬೆಳೆ ತಳಿಗಳ ಸ್ವಯಂ ಪ್ರತಿರೋಧಕತೆಯನ್ನು ಉತ್ತೇಜಿಸುವ ಅಂಶಗಳ ಬಹುತೇಕ ನಿರ್ಲಕ್ಷಿಸಲಾಗಿತ್ತು, ಈ ಕಾರಣದಿಂದಾಗಿ ಬೆಳೆಗಳಲ್ಲಿ ಜೈವಿಕ ಒತ್ತಡಗಳಾದ ರೋಗ, ಕೀಟ ಹಾಗೂ ಕಳೆ ಸಸ್ಯಗಳಿಂದಾಗುವ ಸಮಸ್ಯೆಗಳನ್ನು ವಿಮುಕ್ತಗೊಳಿಸಲು ಯುತ್ತೇಚ್ಚವಾಗಿ ರಾಸಾಯನಿಕಗಳ ಬಳಕೆ ಮಾಡಲಾಯಿತು. ಈ ಪ್ರಕ್ರಿಯೆಯಲ್ಲಿ ಹಾನಿಕಾರಕ ಕೀಟ ಹಾಗೂ ರೋಗಗಳೊಂದಿಗೆ ಪ್ರಾಕೃತಿಕ ಸಮತೋಲನದ ದೃಷ್ಟಿ ಪ್ರಮುಖವೆನಿಸುವ ಪರಭಕ್ಷಕ, ಪರಾವಲಂಭಿ, ಸ್ಪರ್ಧಾತ್ಮಕ ಜೀವಿಗಳು ಸತತ ರಾಸಾಯನಿಕಗಳ ಬಳಕೆಯಿಂದ ನಸಿಸಲ್ಪಟ್ಟವು. ಪ್ರಸ್ತುತ ನಿರಂತರವಾದ ರಾಸಾಯನಿಕಗಳ ಬಳಕೆಯಿಂದಾಗಿ ಹಲವಾರು ಕೀಟ ಹಾಗೂ ರೋಗ ಭಾದೆಗಳು ರಾಸಾಯನಿಕಗಳಿಗೆ ಪ್ರತಿರೋಧಕತೆಯನ್ನು ಅಭಿವೃದ್ದಿಪಡಿಸಿಕೊಂಡಿವೆ ಹಾಗೂ ರಾಸಾಯನಿಕಗಳ ಬಳಕೆ ಯಿಂದಾಗಿ ರೈತ ಸ್ನೇಹಿ ಪರಾವಲಂಭಿ ಜೀವಿಗಳ ಸಂತತಿ ನಶಿಸಿದೆ. ಇಂತಹ ಸಂದರ್ಭದಲ್ಲಿ ಹಠಾತ್ ರಾಸಾಯನಿಕ ಬಳಕೆ ಮಾಡಲಾಗದ ಸಹಜ ಕೃಷಿಯ ಪಾಲನೆಯಿಂದಾಗಿ ಜೈವಿಕ ಒತ್ತಡಗಳ ಸಮಗ್ರ ಹತೋಟಿಗಾಗಿ ಕಷ್ಟಸಾಧ್ಯಾವಾಗ ಬಹುದು. ಆದಕಾರಣ, ಸಹಜಕೃಷಿಯ ಪೂರ್ವದಲ್ಲಿ ರೈತ ಸ್ನೇಹಿ ಪರಾವಲಂಭಿ ಜೀವಿಗಳ ಸಮಗ್ರ ರಕ್ಷಣೆ ಹಾಗೂ ಅವುಗಳ ಅಭಿವೃದ್ದಿಗೆ ಸಹಕಾರಿಯಾಗುವ ವಾತವರಣಗಳ ಸೃಷ್ಟಿ ಅತ್ಯಗತ್ಯ, ಇಲ್ಲದೇಹೋದಲ್ಲಿ ಬೆಳೆ ಉತ್ಪಾದನೆಯ ಬಹುಬಾಗ ಜೈವಿಕ ಒತ್ತಡಗಳಿಗೆ ಒಳಪಟ್ಟು ಪೂರ್ಣ ಪ್ರಮಾಣದ ಬೆಳೆ ನಾಶವಾಗುವುದರಲ್ಲಿ ಯಾವುದೇ ಅನುಮಾನವಿಲ್ಲ.



ಚಿತ್ರ 2: ಕೃಷಿಯಲ್ಲಿ ಪ್ರಯೋಜನಕಾರಿ ಕೀಟಗಳು

ಸಮಸ್ಯಾತ್ಮಕ ಮಣ್ಣು : ಮಣ್ಣು ಒಂದು ನೈಸರ್ಗಿಕ ಸಂಪನ್ಮೂಲವಾಗಿದ್ದು ಪ್ರತಿ ಇಂಚಿನಷ್ಟು ಮೇಲ್ಮೈ ಮಣ್ಣಿನ ಪದರವು ಅಭಿವೃದ್ದಿಯಾಗಲು ಸಹಸ್ರಾರು ವರ್ಷಗಳ ಸುದೀರ್ಘ ನೈಸರ್ಗಿಕ ಪ್ರಕ್ರೀಯೆಗಳಿರುತ್ತವೆ. ನೈಸರ್ಗಿಕ ಪರಿಸರದ ಉಪವ್ಯವಸ್ಥೆಯಾದ ಮಾನವ ನಿರ್ಮಿತ ಕೃಷಿ ಪರಿಸರದಲ್ಲಿ ರಾಸಾಯನಿಕ ಗೊಬ್ಬರ, ಕೀಟ ಹಾಗೂ ರೋಗನಾಶಕಗಳು, ನೀರಾವರಿ ಹಾಗೂ ಅವೈಜ್ಞಾನಿಕ ಮತ್ತು ಮೇಲಿಂದ ಮೇಲೆ ಬೃಹತ್ ಯಂತ್ರಗಳಿಂದ ಉಳುಮೆ ಮಾಡುವುದರಿಂದ ಮಣ್ಣು ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು ಸವಳು, ಕ್ಷಾರ, ಆಮ್ಲೀಯ, ಜವಳು ಭೂಮಿಯಾಗಿ ಮಾರ್ಪಾಡುವುದರಿಂದ ಅಂತಹ ಮಣ್ಣಿನಲ್ಲಿ ಸಸ್ಯಗಳಿಗೆ ಪೋಷಕಾಂಶಗಳನ್ನು ಒದಗಿಸುವ ಸಾಮರ್ಥ್ಯವಿರುವುದಿಲ್ಲ. ಇದಲ್ಲದೆ ನಿರಂತರವಾದ ಉಳುಮೆ ಹಾಗೂ ದೈತ್ಯ ಯಂತ್ರಗಳ ಓಡಾಟದಿಂದಾಗಿ ಮಣ್ಣಿನ ಭೌತಿಕ ಗುಣಧರ್ಮಗಳ ಮೇಲೆಯು ಸಹ ವ್ಯತಿರಿಕ್ತ ಪರಿಣಾಮ ಗಳುಂಟಾಗಿರುವುದು ಸಾಮಾನ್ಯವಾಗಿ ಕಾಣಸಿಗುವ ಅಂಶ. ಪ್ರಸ್ತುತ ಭಾರತದಲ್ಲಿ 37.08 ಲಕ್ಷ ಹೆಕ್ಟೇರ್ ಕ್ಷಾರಯುಕ್ತ ಮಣ್ಣು, 27.29 ಲಕ್ಷ ಹೆಕ್ಟೇರ್ ರಷ್ಟು ಸವಳು ಮಣ್ಣು, 179.26 ಲಕ್ಷ ಹೆಕ್ಟೇರ್ ಅಮ್ಲೀಯ ಮಣ್ಣು ಹಾಗೂ 116 ಲಕ್ಷ ಹೆಕ್ಟೇರ್

ರಷ್ಟು ಜವಳು ಮಣ್ಣುಗಳಿಂದ ಕೂಡಿದ ಕೃಷಿ ಭೂಮಿಯಿದ್ದು ಈ ಮೇಲ್ಕಂಡ ಬಹುತೇಕ ಕೃಷಿ ಭೂಮಿ ಬೆಳೆ ಉತ್ಪಾದನೆಗೆ ಯೋಗ್ಯವಾಗಿರುವುದಿಲ್ಲ, ಆದಗ್ಯೂ ಈ ಪ್ರದೇಶಗಳ ಸಮಗ್ರ ಉಪಯುಕ್ತತೆಗೆ ಹಲವು ರಾಸಾಯನಿಕ ಆಧಾರಿತ ಸುಧಾರಣ ಕ್ರಮಗಳನ್ನು ಶಿಫಾರಸ್ಸು ಚಾಲ್ತಿಯಲ್ಲಿದ್ದು ಈ ಶಿಫಾರಸ್ಸುಗಳ ಹೊರತಾಗಿ ಲಾಭಾದಾಯಕ ಕೃಷಿಗೆ ಸಹಜ ಕೃಷಿ ಮಾರ್ಗದಲ್ಲಿ ಯಾವುದೇ ಮಾರ್ಗೋಪಯಗಳಿರುವುದಿಲ್ಲ. ಆದ್ದರಿಂದ ಪೂರ್ವ ನಿಯೋಜಿತ ವೈಜ್ಞಾನಿಕ ಪರಿಹಾರಗಳ ಕಂಡುಕೊಳ್ಳುವ ಹೊರತು ಈ ಬೃಹತ್ ಭೂಭಾಗವನ್ನು ಸಹಜ ಕೃಷಿಗೆ ಒಳಪಡಿಸುವುದ ರಿಂದ ದೇಶದ ಆಹಾರ ಉತ್ಪಾದನೆಯ ಮೇಲೆ ವ್ಯತಿರಿಕ್ತ ಪರಿಣಾಮಗಳು ಉಂಟಾಗುತ್ತವೆ.

ಸಸ್ಯ ಪೋಷಕಾಂಶಗಳ ಕೊರತೆ : ಭಾರತದ ಕೃಷಿಯ ಮಟ್ಟಿಗೆ ಹಸಿರು ಕ್ರಾಂತಿಯಲ್ಲಿ ಅನಾವರಣಗೊಂಡ ಮತ್ತೊಂದು ವಿಸ್ಮಯವೆಂದರೆ ರಾಸಾಯನಿಕ ಗೊಬ್ಬರಗಳು, ಅಲ್ಲಿಯವರೆಗು ಭಾರತದ ಬಹುತೇಕ ಕೃಷಿ ಸಾವಯವ ಗೊಬ್ಬರ, ಬೆಳೆ ಪರಿವರ್ತನೆ ಹಾಗೂ ಕೃಷಿ ತ್ಯಾಜ್ಯ ನಿರ್ವಹಣೆಯಿಂದ ಬೆಳೆಗಳಿಗೆ ಪೋಷಕಾಂಶಗಳ ಪೂರೈಕೆಯಾಗುತ್ತಿತ್ತು. ಹಸಿರು ಕ್ರಾಂತಿಯ ಸಮಯದಲ್ಲಿ ಅಮದು ಹಾಗು ಆವಿಷ್ಕರಗೊಂಡ ತರಾವರಿ ರಾಸಾಯನಿಕ ಗೊಬ್ಬರಗಳು ರೈತರಲ್ಲಿ ವಲಯದಲ್ಲಿ ಜನಪ್ರಿಯಗೊಂಡು ತದನಂತರದ ದಿನಗಳಲ್ಲಿ ರಾಸಾಯನಿಕೇತರ ಸಸ್ಯ ಪೋಷಕಾಂಶಗಳ ನಿರ್ವಹಣೆ ಕಷ್ಟ ಸಾಧ್ಯವಾದಂತೆ ಪ್ರತಿಬಿಂಭಿತವಾಗಿದೆ. ಅದರಲ್ಲಿ ವಿಶೇಷವಾಗಿ ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಗೊಬ್ಬರಗಳ ಯತೇಚ್ಚವಾದ ಬಳಕೆ ಮತ್ತು ತೀವ್ರತರನಾದ ಬೆಳೆ ಉತ್ಪಾದನಾ ಚಟುವಟಿಕೆಯಿಂದಾಗಿ ದೇಶದ ಕೃಷಿ ಜಮೀನುಗಳಲ್ಲಿ ಕಾಲ ಮಿಕ್ಕೆಲ್ಲ ಸಸ್ಯ ಪೋಷಕಾಂಶಗಳಾದ ದ್ವಿತಿಯ ಪಂಕ್ತಿಯು ಹಾಗು ಸೂಕ್ಷ್ಮ ಪೋಷಕಾಂಶಗಳು ಕೃಷಿ ಭೂಮಿಯಿಂದ ಕಾಲಕ್ರಮೇಣವಾಗಿ ಕಣ್ಮರೆಯಾಗತೊಡಗಿದವು (ಕೋಷ್ಟಕ 1). ಯಶಸ್ವಿ ಬೆಳೆ ಉತ್ಪಾದನೆಗೆ ಬೇಕಾದ 17 ಅತ್ಯವಶ್ಯಕ ಸಸ್ಯ ಪೋಷಕಾಂಶಗಳಲ್ಲಿ ಪ್ರಸ್ತುತ ಬಹುತೇಕ ಸಸ್ಯ ಪೋಷಕಾಂಶಗಳು ಕೃಷಿ ಭೂಮಿಯಲ್ಲಿ ಅಗತ್ಯವಿರುವ ಪ್ರಮಾಣಕ್ಕಿಂತ ಕಡಿಮೆಯಾಗಿದ್ದು ಭವಿಷ್ಯದ ಕೃಷಿಯಿಂದ ನೋಡುವುದಾದರೆ ಎಚ್ಚರಿಕೆಯ ಕರೆಘಂಟೆಯೆಂದರೆ ತಪ್ಪಾಗಲಾರದು. ಇದಲ್ಲದೆ, ಅಸಮತೋಲಿತ ಸಸ್ಯ ಪೊಷಕಾಂಶ ನಿರ್ವಹಣೆ ಹಾಗೂ ಇಂದಿನ ದಿನದ ಯತೇಚ್ಚವಾದ ಪೋಷಕಾಂಶ ಗ್ರಹಿಕೆಯುಳ್ಳ ತಳಿ ಹಾಗೂ ಸಂಕರಣ ತಳಿಗಳಿಂದಾಗಿ ಕೃಷಿ ಯೋಗ್ಯ ಭೂಮಿಯ ಬಹುಭಾಗ ಒಂದಲ್ಲ ಒಂದು ಸಸ್ಯ ಪೊಷಕಾಂಶಗಳ ಕೊರತೆಯನ್ನು ತೋರ್ಪಡಿಸುತ್ತಿವೆ. ಇಂತಹ ಸಮಯದಲ್ಲಿ ಪ್ರಸ್ತುತ ದಿನದ ಸುಧಾರಿತ ತಳಿಗಳನ್ನು ಅಳವಡಿಸಿಕೊಂಡು ಸ್ಪರ್ಧಾತ್ಮಾಕ ಇಳುವರಿ ಪಡೆದುಕೊಳ್ಳುವುದು ಸಹಜ ಕೃಷಿಯಿಂದ ಕಷ್ಟಸಾಧ್ಯವಾಗಬಹುದು.

ಕೋಷ್ಟಕ 1 : ಭಾರತೀಯ ಕೃಷಿ ಭೂಮಿಯಲ್ಲಿ ಸಸ್ಯ ಪೋಷಕಾಂಶಗಳ ಪ್ರಸ್ತುತ ಪರಿಸ್ಥಿತಿ

ವರ್ಷ	ಸಸ್ಯ ಪೋಷಕಾಂಶಗಳು	ಕೊರತೆಗೊಂಡ ಸಸ್ಯ ಪೋಷಕಾಂಶ ಗಳ ಸಂಖ್ಯೆ
1950	ಸಾರಜನಕ	1
1960	ಸಾರಜನಕ, ಕಬ್ಬಿಣ	2
1970	ಸಾರಜನಕ, ಕಬ್ಬಿಣ, ರಂಜಕ, ಸತು, ಪೊಟ್ಯಾಷ್	5
1980	ಸಾರಜನಕ, ಕಬ್ಬಿಣ, ರಂಜಕ, ಸತು, ಪೊಟ್ಯಾಷ್, ಗಂದಕ, ಮ್ಯಾಂಗನಿಸ್	7
1990	ಸಾರಜನಕ, ಕಬ್ಬಿಣ, ರಂಜಕ, ಸತು ಪೊಟ್ಯಾಷ್, ಗಂದಕ, ಮ್ಯಾಂಗನಿಸ್, ಬೋರಾನ್,	8
2000	ಸಾರಜನಕ, ಕಬ್ಬಿಣ, ರಂಜಕ, ಸತು, ಪೊಟ್ಯಾಷ್, ಗಂದಕ, ಮ್ಯಾಂಗನಿಸ್, ಬೋರಾನ್, ಮಾಲುಬಿಡಿನಂ	9
2010	ಸಾರಜನಕ, ಕಬ್ಬಿಣ, ರಂಜಕ, ಸತು, ಪೊಟ್ಯಾಷ್, ಗಂದಕ, ಮ್ಯಾಂಗನಿಸ್, ಬೋರಾನ್, ಮಾಲುಬಿಡಿನಮ್, ನಿಕಲ್	10
2020	ಸಾರಜನಕ, ಕಬ್ಬಿಣ, ರಂಜಕ, ಸತು, ಪೊಟ್ಯಾಷ್, ಗಂದಕ, ಮ್ಯಾಂಗನಿಸ್, ಬೋರಾನ್, ಮಾಲುಬಿಡಿನಮ್, ನಿಕಲ್, ತಾಮ್ರ	11

ನೀರಾವರಿ : ಸಹಜ ಕೃಷಿಯ ಹಲವು ಧ್ಯೇಯ ಮತ್ತು ಉದ್ದೇಶಗಳು ನಿಸರ್ಗಕ್ಕೆ ಹತ್ತಿರವಾದ ಹಾಗು ಪ್ರಾಕೃತಿಕ ಚಟುವಟಿಕೆಗಳಿಗೆ ಪೂರಕವಾಗಿ ಕೃಷಿ ಉತ್ಪಾದನೆಯಲ್ಲಿ ತೊಡಗಿಸಿ ಕೊಳ್ಳುವುದಾಗಿರುತ್ತದೆ. ಭಾರತೀಯ ಕೃಷಿಯ ಬಹುತೇಕ ಬಾಗ ಮಳೆಯಾಶ್ರಿತವಾಗಿದ್ದು, ಅಗತ್ಯ ಆಧಾರಿತವಾಗಿ ಬೆಳೆಗಳನ್ನು ರಕ್ಷಿಸಲು ಒಂದಲ್ಲ ಒಂದು ಮೂಲಗಳಿಂದ ತೀವ್ರ ಬರದ ಪರಿಸ್ಥಿತಿಯಲ್ಲಿ ನೀರನ್ನು ಒದಗಿಸುವುದುಂಟು. ಆದರೆ, ಸಹಜ ಕೃಷಿಯ ನಿಯಮಗಳಿಗನುಸಾರವಾಗಿ ಬೆಳೆಗಳಿಗೆ ಯಾವುದೇ

ರೀತಿಯ ಜೀವ ರಕ್ಷಕ ನೀರಾವರಿ ವ್ಯವಸ್ಥೆಗಳನ್ನು ಅಳವಡಿಸಿ ಕೊಳ್ಳದ ಪಕ್ಷದಲ್ಲಿ ದೇಶದ ಸಿಂಹಪಾಲು ಕೃಷಿ ಭೂಮಿಯ ಉತ್ಪಾದನಾ ಸಾಮರ್ಥ್ಯ ಹಾಗೂ ಉತ್ಪಾದಕತೆ ಅನಿರೀಕ್ಷಿತ ವೈಪರಿತ್ಯಗಳಿಗೆ ಒಳಗೊಂಡು ಪ್ರಾದೇಶಿಕವಾರು ಕೃಷಿ ಉತ್ಪಾದನೆಯಲ್ಲಿ ಗಣನೀಯವಾಗಿ ವ್ಯತ್ಯಯಗಳಾಗಿ ದೇಶದ ಒಟ್ಟಾರೆ ಕೃಷಿ ವಲಯ ಹೊಸ ಸಮಸ್ಯೆಗಳ ಎದಿರುನೊಡ ಬೇಕಾಗಬಹುದು.

ಹೈನುಗಾರಿಕೆ : ಸಹಜ ಕೃಷಿಯಲ್ಲಿ ಅತಿಮುಖ್ಯ ಧ್ಯೇಯಗಳಲ್ಲಿ ದೇಸಿ ಹಸುಗಳ ಪೋಷಣೆ ಮತ್ತು ಅವುಗಳಿಂದ ದೊರೆಯಲ್ಪಟ್ಟ ಸಗಣಿ, ಗಂಜಲ ಹಾಗೂ ಇನ್ನಿತರ ತ್ಯಾಜಗಳ ಬಳಕೆ ಪ್ರಮುಖವಾದವು. ಆದರೆ ಹೈನೋಧ್ಯಮವನ್ನು ಲಾಭದಾಯಕ ವಾಗಿಸುವ ನಿಟ್ಟಿನಲ್ಲಿ ಕಡಿಮೆ ಉತ್ಪಾದಕತೆಯುಳ್ಳ ದೇಸಿ ತಳಿಗಳನ್ನು ಅತಿ ಹೆಚ್ಚು ಉತ್ಪಾದಕತೆಯುಳ್ಳ ಅಡ್ಡ ತಳಿ ಹಾಗೂ ವಿದೇಶಿ ರಾಸುಗಳಿಂದ ಬದಲಾಯಿಸಲಾಗಿದ್ದು ಪ್ರಸ್ತುತ ಬಹುತೇಕ ರೈತರುಗಳ ಈ ಸುಧಾರಿತ ವಿದೇಶಿ ಹಾಗೂ ಅಡ್ಡ ತಳಿಗಳು ಜನಜನಿತವಾಗಿದ್ದು. ಇಂತಹ ಸಂಧರ್ಭದಲ್ಲಿ ಸಹಜ ಕೃಷಿಯ ಧ್ಯೇಯದಿಂದ ಉತ್ತೇಜಿತಗೊಂಡು ದೇಸಿತಳಿಗಳನ್ನು ಅಳವಡಿಕೆ ಮತ್ತು ಪೋಷಣೆ ರೈತವಲಯದಲ್ಲಿ ಹಠತ್ ಆಗಿ ಉಹಿಸಲಾಗದು. ಇದಲ್ಲದೆ, ಸಹಜ ಕೃಷಿಯಲ್ಲಿನ ಸಸ್ಯ ಜನ್ಯ ಬೆಳೆ ತ್ಯಾಜ್ಯಗಳ ಹೊಲಗದ್ದೆಗಳಲ್ಲಿ ಉಳಿಸಿಕೊಳ್ಳುವುದು ಪ್ರಮುಖ ಶಿಫಾರಸ್ಸಗಿದ್ದು, ಭಾರತ ಜಗತ್ತಿನಲ್ಲಿಯ ಅತಿ ಹೆಚ್ಚು ಹೈನುರಾಸುಗಳನ್ನು ಹೊಂದಿರುವ ದೇಶವಾಗಿರುವುದರಿಂದ ಕೊಯ್ಲಿನ ತದನಂತರ ಉಳಿಯುವ ಬೆಳೆ ತ್ಯಾಜ್ಯಗಳು ಈ ರಾಸುಗಳ ಪ್ರಮುಖ ಮೇವಿನ ಆಧಾರವಾಗಿರುತ್ತದೆ. ಸಹಜ ಕೃಷಿಯ ಅಳವಡಿಕೆಯ ಅನ್ವಯ ಬೆಳೆ ತ್ಯಾಜ್ಯಗಳ ಹೊಲಗದ್ದೆಗಳಲ್ಲಿ ಉಳಿಸಿಕೊಳ್ಳುವುದು ಬಹುಶಃ ಭಾರತೀಯ ಕೃಷಿಯಲ್ಲಿ ಉಹಿಸಲಾಗದಷ್ಟು ಕಷ್ಟವೆಂದರೆ ತಪ್ಪೆನಿಲ್ಲ.

ಸಹಜ ಕೃಷಿಯ ನಿರೀಕ್ಷೆಗಳು

ನಮ್ಮೆಲ್ಲರಿಗು ತಿಳಿದಿರುವಂತೆ ಮಿತಿಮೀರಿದ ರಾಸಾಯನಿಕಗಳ ಬಳಕೆಯಿಂದಾಗಿ ಕೃಷಿ ಭೂಮಿಯಷ್ಟೆಯಲ್ಲದೆ ಉತ್ಪಾಧಿಸಲ್ಪಟ್ಟ ಕೃಷಿ ಉತ್ಪನ್ನಗಳು ಸಹ ಬಳಕೆಗೆ ಯೊಗ್ಯವಲ್ಲದಷ್ಟು ಕೀಳು ಗುಣಮಟ್ಟ ತಲುಪುತ್ತಿರುವುದು ಅತಂಕದ ವಿಷಯ. ಅದುದ್ದರಿಂದ ಕೃಷಿ ಭೂಮಿಯ ಸಮಗ್ರ ಆರೋಗ್ಯ ನಿರ್ವಹಣೆಯೊಂದಿಗೆ ಗುಣಮಟ್ಟದ ಆಹಾರ ಉತ್ಪಾದನೆ ಸಹಜ ಕೃಷಿಯ ಕೂಗಿನ ಪ್ರಮುಖ ನಿರೀಕ್ಷೆಯಾಗಿದೆ. ಇದಲ್ಲದೆ, ಕೃಷಿ ಪ್ರದಾನ ದೇಶವಾದ ಭಾರತದಲ್ಲಿ ಶೇ. 68 ಕ್ಕಿಂತ ಅಧಿಕ ಜನಸಂಖ್ಯೆ ಕೃಷಿಯಲ್ಲಿ ತೊಡಗಿಸಿಕೊಂಡಿರುವುದರಿಂದ ಸಹಜ ಕೃಷಿಯ ತತ್ವಗಳನ್ನು ಅನುಸರಿಸಿಕೊಂಡು ಬೆಳೆಉತ್ಪಾದನೆಯಲ್ಲಿ ತೊಡಗಿಸಿಕೊಳ್ಳು ವುದರಿಂದ ಖರೀದಿಸಿ ತರುವ ಕೃಷಿ ಪರಿಕರಗಳ ಬದಲಾಗಿ ಸ್ಥಳಿಯವಾಗಿ ದೊರೆಯುವ ಪರಿಕರಿಗಳೊಂದಿಗೆ ಸಂಪ್ರದಾಯಕ ಜ್ಞಾನವನ್ನು ಬಳಸಿಕೊಳ್ಳುವುದರಿಂದ ಸ್ವದೇಶಿತನದೊಂದಿಗೆ ಆದಾಯ ದ್ವಿಗುಣಗೊಳಿಸುವಿಕೆ ಸಾಧ್ಯವೆಂಬುದು ಸಹಜ ಕೃಷಿಯ ನಿರೀಕ್ಷೆಯಾಗಿದೆ. ●

ಲೇಖಕರಿಗೆ ಸೂಚನೆಗಳು

"ಕೃಷಿ ವಿಜ್ಞಾನ" ತ್ರೈಮಾಸಿಕ ಪತ್ರಿಕೆಗೆ ಲೇಖನಗಳನ್ನು ಕಳುಹಿಸಲಿಚ್ಚಿಸುವವರು

- **ಲೇಖನಗಳು ರೈತ ಸಮುದಾಯಕ್ಕೆ ಉಪಯೋಗವಾಗುವಂತಿರಬೇಕು.**
- **ಲೇಖನಗಳನ್ನು ಎ–4 ಅಳತೆಯ ಕಾಗದದಲ್ಲಿ "ನುಡಿ ಅಥವಾ ಬರಹ ಲಿಪಿ"ಯಲ್ಲಿ ಬೆರಳಚ್ಚು ಮಾಡಿಸಿ ಇ–ಮೈಲ್ ಮೂಲಕ ಸಂಪಾದಕರಿಗೆ ಕಳುಹಿಸಿಕೊಡಬೇಕು.**
- **ಮೂಲ ಛಾಯಾಚಿತ್ರ ಅಥವಾ ಜೆ.ಪಿ.ಇ.ಜಿ. (JPEG) ಮಾದರಿಯಲ್ಲಿ ಸಾಫ್ಟ್ ಪ್ರತಿಗಳಲ್ಲಿ ಕೊಡಬೇಕು.**
- **ಪ್ರಕಟಣೆಗಾಗಿ ಸಲ್ಲಿಸುವ ಲೇಖನಗಳನ್ನು ತಮ್ಮ ನಿಯಂತ್ರಣಾಧಿಕಾರಿಗಳ ಮೂಲಕ ಕಳುಹಿಸಿಕೊಡಬೇಕು.**
- **ಲೇಖನವು ಮೂಲ ಬರಹವಾಗಿದ್ದು ಬೇರೆಲ್ಲೂ ಪ್ರಕಟವಾಗಿಲ್ಲವೆಂದು ಪ್ರಮಾಣೀಕರಿಸಬೇಕು.**

ಲೇಖಕರ ಅಭಿಪ್ರಾಯಗಳು ಸಂಪಾದಕ ವರ್ಗದವರ ಅಭಿಪ್ರಾಯಗಳಲ್ಲ.
ಲೇಖನಗಳನ್ನು ಪ್ರಕಟಣೆಗಾಗಿ ಆಯ್ಕೆ ಮಾಡುವ ನಿರ್ಧಾರ ಸಂಪಾದಕರಿಗೆ ಸೇರಿರುತ್ತದೆ.

ತುಡುವೆ ಜೇನು ಕುಟುಂಬಗಳ ನಿರ್ವಹಣೆಗಾಗಿ ಜೋಡಿ ರಾಣಿ ಪದ್ಧತಿ

ಕೆ. ಟಿ. ವಿಜಯಕುಮಾರ್, ಟಿ. ನಯಿಮಬಾನು, ಎನ್. ಎಸ್. ಭಟ್, ಜಿ. ಸಿ. ಕುಬೇರಪ್ಪ ಮತ್ತು ಹೆಚ್. ಎಲ್. ನಿತಿನ್ ಕುಮಾರ್
ಅಖಿಲ ಭಾರತ ಸುಸಂಘಟಿತ ಜೇನುನೊಣ ಮತ್ತು ಪರಾಗಸ್ಪರ್ಶಿಗಳ ಸಂಶೋಧನಾ ಪ್ರಾಯೋಜನೆ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು – 560065
e-Mail : vijayakumarktagri@gmail.com Mob. : 99860 51852

ಜೇನು ಹುಳುಗಳು ಸಂಘ ಜೀವಿಗಳು. ಜೇನು ಹುಳುಗಳಲ್ಲಿ ಮೂರುಜಾತಿಯ ನೊಣಗಳಿದ್ದು ರಾಣಿ, ಗಂಡು ಮತ್ತು ಕೆಲಸಗಾರ ನೊಣಗಳೆಂದು ವಿಂಗಡಿಸಲಾಗಿದೆ. ರಾಣಿ ಹುಳು ಕುಟುಂಬದಲ್ಲಿ ಸಂತಾನೋತ್ಪತಿ ಮಾಡುವ ಏಕೈಕ ಹೆಣ್ಣು. ರಾಣಿಯ ಮುಖ್ಯ ಕೆಲಸವೆಂದರೆ ಕುಟುಂಬದಲ್ಲಿ ಮೊಟ್ಟೆ ಇಡುವುದು. ಕೆಲಸಗಾರ ನೊಣಗಳು, ಬಂಜೆ ಹೆಣ್ಣು ನೊಣಗಳು, ಇವುಗಳು ಆಹಾರ ಸಂಗ್ರಹಣೆ, ಕುಟುಂಬದಲ್ಲಿ ಶುಚಿತ್ವ ಕಾಪಾಡುವುದು, ಕುಟುಂಬ ರಕ್ಷಣೆ, ರಾಣಿ ಹಾಗೂ ಮರಿ ಹುಳುಗಳ ಆರೈಕೆ, ಗೂಡುಕಟ್ಟುವುದು ಮುಂತಾದ ಕುಟುಂಬಕ್ಕೆ ಅವಶ್ಯಕತೆಯಿರುವ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತವೆ. ಗಂಡು ನೊಣಗಳು ಕನ್ಯೆಯುವ ರಾಣಿಗಳೊಂದಿಗೆ ಮಿಲನದಲ್ಲಿ ಭಾಗಿಯಾಗುವುದು ಪ್ರಧಾನ ಕೆಲಸವಾಗಿರುತ್ತದೆ.

ಸ್ವಾಭಾವಿಕವಾಗಿ ಜೇನುಕುಟುಂಬದಲ್ಲಿ ಕೇವಲ ಒಂದು ರಾಣಿ ಹುಳುವನ್ನು ಕಾಣಬಹುದು. ಆದರೆ ಎರಡು ರಾಣಿಗಳನ್ನು ನಿರ್ವಹಿಸಬಹುದಾದ ತಾಂತ್ರಿಕತೆಯನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಅಖಿಲ ಭಾರತ ಸುಸಂಘಟಿತ ಜೇನು ನೊಣ ಮತ್ತು ಪರಾಗಸ್ಪರ್ಶಿಗಳು ಪ್ರಾಯೋಜನೆಯು ಮೊಟ್ಟ ಮೊದಲಬಾರಿಗೆ ಜೇನುಕೃಷಿಕರಿಗೆ ಪರಿಚಯಿಸುತ್ತಿದೆ. ಜೋಡಿರಾಣಿ ಜೇನುಪೆಟ್ಟಿಗೆ ಪದ್ಧತಿಯಲ್ಲಿ ಎರಡು ರಾಣಿಗಳಿದ್ದು, ಹೆಚ್ಚು ಮೊಟ್ಟೆಯಿಡುವ ಸಾಮರ್ಥ್ಯದಿಂದಾಗಿ ಕುಟುಂಬವು ವೇಗವಾಗಿ ಅಭಿವೃದ್ಧಿಗೊಂಡು, ಕುಟುಂಬದಲ್ಲಿ ಜೇನುನೊಣಗಳ ಸಂಖ್ಯೆ ಹೆಚ್ಚಾಗುತ್ತದೆ. ಗೂಡಿನಲ್ಲಿ ಎರಡನೆಯ ರಾಣಿ ಬಳಸುವ ಮೂಲಕ ಜೇನು ಹುಳುಗಳ ಸಂಖ್ಯೆ ಹೆಚ್ಚಿಸಿ ಜೇನುತುಪ್ಪದ ಶೇಖರಣೆ ಸಾಮರ್ಥ್ಯವನ್ನು ವೃದ್ಧಿಸಬಹುದಾಗಿದೆ.

ಪಾಶ್ಚಾತ್ಯ ದೇಶಗಳಲ್ಲಿ ಯುರೋಪಿಯನ್ ಜೇನು ಕುಟುಂಬಗಳಲ್ಲಿ ಜೋಡಿರಾಣಿ ಪದ್ಧತಿಯ ಕುರಿತು ಹಲವಾರು ಯಶಸ್ವಿ ಪ್ರಯೋಗಗಳು ನಡೆದಿವೆ. ಇದೇ ಪ್ರಯೋಗವನ್ನು ಅನುಸರಿಸಿ 2011ರಲ್ಲಿ ತುಡುವೆಜೇನು ಕುಟುಂಬಗಳಿಗಾಗಿ ಜೋಡಿರಾಣಿ ಪೆಟ್ಟಿಗೆಯ ವಿನ್ಯಾಸವನ್ನು ಮಾಡಲಾಯಿತು. 2014 ರಿಂದ 2021ರವರೆಗೆ ಬಹುಕ್ಷೇತ್ರಗಳಲ್ಲಿ, ಈ ಪೆಟ್ಟಿಗೆಯ ಮೇಲೆ ಹಲವಾರು ಪ್ರಯೋಗಗಳನ್ನು ಕೈಗೊಂಡ ಮೇಲೆ ಐ.ಎಸ್.ಐ–ಎ ಪೆಟ್ಟಿಗೆಗಿಂತ ಜೋಡಿರಾಣಿ ಪೆಟ್ಟಿಗೆಯಲ್ಲಿ ಜೇನುತುಪ್ಪದ ಇಳುವರಿ ಹೆಚ್ಚಾಗಿರುವುದು ಕಂಡುಬಂದಿತು. ಎಂಟು ಚೌಕಟ್ಟುಗಳ ಪೆಟ್ಟಿಗೆಗಿಂತ ಜೋಡಿರಾಣಿ ಪೆಟ್ಟಿಗೆಯಲ್ಲಿ ಹೆಚ್ಚು ರಾಣಿ ಕಣಗಳು ವೃದ್ಧಿಯಾಗಿರುವುದನ್ನು ಗಮನಿಸಲಾಗಿದೆ. ಈ ಗುಣದಿಂದ ಜೇನುಕುಟುಂಬ ವಿಭಜನೆಗೆ ಜೋಡಿರಾಣಿ ಪೆಟ್ಟಿಗೆಯು ಹೆಚ್ಚು ಉಪಯುಕ್ತ. ಜೋಡಿರಾಣಿ ಪೆಟ್ಟಿಗೆಯಲ್ಲಿ ಎರಡುರಾಣಿ ಇರುವ ಕಾರಣ ಮೊಟ್ಟೆ ಇಡುವ ಸಾಮರ್ಥ್ಯವು ಹೆಚ್ಚಾಗಿ ಕುಟುಂಬವು ವೇಗವಾಗಿ ವೃದ್ಧಿಯಾಗುತ್ತದೆ. ಜೋಡಿರಾಣಿ ಪೆಟ್ಟಿಗೆಗೆ ಸಮ ವಯಸ್ಸಿನ ಯುವ ರಾಣಿಗಳನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಅವುಗಳ ಮೊಟ್ಟೆಯಿಡುವ ಸಾಮರ್ಥ್ಯ ಹಾಗೂ ಜೇನು ನೊಣಗಳ ಸಂಖ್ಯೆ ಹೆಚ್ಚಾಗುತ್ತದೆ, ಇದರಿಂದ ಪರಾಗ ಮತ್ತು ಜೇನುತುಪ್ಪದ ಇಳುವರಿ ಸರಾಗವಾಗಿ ಹೆಚ್ಚುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದ ಮೇಲೆ ಜೇನುಕೃಷಿಯಲ್ಲಿ ಜೋಡಿರಾಣಿ ಪದ್ಧತಿಯನ್ನು ಅಳವಡಿಸಿ ಕೊಳ್ಳಲು ಸೂಕ್ತ ಎಂದು ತಿಳಿದು ಬಂದಿದೆ. ಇದರೊಟ್ಟಿಗೆ ಬಹು ಸಂಖ್ಯೆಯುಳ್ಳ ಜೋಡಿರಾಣಿ ಪೆಟ್ಟಿಗೆಯ ಹುಳುಗಳು ಹೆಚ್ಚು ಆಹಾರ ಸಂಗ್ರಹಿಸುವುದರಿಂದ ಪರಾಗಸ್ಪರ್ಶಕ್ರಿಯೆ ವೃದ್ಧಿಗೊಂಡು ಬೆಳೆಗಳ ಇಳುವರಿಯು ಹೆಚ್ಚಿ, ಕುಟುಂಬ ಪಾಲಾಗುವಿಕೆಯು ಐ.ಎಸ್.ಐ–ಎ ಪೆಟ್ಟಿಗೆಗಿಂತ ಜೋಡಿರಾಣಿ ಪೆಟ್ಟಿಗೆಯಲ್ಲಿ ಕಡಿಮೆಯಾಗಿರುವುದು ದಾಖಲಿಸಲಾಗಿದೆ. ಆದ್ದರಿಂದ ಹೆಚ್ಚು ಜೇನುತುಪ್ಪ, ಬೆಳೆಗಳ ಹೆಚ್ಚು ಪರಾಗಸ್ಪರ್ಶ ಚಟುವಟಿಕೆ ಮತ್ತು ಕಡಿಮೆ ಕುಟುಂಬ ಪಲಾಯನ ಫಲಿತಾಂಶ ಕ್ಕಾಗಿ ಜೋಡಿರಾಣಿ ಪೆಟ್ಟಿಗೆಯನ್ನು ಅಳವಡಿಸಿಕೊಳ್ಳಲು ಶಿಫಾರಸ್ಸು ಮಾಡುತ್ತೇವೆ.

ಕ್ರ.ಸಂ.	ಬಿಡಿ ಭಾಗಗಳು		ISI ಮಾದರಿ ಪೆಟ್ಟಿಗೆ	ಜೋಡಿ ರಾಣಿ ಪೆಟ್ಟಿಗೆ
1		Bottom Board (ಅಡಿ ಹಲಗೆ)	A 361 mm B 296 mm C 50 mm	A 361 mm B 440 mm C 45 mm
2		Bees Spacer (ಮುಖದ್ವಾರದ ಪಟ್ಟಿ)	V 250 mm W 25 mm X 100 mm Y 50 mm	V 420 mm W 25 mm X 100 mm Y 100 mm
3		Brood chamber (ಸಂಸಾರ ಕೋಣೆ)	D 296 mm E 286 mm F 172 mm G 240 mm H 250 mm	D 435 mm E 286 mm F 172 mm G 240 mm H 415 mm
4		Top Cover (ಮುಚ್ಚಳ)	N 340 mm O 338 mm P 115 mm	N 340 mm O 465 mm P 115 mm
5		Brood frame (ಸಂಸಾರ ಕೋಣೆಯ ಚೌಕಟ್ಟು)	A 260 mm B 24 mm C 210 mm D 230 mm E 145 mm F 165 mm G 15 mm H 31 mm I 20 mm	A 260 mm B 24 mm C 210 mm D 230 mm E 145 mm F 165 mm G 15 mm H 31 mm I 20mm
6		Super chamber frame (ಜೇನು ಕೋಣೆಯ ಚೌಕಟ್ಟು)	J 260 mm K 24 mm L 210 mm M 230 mm N 65 mm O 85 mm P 15 mm Q 31 mm R 20 mm	J 260 mm K 24 mm L 210 mm M 230 mm N 65 mm O 85 mm P 15 mm Q 31 mm R 20 mm

ಕ್ರ. ಸಂ.	ಬಿಡಿ ಭಾಗಗಳು		ISI ಮಾದರಿ ಪೆಟ್ಟಿಗೆ	ಜೋಡಿ ರಾಣಿ ಪೆಟ್ಟಿಗೆ
7		Super chamber (ಜೇನು ಕೋಣೆ)	I 286 mm J 296 mm K 92 mm L 240 mm M 250 mm	I 286 mm J 435 mm K 92 mm L 240 mm M 415 mm
8		Queen excluder frame (ರಾಣಿ ನಿರ್ಭಂಧಕ ಚೌಕಟ್ಟು)		A 210 mm B 265 mm C 15 mm D 165 mm E 220 mm
9		Wire Mesh Frame (ಮೆಷ್ ಚೌಕಟ್ಟು)		A 210 mm B 265 mm C 15 mm D 165 mm E 220 mm
10		Inner cover (ಒಳ ಮುಚ್ಚಳ)	S 296 mm T 286 mm U 22 mm	S 215 mm T 286 mm U 22 mm
11		Inner Queen excluder mesh (ಒಳ ರಾಣಿ ನಿರ್ಭಂಧಕ ಮುಚ್ಚಳ)		S 215 mm T 286 mm U 22 mm

ಚಿತ್ರ 1: ಜೋಡಿ ರಾಣಿ ಪೆಟ್ಟಿಗೆಯ ಅಳತೆಯ ಮಾನದಂಡಗಳು

ಚಿತ್ರ 2: ಜೋಡಿರಾಣಿ ಪೆಟ್ಟಿಗೆಯಲ್ಲಿ ತುಡುವೆ ಜೇನುಕುಟುಂಬಗಳ ನಿರ್ವಹಣೆ

ಜೋಡಿರಾಣಿ ಪೆಟ್ಟಿಗೆಯ ವಿನ್ಯಾಸ

ಐ.ಎಸ್.ಐ–ಎ ಜೇನುಪೆಟ್ಟಿಗೆಯನ್ನು ಮಾದರಿಯನ್ನಾಗಿಟ್ಟು ಕೊಂಡು ಎರಡು ಸಂಸಾರ ಕೋಣೆಗಳುಳ್ಳ ಜೋಡಿರಾಣಿ ಪೆಟ್ಟಿಗೆಯನ್ನು ವಿನ್ಯಾಸ ಮಾಡಲಾಗಿದೆ. ಸುಮಾರು ಹನ್ನೆರಡು ಚೌಕಟ್ಟುಗಳನ್ನು ಈ ಪೆಟ್ಟಿಗೆಯಲ್ಲಿ ಅಳವಡಿಸಬಹುದಾಗಿದೆ. ಕುಟುಂಬಗಳ ನಡುವೆ ರಾಣಿನಿರ್ಬಂಧಕ ಹಾಳೆಯಿಂದ ಪೆಟ್ಟಿಗೆಯಲ್ಲಿನ ಎರಡು ಕುಟುಂಬಗಳನ್ನು ಬೇರ್ಪಡಿಸಲಾಗಿದೆ. ಎರಡು ಕುಟುಂಬಗಳ ಪ್ರವೇಶದ್ವಾರವನ್ನು ವಿರುದ್ಧ ದಿಕ್ಕಿಗೆ ಇಡಲಾಗಿದೆ. ಜೇನುತುಪ್ಪ ಮತ್ತು ಸಂಸಾರಕೋಣೆಯ ನಡುವೆರಾಣಿ ನಿರ್ಬಂಧಕ ಹಾಳೆಯನ್ನು ಇಡಲಾಗಿದೆ. ಜೋಡಿರಾಣಿ ಪೆಟ್ಟಿಗೆಗೆ ಬೇಕಾಗಿರುವ ಅಳತೆಗಳನ್ನು ಚಿತ್ರ 1 ರಲ್ಲಿ ತಿಳಿಸಲಾಗಿದೆ.

ಜೋಡಿರಾಣಿ ಪೆಟ್ಟಿಗೆಯು ಎರಡು ಕುಟುಂಬಗಳನ್ನು ಒಂದುಗೂಡಿಸುವ ವಿಧಾನ

ಸಮಾನ ಶಕ್ತಿ ಮತ್ತು ಒಂದೇ ವಯಸ್ಸಿನ ರಾಣಿಯನ್ನು ಹೊಂದಿರುವ ಎರಡು ಕುಟುಂಬಗಳನ್ನು ಆಯ್ಕೆ ಮಾಡುವ ಮೂಲಕ ಎರಡು ಜೇನು ಕುಟುಂಬಗಳನ್ನು ಒಂದುಗೂಡಿಸ ಲಾಗುತ್ತದೆ. ಈ ಕುಟುಂಬಗಳನ್ನು ಅಕ್ಕಪಕ್ಕದಲ್ಲಿ ಅವುಗಳ ಮುಖದ್ವಾರಗಳು ವಿರುದ್ಧ ದಿಕ್ಕಿನಲ್ಲಿ ಇರಿಸಲಾಗುತ್ತದೆ. ಕುಟುಂಬಗಳು ಹೊಂದಿಕೊಂಡ ಎರಡು ದಿನಗಳ ನಂತರ, ಒಂದು ಕುಟುಂಬವನ್ನು ಜೋಡಿರಾಣಿ ಪೆಟ್ಟಿಗೆಗೆ ವರ್ಗಾಯಿಸಬೇಕು. ಕುಟುಂಬದ ಪ್ರವೇಶದ್ವಾರದ ದಿಕ್ಕು ಮತ್ತು ಸ್ಥಳವು ಬದಲಾಗದಂತೆ ಎಚ್ಚರಿಕೆ ವಹಿಸಬೇಕು. ರಾಣಿ ನಿರ್ಬಂಧಕ ಹಾಳೆಯನ್ನು ಜೇನುತುಪ್ಪದಿಂದ ಲೇಪಿಸಿದ ಕಾಗದಕ್ಕೆ ಸುತ್ತಿ ಅದನ್ನು ಜೋಡಿರಾಣಿ ಪೆಟ್ಟಿಗೆಯ ಎರಡು ಕೋಣೆಗಳ ನಡುವೆ ಇರಿಸಲಾಗುತ್ತದೆ. ಮೊದಲ ಕುಟುಂಬವನ್ನು ವರ್ಗಾಯಿಸಿದ ಮೂರು ದಿನಗಳ ನಂತರ, ಇನ್ನೊಂದು ಕುಟುಂಬವನ್ನು ಮತ್ತೊಂದು ಕೋಣೆಗೆ ವರ್ಗಾಯಿಸಲಾಗುತ್ತದೆ ಮತ್ತು ಒಳಗಿನ ಮುಚ್ಚಳವನ್ನು ಕುಟುಂಬಗಳ ಮೇಲೆ ಪ್ರತ್ಯೇಕವಾಗಿ ಇಟ್ಟು ಮುಚ್ಚಳವನ್ನು ಮುಚ್ಚಲಾಗುತ್ತದೆ. ಎರಡು ಮೂರು ದಿನಗಳ ನಂತರ ಜೇನುನೊಣಗಳು ಎರಡು ಕೋಣೆಗಳ ನಡುವೆ ಇರುವ ಜೇನುತುಪ್ಪವನ್ನು ಲೇಪಿಸಿದ ಕಾಗದವನ್ನು ಕತ್ತರಿಸಿ ವಿಲೀನಗೊಳ್ಳಲು ಪ್ರಾರಂಭಿಸುತ್ತವೆ ಹಾಗೂ ಎರಡು ಕುಟುಂಬಗಳ ಕೆಲಸಗಾರ ಜೇನುನೊಣಗಳು ವಿಲೀನಗೊಳ್ಳುತ್ತವೆ. ಆದರೆ ಎರಡೂ ರಾಣಿಗಳು ಪ್ರತ್ಯೇಕ ವಾಗಿರುತ್ತವೆ. 5–6 ದಿನಗಳ ನಂತರ, ಕೆಲಸಗಾರ ನೊಣಗಳನ್ನು ಬೆರೆಸುವ ಮೂಲಕ ಕುಟುಂಬಗಳ ಅಸಾಮರಸ್ಯವನ್ನು ಪರೀಕ್ಷಿಸಲಾಗುತ್ತದೆ ಮತ್ತು ಯಾವುದೇ ವಿರೋಧಾಭಾಸದ ನಡವಳಿಕೆ ಕಂಡುಬರದಿದ್ದರೆ ಮಾತ್ರ, ಸುತ್ತಿದ ಕಾಗದವನ್ನು ತೆಗೆದು ಹಾಕಲಾಗುತ್ತದೆ. ರಾಣಿನಿರ್ಬಂಧಕ ಹಾಳೆಯನ್ನು ಕುಟುಂಬಗಳ ನಡುವೆ ಇಡಲಾಗುತ್ತದೆ. ಎರಡು ಕುಟುಂಬಗಳು ಒಂದಾದ ನಂತರ ವಾರಕ್ಕೊಮ್ಮೆ ನಿಯಮಿತವಾಗಿ ತಪಾಸಣೆ ಮಾಡಬೇಕು. ಜೇನುತುಪ್ಪದ ಪೆಟ್ಟಿಗೆಯನ್ನು ಇಡುವಾಗ ರಾಣಿ ನಿರ್ಬಂಧಕ ಹಾಳೆಯನ್ನು ಬಳಸಬೇಕು.

ಜೋಡಿರಾಣಿ ಪೆಟ್ಟಿಗೆಯಲ್ಲಿಎರಡು ತುಡುವೆ ಜೇನಿನ ಕುಟುಂಬಗಳನ್ನು ಒಂದುಗೂಡಿಸುವ ತಂತ್ರಜ್ಞಾನ

ಒಂದೇ ಸಾಮರ್ಥ್ಯವಿರುವ ಎರಡು ಕುಟುಂಬಗಳನ್ನು ಆಯ್ಕೆ ಮಾಡಿ

↓

ಎರಡು ದಿನಗಳ ನಂತರ, ಒಂದು ಕುಟುಂಬವನ್ನು ಜೋಡಿರಾಣಿ ಪೆಟ್ಟಿಗೆಯ ಸಂಸಾರಕೋಣೆಗೆ ವರ್ಗಾಯಿಸಿ

↓

ಮೊದಲ ಕುಟುಂಬವನ್ನು ವರ್ಗಾಯಿಸಿದ ಮೂರು ದಿನಗಳ ನಂತರ ಎರಡನೇ ಕುಟುಂಬವನ್ನು ವರ್ಗಾಯಿಸಿ.

↓

5–6 ದಿನಗಳ ನಂತರ, ಎರಡುಕುಟುಂಬಗಳ ಕೆಲಸಗಾರ ನೊಣಗಳು ಬೆರೆಯುತ್ತವೆ

↓

ಒಳ ಹಲಗೆಯನ್ನು ಕುಟುಂಬಗಳ ಮೇಲೆ ಪ್ರತ್ಯೇಕವಾಗಿ ಇಟ್ಟು ಮೇಲಿನ ಮುಚ್ಚಳ ಮುಚ್ಚಿ

↓

ಕುಟುಂಬಗಳು ಒಂದಾದ ನಂತರ ವಾರಕ್ಕೊಮ್ಮೆ ನಿರಂತರ ತಪಾಸಣೆ ಮಾಡಬೇಕು

ಜೋಡಿರಾಣಿ ಪೆಟ್ಟಿಗೆಯ ನಿರ್ವಹಣೆ

ಈ ಕೆಳಗೆ ನೀಡಿರುವ ನಿರ್ವಹಣಾ ಕ್ರಮಗಳನ್ನು ಅನುಸರಿಸಿದರೆ ಬಹು ದಿನಗಳ ಕಾಲ ಜೇನು ಕುಟುಂಬಗಳನ್ನು ಜೋಡಿರಾಣಿ ಪೆಟ್ಟಿಗೆಯಲ್ಲಿ ಯಶಸ್ವಿಯಾಗಿ ಸಾಕಾಣಿಕೆ ಮಾಡಬಹುದು.

- ◆ ನಿಯಮಿತವಾದ ಕುಟುಂಬಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆ ಅತ್ಯಗತ್ಯ
- ◆ ಆಹಾರ ಅಭಾವ ಕಾಲದಲ್ಲಿ ಕುಟುಂಬಗಳಿಗೆ ಸಕ್ಕರೆ ಪಾಕ ಉಣಿಸಬೇಕು

ಚಿತ್ರ 3: ಜೇನುತುಪ್ಪ ತುಂಬಿರುವ ಜೋಡಿರಾಣಿ ಪೆಟ್ಟಿಗೆಯ ಚೌಕಟ್ಟುಗಳು

- ಕುಟುಂಬಗಳ ಮಧ್ಯೆ ಜಗಳವನ್ನು ತಡೆಯಲು ಜೋಡಿರಾಣಿ ಪೆಟ್ಟಿಗೆಗಳ ನಡುವೆ ಹೆಚ್ಚು ಅಂತರವಿರಬೇಕು
- ಹೊಸ ರಾಣಿಕಣಗಳ ಬೆಳವಣಿಗೆಯ ಬಗ್ಗೆ ಗಮನ ನೀಡಬೇಕು, ಬೇಡವಾದಲ್ಲಿ ಅವುಗಳನ್ನು ತೆಗೆಯಬೇಕು
- ಪೆಟ್ಟಿಗೆಯಲ್ಲಿ ಜೇನು ನೊಣಗಳ ಸಂಖ್ಯೆ ಹೆಚ್ಚಾದ ಹಾಗೆ ಕುಟುಂಬಗಳನ್ನು ಇಬ್ಭಾಗ ಮಾಡಬೇಕು
- ನೈಸರ್ಗಿಕ ಅಥವಾ ಕೃತಕವಾಗಿ ನೀರನ್ನು ಒದಗಿಸಬೇಕು (ಪೆಟ್ಟಿಗೆಯೊಳಗಿನ ಉಷ್ಣಾಂಶವನ್ನು ನಿಯಂತ್ರಿಸಲು ಮತ್ತು ಆಹಾರದ ಜೊತೆ ಬೆರೆಸಲು ಜೇನು ನೊಣಗಳು ನೀರನ್ನು ಉಪಯೋಗಿಸುತ್ತವೆ)
- ಕುಟುಂಬಗಳನ್ನು ರೋಗ ಮತ್ತು ಪೀಡೆ ಕೀಟಗಳಿಂದ ಕಾಪಾಡಲು ಪೆಟ್ಟಿಗೆಯ ಸುತ್ತ ಸ್ವಚ್ಛವಾಗಿಟ್ಟುಕೊಳ್ಳಬೇಕು
- ಕುಟುಂಬದಲ್ಲಿ ಕೀಟ, ರೋಗ ಬಾಧೆ ಮತ್ತು ಆಹಾರ ಸಂಗ್ರಹಣೆಯನ್ನು ಗಮನಿಸಲು ಪ್ರತಿ ವಾರಕ್ಕೊಮ್ಮೆ ಪೆಟ್ಟಿಗೆಯನ್ನು ಪರೀಕ್ಷಿಸಬೇಕು
- ತಳ ಹಲಗೆಯನ್ನು ವಾರಕ್ಕೊಮ್ಮೆ , ಶುಚಿಗೊಳಿಸಿ ಅದರಲ್ಲಿರುವ ಸಂಧುಗಳನ್ನು ಮುಚ್ಚಬೇಕು
- ಕುಟುಂಬದಲ್ಲಿನ ಉಷ್ಣಾಂಶವನ್ನು ನಿಯಂತ್ರಿಸಲು ಜೋಡಿ ರಾಣಿ ಪೆಟ್ಟಿಗೆಯನ್ನು ನೆರಳಿನಲ್ಲಿಡಬೇಕು. ಇಲ್ಲವಾದರೆ ಕೃತಕವಾಗಿ ನೆರಳನ್ನು ಒದಗಿಸಬೇಕು
- ಜೇನು ಸುಗ್ಗಿಯ ಕಾಲದಲ್ಲಿ ಅವಶ್ಯಕತೆವಿದ್ದರೆ ಹೆಚ್ಚುವರಿಯಾಗಿ ಮೇಣದ ಹಾಳೆಯಿರುವ ಜೇನುತುಪ್ಪದ ಕೋಣೆಯನ್ನು ನೀಡಬೇಕು

ಜೋಡಿರಾಣಿ ಪದ್ಧತಿಯ ಉಪಯೋಗಗಳು

- ಹೆಚ್ಚು ಜೇನು ನೊಣಗಳ ಸಂಖ್ಯೆ ಇರುವ ಕಾರಣ ಬೆಳೆಗಳಲ್ಲಿ ಪರಾಗಸ್ಪರ್ಶಕ್ರಿಯೆ ಹೆಚ್ಚಿಸಲು ಬಹುಉಪಯುಕ್ತ
- ಜೋಡಿರಾಣಿ ಪೆಟ್ಟಿಗೆಯ ಕುಟುಂಬಗಳು ಬಹು ಬೇಗ ವೃದ್ಧಿಯಾಗುತ್ತವೆ ಮತ್ತು ಕೆಲಸಗಾರ ನೊಣಗಳು ಸ್ಥಳೀಯವಾಗಿ ವೈವಿಧ್ಯತೆಯನ್ನು ಹೊಂದುತ್ತವೆ. ಈ ವೈವಿಧ್ಯತೆಯು, ಹುಳುಗಳಲ್ಲಿ ರೋಗನಿರೋಧಕ ಶಕ್ತಿ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುತ್ತದೆ
- ತುಡುವೆಜೇನಿನಲ್ಲಿ ಜೋಡಿರಾಣಿ ಪೆಟ್ಟಿಗೆಯ ವಿಧಾನವನ್ನು ಅಳವಡಿಸಿಕೊಳ್ಳುವುದರಿಂದ ಜೇನುಕುಟುಂಬಗಳ ಪಲಾಯನ ತಡೆಯಬಹುದು.
- ಜೋಡಿರಾಣಿ ಪೆಟ್ಟಿಗೆಯಲ್ಲಿ ಬಹುಬೇಗ ಕುಟುಂಬಗಳನ್ನು ಪಾಲು ಮಾಡುವ ಮೂಲಕ ರೈತರು ಆರ್ಥಿಕವಾಗಿ ಸಬಲರಾಗಬಹುದು
- ಈ ಪೆಟ್ಟಿಗೆಯಿಂದ ಹೆಚ್ಚು ರಾಣಿ ಕಣಗಳನ್ನು ಉತ್ಪಾದಿಸಿ ಹೊಸ ರಾಣಿಗಳನ್ನು ಪಡೆಯಬಹುದು
- ಜೋಡಿರಾಣಿ ಪದ್ಧತಿಯಿಂದ ಹೆಚ್ಚು ಜೇನುತುಪ್ಪದ ಇಳವರಿ ಗಳಿಸಬಹುದು
- ಸರಿಯಾದ ರೀತಿಯಲ್ಲಿ ಜೋಡಿರಾಣಿ ಪೆಟ್ಟಿಗೆಯನ್ನು ನಿರ್ವಹಣೆ ಮಾಡಿದರೆ, ಜೇನು ಕುಟುಂಬಗಳನ್ನು ಬಹುಕಾಲ ಉಳಿಸಿಕೊಳ್ಳಬಹುದು
- ಜೋಡಿರಾಣಿ ಪೆಟ್ಟಿಗೆಗಳನ್ನು ಪೋಷಕ ಕುಟುಂಬಗಳ ಸಂಖ್ಯೆ ವೃದ್ಧಿಗೆ ಇಟ್ಟುಕೊಳ್ಳಲು ಬಳಸಬಹುದು
- ಹೆಚ್ಚು ನಿರ್ವಹಣೆಯ ಅಗತ್ಯವಿರುವುದರಿಂದ ಜೋಡಿರಾಣಿ ಪೆಟ್ಟಿಗೆಗಳನ್ನು ಕುಟುಂಬಗಳ ವಿಭಜನೆ, ಹೊಸ ರಾಣಿ ಉತ್ಪಾದಕತೆಗೆ ಬಳಸಿಕೊಳ್ಳಲು ಸೂಕ್ತ. ●

ಕೃಷಿ ವಿಜ್ಞಾನ, ಏಪ್ರಿಲ್–ಜೂನ್, 2022, ಸಂಚಿಕೆ 46(2) / 23–25

ಬೇಸಿಗೆಯಲ್ಲಿ ರಾಗಿ ಬೇಸಾಯ

ಟಿ. ಎಸ್. ಸುಕನ್ಯ, ಟಿ. ಇ. ನಾಗರಾಜ ಮತ್ತು ಸಿ. ಚೈತ್ರ
ಅಖಿಲ ಭಾರತ ಸುಸಂಘಟಿತ ಸಂಶೋಧನಾ ಪ್ರಾಯೋಜನೆ (ತೃಣ ಧಾನ್ಯ), ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು – 560065
e-Mail : tssukanya@gmail.com Mob. : **94489 90940**

ರಾಗಿ ಬೆಳೆಯನ್ನು ಆಫ್ರಿಕಾ ಮತ್ತು ಏಷ್ಯಾ ಖಂಡಗಳಲ್ಲಿ ಹೆಚ್ಚಾಗಿ ಕಾಣಬಹುದು. ಹಿಂದೆ 'ರಾಮಧಾನ್ಯ' ಎಂದು ಕನಕದಾಸರಿಂದ ಕರೆಸಿಕೊಂಡ ಈ ಬೆಳೆ ಪೋಷಕಾಂಶಗಳ ಖಜಾನೆಯಾಗಿದೆ. ರಾಗಿಯು ಬಡಜನರ ಹಾಗೂ ಶ್ರಮ ಜೀವಿಗಳ ಆಹಾರ ಬೆಳೆಯಾಗಿತ್ತು. ಆದರೆ ಈಗ ರಾಗಿಯಲ್ಲಿರುವ ಪೌಷ್ಟಿಕಾಂಶದ ಮಹತ್ವದಿಂದ ಮತ್ತು ಬರಗಾಲಕ್ಕೆ ಇದರ ಹೆಚ್ಚಿನ ಸಹಿಷ್ಣುತೆ, ಇನ್ನು ಅನೇಕ ಅನುಕೂಲಗಳಿಂದ ರಾಗಿಯನ್ನು ಬಳಸುವ ಜನರ ಸಂಖ್ಯೆ ಹೆಚ್ಚಿದೆ. ರಾಗಿಯಲ್ಲಿ ಕ್ಯಾಲ್ಸಿಯಂ ಮತ್ತು ಕಬ್ಬಿಣ ಹೇರಳವಾಗಿದೆ. ರಾಗಿಯಲ್ಲಿ ಉತ್ತಮ ಗುಣಮಟ್ಟದ ಪ್ರೋಟಿನ್ ಅಂಶ ಸಮೃದ್ಧವಾಗಿರುವುದರಿಂದ ಅಪೌಷ್ಟಿಕತೆಯಿಂದ ಬಳಲುವವರಿಗೆ ಹೇಳಿ ಮಾಡಿಸಿದ ಆಹಾರ. ಇದಲ್ಲದೆ ರಾಗಿಯಲ್ಲಿರುವ ಸಕ್ಕರೆಯು ಅಂಶವು ನಿಧಾನವಾಗಿ ಪಚನವಾಗುವಂತಿದ್ದು ಮಧುಮೇಹ ರೋಗಿಗಳಿಗೆ ಉಪಯುಕ್ತವಾಗಿದೆ. ಇದರಲ್ಲಿರುವ ಅಧಿಕ ನಾರಿನಾಂಶವು ಮಲಬದ್ಧತೆ ಹಾಗೂ ಬೊಜ್ಜಿನ ಶೇಖರಣೆಯನ್ನು ನಿವಾರಿಸುವುದಲ್ಲದೆ ಆರೋಗ್ಯ ನಿರ್ವಹಣೆಗೆ ಸಹಾಯಮಾಡುತ್ತದೆ. ರಾಗಿ ಎಂಥಹ ಬರವಾದರು ಮೇವನ್ನಾದರೂ ಕೊಡಬಲ್ಲ ಬೆಳೆ. ಈ ಬೆಳೆಯನ್ನು ಕೇವಲ ಸರಾಸರಿ 350 ಮೀ.ಮೀ. ಮಳೆ ಬರುವ ಪ್ರದೇಶಗಳಲ್ಲೂ ಬೆಳೆಯಬಹುದು. ಬೇರೆ ಬೆಳೆಗಳಿಗೆ ಹೋಲಿಸಿದಾಗ ಇದಕ್ಕೆ ಬರುವ ರೋಗ ಹಾಗೂ ಕೀಟಗಳ ಹಾವಳಿ ಕಡಿಮೆ ಮತ್ತು ಇದರ ಮೇವು ದನಕರುಗಳಿಗೆ ಉತ್ತಮ ಆಹಾರ. ಸಂಯುಕ್ತ ರಾಷ್ಟ್ರೀಯ ಒಕ್ಕೂಟವು ಮುಂದಿನ 2023ರನ್ನು ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷವೆಂದು ಘೋಷಿಸಿದ್ದಾರೆ. ಈ ಸಂದರ್ಭದಲ್ಲಿ ಬದಲಾಗುತ್ತಿರುವ ಹವಾಮಾನ ವೈಪರಿತ್ಯಗಳಿಗನುಗುಣವಾಗಿ ಹೊಸ ಸುಧಾರಿತ ತಂತ್ರಜ್ಞಾನಗಳನ್ನು ರೂಪಿಸಲು ಮತ್ತು ಸಂಶೋಧನೆಗಳನ್ನು ಚರ್ಚಿಸಲು ಮತ್ತು ವಿಶ್ವಮಟ್ಟದಲ್ಲಿ ಸಿರಿಧಾನ್ಯಗಳ ಮಹತ್ವಗಳನ್ನು ತಿಳಿಸಿ ವಿಶ್ವಮಾರುಕಟ್ಟೆಯಲ್ಲಿ ಸಿರಿಧಾನ್ಯಗಳಿಗೆ ಹೆಚ್ಚಿನ ಸ್ಥಾನ ಕಲ್ಪಿಸುವ ಒಳ್ಳೆಯ ಅವಕಾಶಗಳಿವೆ. ಸಿರಿಧಾನ್ಯಗಳಲ್ಲಿ ಮುಖ್ಯ ವಾದ ರಾಗಿಗೆ ಇನ್ನೂ ಹೆಚ್ಚಿನ ಮಹತ್ವ ಸಿಗುವುದಿದೆ.

ನಮ್ಮ ದೇಶದಲ್ಲಿ ಸುಮಾರು ಹತ್ತು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಈ ಬೆಳೆಯನ್ನು ಮುಖ್ಯವಾಗಿ ಕರ್ನಾಟಕ ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಉತ್ತರಾಖಂಡ್, ಛತ್ತೀಸ್‌ಗಡ್ ರಾಜ್ಯಗಳಲ್ಲಿ ನೋಡಬಹುದು. ನಮ್ಮ ರಾಜ್ಯದಲ್ಲಿ ರಾಗಿ ಪ್ರತಿಶತ 64 ರಷ್ಟು ಕ್ಷೇತ್ರ ಕರ್ನಾಟಕ ರಾಜ್ಯದಲ್ಲಿದೆ ಮತ್ತು ಉತ್ಪಾದನೆಯ ಪ್ರತಿಶತ 50ಕ್ಕೂ ಹೆಚ್ಚಿನ ಭಾಗವನ್ನು ನಮ್ಮ ರಾಜ್ಯ ಹೊಂದಿದೆ. ಬೇಸಿಗೆ ಬೆಳೆಯನ್ನು ಜನವರಿಯಿಂದ ಫೆಬ್ರವರಿ ತಿಂಗಳೊಳಗೆ ಬಿತ್ತನೆ ಮಾಡಬೇಕು. ನೀರಿನಾಶ್ರಯದಲ್ಲಿ ಈ ಬೆಳೆಯನ್ನು ಬೇಸಿಗೆಯಲ್ಲಿ ಬೆಳೆದಾಗ ಹೆಚ್ಚಿನ ಇಳುವರಿಯನ್ನು ಪಡೆಯಬಹುದು. ಉತ್ತಮ ಬೆಳೆ ನಿರ್ವಹಣೆ ಮತ್ತು ಈ ಬೆಳೆಗೆ ಬೇಸಿಗೆಯಲ್ಲಿ ರೋಗ ಕೀಟಗಳ ಹಾವಳಿ ಕಡಿಮೆ. ಕರ್ನಾಟಕ ರಾಜ್ಯದ ದಕ್ಷಿಣ ಜಿಲ್ಲೆಗಳಾದ ಮೈಸೂರು, ಮಂಡ್ಯ,

ರೈತರ ಹೊಲದಲ್ಲಿನ ರಾಗಿ ಬೆಳೆಯ ಹೂವಿನ ಹಂತ

ಹಾಸನ, ಬೆಂಗಳೂರು ಗ್ರಾಮಾಂತರ ಇನ್ನು ಕೆಲವು ಜಿಲ್ಲೆಗಳಲ್ಲಿ ಈ ಬೇಸಿಗೆ ಬೆಳೆಯನ್ನು ಕಾಣಬಹುದು. ರಾಜ್ಯದಲ್ಲಿ ರಾಗಿ ಬೆಳೆಯ ಕ್ಷೇತ್ರದ ಪ್ರತಿಶತ ಶೇ. 90 ಬೆಳೆಯನ್ನು ಮುಂಗಾರಿನಲ್ಲಿ ಹಾಗೂ ಇನ್ನುಳಿದ ಶೇ. 10 ರಷ್ಟು ಬೆಳೆಯನ್ನು ಬೇಸಿಗೆ ಹಾಗೂ ಚಳಿಗಾಲದಲ್ಲಿ ಕಾಣಬಹುದು.

ಬೇಸಿಗೆ ಕಾಲಕ್ಕೆ ಸುಧಾರಿತ ರಾಗಿ ತಳಿಗಳು

ಬೇಸಿಗೆಯಲ್ಲಿ ಬೆಳೆಯುವ ತಳಿಗಳು ಅಲ್ಪಾವಧಿಯಿಂದ ಮಧ್ಯಮಾವಧಿ ಹೊಂದಿದ್ದು ಬೇಸಿಗೆ ಬೆಳೆಗೆ ಕೃಷಿ ವಿಶ್ವವಿದ್ಯಾನಿಲಯದಿಂದ ಶಿಫಾರಸ್ಸು ಮಾಡಲಾಗಿದೆ.

ಜಿ.ಪಿ.ಯು. 26 : ಈ ತಳಿಯ ಅವಧಿ 100–105 ದಿನಗಳು. ಹೆಕ್ಟೇರಿಗೆ 35 ಕ್ವಿ/ಹೆ. ಇಳುವರಿಯ ಸಾಮರ್ಥ್ಯ ಹೊಂದಿದ್ದು ನೇರಳೆ ಬಣ್ಣದ ತೆನೆ ಹೊಂದಿರುತ್ತವೆ ಹಾಗೂ ಗಂಟುಗಳು ನೇರಳೆ ಬಣ್ಣದಿಂದ ಕೂಡಿರುತ್ತದೆ.

ಜಿ.ಪಿ.ಯು. 66 ತಳಿಯ ನೋಟ

ಜಿ.ಪಿ.ಯು. 45 : ಈ ತಳಿಯ ಅವಧಿ 95–100 ದಿನಗಳಾಗಿದ್ದು ಇಳುವರಿಯ ಸಾಮರ್ಥ್ಯ ಸರಾಸರಿ 30 ಕ್ವಿ./ಹೆ. ಇರುತ್ತದೆ. ಅಲ್ಪಾವಧಿ ತಳಿಯಾಗಿದ್ದು ಮಧ್ಯಮ ಗಾತ್ರದ ತೆನೆಗಳಿದ್ದು ಬೆಂಕಿರೋಗಕ್ಕೆ ನಿರೋಧಕತೆ ಹೊಂದಿದೆ.

ಜಿ.ಪಿ.ಯು. 48 : ಇದರ ಅವಧಿ 100–105 ದಿನಗಳು. ಈ ತಳಿಯು 30 ಕ್ವಿಂಟಾಲ್/ಹೆ. ಸಾಮರ್ಥ್ಯ ಹೊಂದಿದ್ದು ಬೆಂಕಿ ರೋಗಕ್ಕೆ ನಿರೋಧಕತೆ ಹೊಂದಿದೆ.

ಇಂಡಾಫ್ 5 : ಎಲ್ಲಾ ಕಾಲಕ್ಕೂ ಸೂಕ್ತವಾದ ಈ ತಳಿಯು 105–110 ದಿನಗಳ ಅವಧಿ ಹೊಂದಿದ್ದು 30 ಕ್ವಿ/ಹೆ. ಇಳುವರಿ ಸಾಮರ್ಥ್ಯವಿರುತ್ತದೆ. ಎತ್ತರವಾದ ಬೆಳೆಯಾಗಿರುವುರಿಂದ ಧಾನ್ಯದ ಇಳುವರಿ ಜೊತೆಗೆ ಹೆಚ್ಚು ಮೇವನ್ನು ಒದಗಿಸುತ್ತದೆ.

ಇಂಡಾಫ್ 9 : 95–100 ದಿನಗಳು ಅಲ್ಪಾವಧಿ ತಳಿಯಾಗಿದ್ದು ನೇರಳೆ ಬಣ್ಣದ ತೆನೆ ಹೊಂದಿದ್ದು ಗಂಟುಗಳು ನೇರಳೆ ಬಣ್ಣದಿಂದ ಕೂಡಿರುತ್ತದೆ. ಈ ತಳಿಯು 30 ಕ್ವಿ/ಹೆ. ಇಳುವರಿ ಕೊಡುತ್ತದೆ.

ಎಂ.ಎಲ್. 365 : ಈ ತಳಿಯ ಅವಧಿ 105–110 ದಿನಗಳು, 35 ಕ್ವಿ/ಹೆ. ಸಾಮರ್ಥ್ಯ ಹೊಂದಿದ್ದು ಮಧ್ಯಮ ಗಾತ್ರದ ತೆನೆ ಹೊಂದಿರುತ್ತದೆ. ಇಲುಕುಗಳ ತುದಿ ಒಳಭಾಗಕ್ಕೆ ಬಾಗಿರುತ್ತದೆ ಮತ್ತು ಬೆಂಕಿರೋಗಕ್ಕೆ ನಿರೋಧಕ ಗುಣ ಹೊಂದಿರುತ್ತದೆ.

ಹೆಚ್.ಆರ್. 911 : ಈ ತಳಿಗೆ 115–120 ದಿನಗಳ ಅವಧಿಯಿದ್ದು ಎತ್ತರವಾದ ತಳಿಯಾಗಿದೆ ಮತ್ತು ಇದರ ಇಳುವರಿ ಸಾಮರ್ಥ್ಯ 35 ಕ್ವಿ/ಹೆ.

ಬೇಸಿಗೆ ಬೆಳೆಯ ಬೇಸಾಯ ಕ್ರಮಗಳು

ಎಕರೆಗೆ 4 ಟನ್ ಕೊಟ್ಟಿಗೆ ಗೊಬ್ಬರವನ್ನು ಮಣ್ಣಿನಲ್ಲಿ ಸೇರಿಸಬೇಕು. ಸುಮಾರು 2 ಕೆ.ಜಿ. ಬಿತ್ತನೆ ಬೀಜವನ್ನು 150 ಗ್ರಾಂ ಅಜೋಸ್ಪಿರಿಲ್ಲಂ ಜೈವಿಕ ಗೊಬ್ಬರದಿಂದ ಲೇಪನ ಮಾಡಿ ಬಿತ್ತನೆ ಬೀಜವನ್ನು 1.5 ಗುಂಟೆ ಪ್ರದೇಶದಲ್ಲಿ ಸಸಿಮಡಿಗಳನ್ನು ತಯಾರು ಮಾಡಬೇಕು. 25 ಅಡಿ ಉದ್ದ, 4 ಅಡಿ ಅಗಲ ಮತ್ತು 4 ಅಂಗುಲ ಎತ್ತರದ 15 ಸಸಿಮಡಿಗಳನ್ನು ತಯಾರು ಮಾಡಿ 3 ಅಂಗುಲ ಅಂತರದ ಸಾಲಿನಲ್ಲಿ ಬಿತ್ತುವುದು ಮತ್ತು ಇದಕ್ಕೆ ಸುಮಾರು 50 ಕೆ.ಜಿ. ಕೊಟ್ಟಿಗೆ ಗೊಬ್ಬರ, 7.5 ಕಿ. ಗ್ರಾಂ.ನಷ್ಟು ಅಮೋನಿಯಂ ಸಲ್ಫೇಟ್, 15 ಕೆ.ಜಿ. ಸೂಪರ್ ಫಾಸ್ಫೇಟ್, 7.5 ಕಿ. ಗ್ರಾಂ. ಮ್ಯೂರಿಯೇಟ್ ಆಫ್ ಪೋಟ್ಯಾಶ್ ರಸಗೊಬ್ಬರಗಳ ಜೊತೆಗೆ 300 ಗ್ರಾಂ ಸತುವಿನ ಸಲ್ಫೇಟನ್ನು ಬಿತ್ತನೆಗೆ ಮುಂದೆ ಸಸಿಮಡಿಗಳಿಗೆ ಸಮನಾಗಿ ಬೆರೆಸಬೇಕು.

ಬಿತ್ತನೆ ಮಾಡಿದ 10–12 ದಿನಗಳ ನಂತರ 4 ಕಿ. ಗ್ರಾಂ. ಯೂರಿಯಾವನ್ನು 15 ಸಸಿಮಡಿಗಳಿಗೆ ಸಮನಾಗಿ ಮೇಲುಗೊಬ್ಬರವಾಗಿ ಕೊಡುವುದು.

ಸಸಿ ಮಡಿಯಿಂದ ಎಷ್ಟು ದಿನಗಳ ಸಸಿಗಳನ್ನು ನಾಟಿ ಮಾಡಬೇಕು?

ಸುಮಾರು 20–22 ದಿನಗಳ ಸಸಿಗಳನ್ನು 9 ಅಂಗುಲದ ಸಾಲುಗಳಲ್ಲಿ ಮುಖ್ಯ ಭೂಮಿಯಲ್ಲಿ ನಾಟಿ ಮಾಡುವುದು. ನಾಟಿಯ ಸಮಯದಲ್ಲಿ ಎಕರೆಗೆ 20 ಕಿ. ಗ್ರಾಂ. ಸಾರಜನಕ, 20 ಕಿ. ಗ್ರಾಂ. ರಂಜಕ ಮತ್ತು 20 ಕಿ. ಗ್ರಾಂ. ಪೋಟ್ಯಾಶ್

ಪೋಷಕಾಂಶಗಳನ್ನು ಒದಗಿಸುವ ರಸಗೊಬ್ಬರಗಳನ್ನು ಮೇಲುಗೊಬ್ಬರವಾಗಿ ಕೊಡಬೇಕು.

ನೀರಿನ ನಿರ್ವಹಣೆ

ನೀರಾವರಿ ಪ್ರದೇಶದಲ್ಲಿ ಮರಳು ಮಿಶ್ರಿತ ಮಣ್ಣಾದರೆ 8 ದಿನಗಳಿಗೊಮ್ಮೆ ನೀರು ಹಾಯಿಸುವುದರಿಂದ ತೇವಾಶ ಕಾಪಾಡಬಹುದು. ಜೇಡಿ/ಕಪ್ಪು ಮಣ್ಣಿನಲ್ಲಿ 15 ದಿನಗಳಿಗೊಮ್ಮೆ ನೀರು ಕೊಡಬೇಕು. ನಾಟಿ ಮಾಡಿದ 20 ದಿನಗಳ ಅಂತರದ ನಂತರ ಪ್ರತಿ 10 ದಿನಗಳ ಅಂತರದಲ್ಲಿ 5 ಬಾರಿ ನೀರು ಕೊಡಬೇಕು. ಹೀಗೆ ಒಟ್ಟು 8 ಬಾರಿ ನೀರು ಹಾಯಿಸುವುದರಿಂದ ಉತ್ತಮ ಇಳುವರಿ ಪಡೆಯಬಹುದು. ಬೆಳೆಯ ಮುಖ್ಯ ಹಂತಗಳಲ್ಲಿ (ನಾಟಿ, ತೆಂಡೆ, ಪರಾಗಸ್ಪಶಕ, ಕಾಳು ತುಂಬುವಾಗ) ಮಣ್ಣಿನಲ್ಲಿ ಸಾಕಷ್ಟು ತೇವಾಂಶವಿರಬೇಕು.

ಕಳೆ ನಿರ್ವಹಣೆ

ನಾಟಿಮಾಡಿದ ಒಂದು ದಿವಸದ ನಂತರ ಎಕರೆಗೆ 0.6 ಲೀ. ಬ್ಯುಟಾಕ್ಲೋರ್ ಶೇ. 50 ಇ.ಸಿ. ಯನ್ನು 300 ಲೀ. ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡುವುದು. ನಾಟಿಯಾದ 15 ರಿಂದ 20 ದಿನಗಳೊಳಗೆ ಎಕರೆಗೆ 0.5 ಕಿ. ಗ್ರಾಂ. 2. 4–ಡಿ ಸೋಡಿಯಂ ದ್ರಾವಣ ಶೇ. 80 ಡಬ್ಲ್ಯು.ಪಿ.ಯನ್ನು 200 ಲೀ ನೀರಲ್ಲಿ ಬೆರಸಿ ಸಿಂಪರಣೆ ಮಾಡುವುದು.

ಬೇಸಿಗೆ ಬೆಳೆಗೆ ಬರುವ ಮುಖ್ಯ ರೋಗ ಮತ್ತು ಕೀಟಗಳು

ರೋಗಾಣುಗಳ ಸಂಖ್ಯೆ, ಮೋಡ ಕವಿದ ವಾತಾವರಣ, ಅಕ್ಟೋಬರ್‌ನಲ್ಲಿ ಜಡಿಮಳೆ, ತೆನೆ ಬರುವ ಸಮಯದಲ್ಲಿ ವಾತಾವರಣದ ಗಾಳಿಯ ತೇವಾಂಶ ಶೇಕಡ 80ರಷ್ಟು ಇದ್ದಾಗ ನಾಟಿ ಮಾಡಿ, ಸಾರಜನಕಯುಕ್ತ ಗೊಬ್ಬರಗಳನ್ನು ಅಧಿಕವಾಗಿ ಬಳಕೆ ಮಾಡಿದಾಗ ಜಾಸ್ತಿಯಾಗುತ್ತದೆ. ಯೂರಿಯಾ ಹಾಗೂ ಈ ರೋಗಾಣುಗಳಿಗೆ ನೇರ ಸಂಬಂಧವಿದೆ.

ಚಳಿಗಾಲದ ಬೆಳೆಗೆ ಮುಖ್ಯವಾಗಿ ಬುಡಕೊಳೆರೋಗ ಸಾಧ್ಯತೆ ಇರುತ್ತದೆ. ಪೈರುಗಳು ಬಿಳಿಚಿಕೊಂದು ಒಣಗಿದಂತೆ ಕಂಡುಬರುತ್ತವೆ. ಪೈರುಗಳ ಬುಡದಲ್ಲಿ ಸುಮಾರು 5–10 ಸೆಂ. ಮೀ. ವರೆಗೂ ಕೊಳೆತ ಕಪ್ಪು ಮತ್ತು ಕಂದು ಬಣ್ಣದ ಮಚ್ಚೆಗಳನ್ನು ಕಾಣಬಹುದು ಹಾಗೂ ತೀವ್ರತೆ ಹೆಚ್ಚಾದಂತೆ ಕಪ್ಪು ಬಣ್ಣದ ಸಾಸಿವೆ ಕಾಳಿನಂತೆ ಶಿಲೀಂದ್ರದ ವಿಶ್ರಾಂತ ಬೀಜ ಕಣಗಳನ್ನು ನೋಡಬಹುದು. ಹೂ ಬಿಡುವ ಹಂತದಲ್ಲಿ ತೆನೆಗಳು ಜೊಳ್ಳಾಗುವುದನ್ನು ಕಾಣಬಹುದು.

ಮುಂಚೂಣಿ ಪ್ರಾತ್ಯಕ್ಷಿಕೆಯ ತಾಕಿನಲ್ಲಿ ವಿಸ್ತರಣಾ ಕಾರ್ಯಕರ್ತ ಹಾಗೂ ರೈತರ ಸಂವಾದ

ಈ ರೋಗದ ಹತೋಟಿಗೆ ಟ್ರೈಕೋಡರ್ಮಾವಿರಿಡೆ ಹಾಗೂ ಸ್ಯುಡೋಮೋನಾಸ್ ಫ್ಲೂರೋಸೆನ್ಸ್ ಪುಡಿಯನ್ನು ಸಮನಾಗಿ 100 ಗ್ರಾಂನಂತೆ 25–30 ಕೆ.ಜಿ. ಕಳೆತ ಕೊಟ್ಟಿಗೆ ಗೊಬ್ಬರದೊಡನೆ ಬೆರೆಸಿ 15–20 ದಿನಗಳು ನೆರಳಿನಲ್ಲಿ ವೃದ್ಧಿಸಿ ಅಥವಾ ಮೇಲ್ಕಂಡ ಜೀವಿಗಳ ಟಾರ್ ಪುಡಿಯನ್ನು ಸಮನಾಗಿ 1 ಗ್ರಾಂ ನಂತೆ 1 ಲೀ. ನೀರಿಗೆ ಬೆರೆಸಿ ಪೈರುಗಳನ್ನು ಅರ್ಧ ಗಂಟೆಗಳ ಕಾಲ ಅದ್ದುವುದು ಹಾಗೂ ಪ್ರತಿ ಜೀವಾಣುಗಳ ಟಾರ್ ಪುಡಿಯನ್ನು ತಯಾರಾಗಿ 500 ಗ್ರಾಂ. ನಂತೆ 25–30 ಕೆ.ಜಿ. ಕಳೆತ ಕೊಟ್ಟಿಗೆ ಗೊಬ್ಬರದೊಡನೆ ಬೆರೆಸಿ 15–20 ದಿನಗಳು ನೆರಳಿನಲ್ಲಿ ವೃದ್ಧಿಸಿ ಇತರೆ ಕೊಟ್ಟಿಗೆ ಗೊಬ್ಬರದೊಡನೆ ಮಿಶ್ರಣ ಮಾಡಿ ನಾಟಿಗೆ ಮೊದಲು ಸಾಲುಗಳಲ್ಲಿ ಒಂದು ಎಕರೆ ಪ್ರದೇಶದಲ್ಲಿ ಸೇರಿಸಬಹುದು.

ಬೇಸಿಗೆ ಕಾಲದ ಬೆಳೆಗೆ ಕಾಂಡಕೊರಕ ಮತ್ತು ಸಸ್ಯಹೇನು ಬಾಧೆ ಬರುತ್ತದೆ. ಕಾಂಡಕೊರಕ ಬಂದಾಗ ಸುಳಿ ಒಣಗುವುದು, ತೆನೆ ಜೊಳ್ಳುಗುವುದು, ಅವುಗಳನ್ನು ಕೈಯಿಂದ ಎಳೆದರೆ ಸುಲಭವಾಗಿ ಬರುತ್ತದೆ. ಇದರ ಹತೋಟಿಗೆ ಕ್ಲೋರೋಫೈರಿಫಾಸ್ 20 ಇ. ಸಿ. 2 ಮಿ. ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ನಾಟಿ ಮಾಡಿದ 25–30 ದಿನಗಳ ನಂತರ ಸಿಂಪಡಿಸುವುದು. ಇನ್ನು ಸಸ್ಯಹೇನು ರಸ ಹೀರುವುದರಿಂದ ಗರಿಗಳು ಹಳದಿ ಬಣ್ಣಕ್ಕೆ ತಿರುಗಿ ಗರಿಗಳ ಮೇಲೆ ಕಪ್ಪು ಬೂಷ್ಟು ಬೆಳೆದ ಗಿಡದ ಬೆಳವಣಿಗೆ ಕುಗ್ಗುತ್ತದೆ. ತೆನೆಗಳಿಂದ ರಸಹೀರಿದಾಗ ಸೀಕಲು ಕಾಳುಗಳಾಗಬಹುದು. ಇದರ ಹತೋಟಿಗೆ ಡೈಮೀಥೋಯೆಟ್ 30ಇ.ಸಿ. @1.7ಮಿ.ಲೀ./ ಲೀ. ನೀರು ಬೆರಸಿ ಸಿಂಪರಣೆ ಮಾಡಬೇಕು. ●

ಕೃಷಿ ವಿಜ್ಞಾನ, ಏಪ್ರಿಲ್–ಜೂನ್, 2022, ಸಂಚಿಕೆ 46(2) / 26–28

ಹೊಂಗೆ ಮರವನ್ನು ಬೆನ್ನಟ್ಟುವ ಕೀಟ

ಕೆ. ವಿ. ಪ್ರಕಾಶ್, ಎಚ್. ಎಂ. ಯಶ್ವಂತ್ ಮತ್ತು ಎ. ಎನ್. ಶೃಂಗೇಶ್ವರ
ಕೃಷಿ ವಿಶ್ವವಿದ್ಯಾನಿಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–560 065
e-Mail : kvpento@gmail.com Mob. : **94489 97061**

ಸಸ್ಯ ಸಂಕುಲದ ಪಿತೃಪಕ್ಷವಾದ ವಸಂತಮಾಸದ ಆಗಮನ ವಾಗಿದೆ. ಅಳಿದುಳಿದಿರುವ ಗಿಡ ಮರಗಳು ಅಷ್ಟಿಷ್ಟು ಹಸಿರು ಹೊದ್ದು ಬಣ್ಣ ಬಣ್ಣದ ಹೂವುಗಳನ್ನು ನೆತ್ತಿಗೆ ಸಿಕ್ಕಿಸಿಕೊಂಡು ಸಂಭ್ರಮದಿಂದ ವಸಂತರಾಜನನ್ನು ಸ್ವಾಗತಿಸುತ್ತಾ ತಮ್ಮ ಪೂರ್ವಜರ ಗತವೈಭವದ ಬದುಕನ್ನು ತಮ್ಮ ನೆಂಟರಿಷ್ಟರೊಡನೆ ಹಂಚಿಕೊಳ್ಳುತ್ತಿವೆ. ಪಕ್ಷಿಗಳ ಕಲರವ, ಜೇನ್ನೊಣಗಳ ಝೇಂಕಾರ ಈ ಸಡಗರಕ್ಕೆ ಮೆರಗು ತಂದಿವೆ. ಒಂದು ಕಾಲದಲ್ಲಿ ಯಥೇಚ್ಛವಾಗಿದ್ದ ಸಸ್ಯಸಂಪತ್ತು ಮಾನವನ ಅಭಿವೃದ್ಧಿಯ ಹೆಸರಿನಲ್ಲಿ ಅವನತಿಯತ್ತ ಸಾಗಿದೆ. ಈಗ ಉಳಿದಿರುವ ಗಿಡಮರಗಳು ತಮ್ಮ ಅಂತಿಮ ದಿನಗಳನ್ನು ಎಣಿಸುತ್ತಿವೆ. ಸಸ್ಯರಾಶಿಯ ಇಂದಿನ ದಯನೀಯ ಸ್ಥಿತಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಒಂದೇ ರೀತಿ ಇದೆ. ನಗರಗಳಲ್ಲಿ ಇದ್ದ ಕುರುಚಲು ಕಾಡುಗಳು, ಕಮರಿಗಳು, ಕೆರೆಗಳು ಬಡಾವಣೆಗಳಾಗಿ ರೂಪಾಂತರಗೊಳ್ಳುವಾಗ ಅಲ್ಲಿನ ಮೂಲನಿವಾಸಿಗಳಾಗಿದ್ದ ಗಿಡಮರಗಳು ಮಾಡಿದ ತ್ಯಾಗವನ್ನು ನಗರವಾಸಿಗಳು ಇಂದಿಗೂ ಮರೆತಿಲ್ಲ. ಬಹುತೇಕ ನಗರ ವಾಸಿಗಳು ಗಿಡಗಳನ್ನು ಕುಂಡಗಳಲ್ಲಿ ಬೆಳಸಿ ಮನೆಗಳ ತಾರಸಿ ಮೇಲೆ ಇಟ್ಟು ತಮ್ಮ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದಾರೆ. ಗ್ರಾಮಗಳಲ್ಲಿ ದೈವಸ್ಥಾನ ಪಡೆದ ಕೆಲವು ಮರಗಳು ತಮ್ಮ ಅಸ್ತಿತ್ವವನ್ನು ಇನ್ನೂ ಉಳಿಸಿಕೊಂಡಿವೆ. ಈ ಮರಗಳು ಎಲ್ಲರ ಸ್ಮೃತಿಪಟಲದಲ್ಲಿ ಅನೇಕ ನೆನಪುಗಳ ಸಂಕೇತಗಳಾಗಿ ಉಳಿದಿರುತ್ತವೆ. ನಮ್ಮ ದೇಶದಲ್ಲಿ ಎಲ್ಲಾ ವಯಸ್ಸಿನವರಿಗೂ ಚಿರಪರಿಚಿತವಾದ ಮರಗಳೆಂದರೆ ಬೇವು, ಅರಳಿ, ಆಲ, ಹುಣಸೆ ಮತ್ತು ಹೊಂಗೆ. ಜನ–ಜೀವನದಲ್ಲಿ ಹಾಸುಹೊಕ್ಕಾಗಿರುವ ಈ ಮರಗಳ ಸಮೂಹಗಳು 'ತೋಪು'ಗಳೆಂದೆ ಹೆಸರುವಾಸಿ. ಈ ಮರಗಳಲ್ಲಿ ಅಬಾಲವೃದ್ಧರಾದಿಯಾಗಿ ಎಲ್ಲರೊಡನೆ ಆತ್ಮೀಯವಾಗಿ ಬೆರೆತಿರುವ ಮರವೆಂದರೆ 'ಹಸಿರು ಹೊನ್ನು' ಎಂದು ಕರೆಯಲ್ಪಡುವ ಹೊಂಗೆ.

ಸ್ಥಳೀಯವಾಗಿ ಹೊಂಗೆಮರ ಎಂದು ಕರೆಯಲ್ಪಡುವ ಈ ವೃಕ್ಷದ ವೈಜ್ಞಾನಿಕ ಹೆಸರು *ಪೊಂಗೆಮಿಯಾ ಪಿನ್ನಾಟಾ*. ಇದು ಮಧ್ಯಮ ಗಾತ್ರದ ಮರವಾಗಿದ್ದು ಇದರ ಮೂಲ ನಮ್ಮ ಪಶ್ಚಿಮಘಟ್ಟಗಳು ಎನ್ನುವುದು ಹೆಮ್ಮೆಯ ಸಂಗತಿ. ಹೊಂಗೆ ಮರಗಳು ನದಿ, ಹಳ್ಳಕೊಳ್ಳಗಳ ದಡದಲ್ಲಿ ಅಲ್ಲದೆ ಕಡಲಂಚಿನಲ್ಲೂ ಕಂಡುಬರುತ್ತವೆ. ಎಲ್ಲಾ ಬಗೆಯ ಮಣ್ಣು ಹಾಗೂ ಹವಾಗುಣದಲ್ಲೂ ಬೆಳೆಯಬಲ್ಲ ಈ ವೃಕ್ಷವು ಒಣ ಪ್ರದೇಶದಿಂದ ಹಿಡಿದು ಸಮುದ್ರ ಮಟ್ಟದಿಂದ 1200 ಮೀಟರ್ ಎತ್ತರವಿರುವ ಪ್ರದೇಶಗಳಲ್ಲಿಯೂ ಸಮೃದ್ಧವಾಗಿ ಬೆಳೆಯುತ್ತದೆ. ನಮ್ಮ ದೇಶದಲ್ಲಿ ಈ ಮರವನ್ನು ಸಾಮಾನ್ಯವಾಗಿ ರಸ್ತೆಯ ಇಕ್ಕೆಲಗಳಲ್ಲಿ ಬೆಳೆಸುವುದು ವಾಡಿಕೆ. ತಂಪಾದ ನೆರಳು ಕೊಡುವ ಇದರ ಅಡಿಯಲ್ಲಿ ಹುಲ್ಲು ಚೆನ್ನಾಗಿ ಬೆಳೆಯುವುದರಿಂದ ಇದನ್ನು ಹುಲ್ಲುಗಾವಲುಗಳಲ್ಲಿ ಬೆಳೆಸುವುದು ಉಂಟು. ಚಳಿಗಾಲದಲ್ಲಿ ಎಲೆ ಉದುರಿಸುವ ಹಾಗೂ ಅರೆ–ನಿತ್ಯಹರಿದ್ವರ್ಣ ಗುಣ ಹೊಂದಿರುವ ಹೊಂಗೆ ಇಡೀ ಭಾರತದಲ್ಲಿ ಹರಡಿದ್ದು ಬಾಂಗ್ಲಾದೇಶ, ಶ್ರೀಲಂಕಾ, ಪಾಕಿಸ್ತಾನ, ಚೈನಾ, ದಕ್ಷಿಣ ಹಾಗೂ ದಕ್ಷಿಣ–ಆಗ್ನೇಯಾ ಏಷ್ಯಾ, ಫೆಸಿಫಿಕ್ ದ್ವೀಪಗಳು ಮತ್ತು ಆಸ್ಟ್ರೇಲಿಯಾ ಖಂಡದಲ್ಲಿ ವ್ಯಾಪಕವಾಗಿ ಕಂಡುಬರುತ್ತದೆ.

ಹೊಂಗೆಯ ವಿವಿಧ ಭಾಗಗಳನ್ನು ಭಾರತೀಯ ವೈದ್ಯ ಪದ್ಧತಿಗಳಾದ ಸಿದ್ಧ ಮತ್ತು ಆಯುರ್ವೇದಗಳಲ್ಲಿ ಅನೇಕ ವ್ಯಾಧಿಗಳಿಗೆ ಮೂಲಿಕೆಗಳನ್ನು ತಯಾರಿಸಲು ಬಳಸಲಾಗುತ್ತದೆ. ಹೊಂಗೆಯ ಪ್ರಮುಖ ಉತ್ಪನ್ನವೆಂದರೆ ಅದರ ಬೀಜಗಳಿಂದ ದೊರಕುವ ಎಣ್ಣೆ. ಇದರ ಬೀಜಗಳಲ್ಲಿ ಶೇ. 28–34ರಷ್ಟು

ಚಿತ್ರ 1 : ಪ್ರೌಢ ಕೀಟ

ಚಿತ್ರ 2 : ಮೊಗ್ಗುಗಳು

ಎಣ್ಣೆ ಅಂಶವಿರುತ್ತದೆ. ಇದನ್ನು ದೀಪದ ಎಣ್ಣೆಯಾಗಿ, ಕೀಲೆಣ್ಣೆಯಾಗಿ, ಸಾಬೂನು ತಯಾರಿಕೆಯಲ್ಲಿ ಮತ್ತು ಮನೆಯ ಮದ್ದಾಗಿ ಬಳಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಹೊಂಗೆ ಎಣ್ಣೆಯನ್ನು ಡೀಸೆಲ್‌ಗೆ ಪರ್ಯಾಯವಾಗಿಯೂ ಹಾಗೂ ಡೀಸೆಲ್ ಜೊತೆ ವಿವಿಧ ಅನುಪಾತದಲ್ಲಿ ಮಿಶ್ರಣ ಮಾಡಿಯೂ ಬಳಸಲಾಗುತ್ತಿದೆ. ಮರದ ಎಲೆಗಳಿಂದ ಉತ್ತಮವಾದ ಹಸಿರೆಲೆ ಗೊಬ್ಬರವನ್ನು ತಯಾರಿಸಲಾಗುತ್ತದೆ, ಇದಲ್ಲದೆ ಗೃಹೋಪಯೋಗಿ ವಸ್ತುಗಳ ತಯಾರಿಕೆಯಲ್ಲಿ ಮರವನ್ನು ಬಳಸಲಾಗುತ್ತದೆ. ಹೊಂಗೆ ಹೂವುಗಳು ಹೆಚ್ಚು ಮಕರಂದವನ್ನು ಹೊಂದಿರುವುದರಿಂದ ವಿವಿಧ ಪ್ರಭೇದಗಳ ಜೇನು ಸಂಗ್ರಹಿಸುವ ಕೀಟಗಳು ಹೂ ಬಿಡುವ ಕಾಲದಲ್ಲಿ ಮರವನ್ನು ಮುತ್ತಿರುತ್ತವೆ. ಬರ ಮತ್ತು ಕ್ಷಾರಯುಕ್ತ ಮಣ್ಣಿನಲ್ಲಿಯೂ ಸೊಂಪಾಗಿ ಬೆಳೆಯುವುದರಿಂದ ಬಂಜರು ಭೂಮಿಯನ್ನು ಹಸಿರಾಗಿಸಲು ಹಾಗೂ ಮಣ್ಣಿನ ಸವಕಳಿಯನ್ನು ತಡೆಯಲು ಹೊಂಗೆ ಮರವನ್ನು ಬೆಳೆಸಲಾಗುತ್ತದೆ. ಇಷ್ಟೆಲ್ಲ ಕಾರಣಗಳಿಂದ ತೆಂಗು 'ಕಲ್ಪವೃಕ್ಷ' ವಾದರೆ ಹೊಂಗೆ 'ಕಾಮಧೇನು' ಎಂದರೆ ಅತಿಶಯೋಕ್ತಿ ಆಗಲಾರದು. ಇಂಥಹ ಬಹು-ಉಪಯೋಗಿ ಹೊಂಗೆ

ಚಿತ್ರ 3 : ವಿರೂಪಗೊಂಡ ಅಂಡಾಶಯದ ಆರಂಭಿಕ ಹಂತ

ಮರವನ್ನು ಕೆಲವು ಕೀಟಗಳು ಬಾಧಿಸುತ್ತವೆ. ಇಂಥ ಹಾನಿಕಾರಕ ಕೀಟಗಳಲ್ಲಿ ಮೊಗ್ಗುಗಳನ್ನು ವಿರೂಪಗೊಳಿಸುವ ಕೀಟವು ಪ್ರಮುಖವಾದುದು. ಹೊಂಗೆ ಮರವು ಮಾರ್ಚ್ ತಿಂಗಳಿಂದ ಮೇ ತಿಂಗಳವರೆಗೆ ಸಾವಿರಾರು ಹೂವುಗಳನ್ನು ಬಿಟ್ಟರೂ ಕೇವಲ ಶೇ. 25-35ರಷ್ಟು ಹೂವುಗಳು ಮಾತ್ರ ಕಾಯಿ ಕಟ್ಟುತ್ತವೆ. ಬಿಳಿ ಮತ್ತು ಗುಲಾಬಿ ಮಿಶ್ರಿತ ಬಣ್ಣದ ಹೂವುಗಳಿಂದ ಜೇನುನೊಣಗಳು ಮಕರಂದವನ್ನು ಸಂಗ್ರಹಿಸಲು ಬಂದು ಪರಾಗಸ್ಪರ್ಶ ಕ್ರಿಯೆಯನ್ನೂ ನಡೆಸುತ್ತವೆ. ಹೂವುಗಳು ಕೇವಲ ಒಂದು ದಿನ ಮಾತ್ರ ಅರಳಿದ್ದು ಪರಾಗಸ್ಪರ್ಶಕ್ರಿಯೆ ಆಗದ ಹೂವುಗಳು ಬಿದ್ದು ಹೋಗುತ್ತವೆ. ಇದರಿಂದ ಹೂವು ಮತ್ತು ಕಾಯಿಗಳ ಅನುಪಾತದಲ್ಲಿ ಅಗಾಧ ವ್ಯತ್ಯಾಸವಿರುತ್ತದೆ.

ಚಿತ್ರ 4: ವಿರೂಪಗೊಂಡ ಅಂಡಾಶಯದ ಗೊಂಚಲು

ಹೊಂಗೆ ಮರದಲ್ಲಿ ಮೊಗ್ಗುಗಳು ಮೂಡುವ ಸಮಯಕ್ಕೆ ಸರಿಯಾಗಿ ಕ್ರಿಯಾಶೀಲವಾಗುವ *'ಆಸ್ಫಾಂಡೈಲಿಯಾ ಪೊಂಗಾಮಿಯೆ'* ಎನ್ನುವ ಕೇವಲ 3.5 ಮಿ.ಮೀ. ಉದ್ದವಿರುವ, ನೀಳ ಕಾಲುಗಳುಳ್ಳ ಕೀಟವು (ಚಿತ್ರ 1) ಮೊಗ್ಗುಗಳಲ್ಲಿ ಮೊಟ್ಟೆ ಇಡುತ್ತದೆ. ಮೊಟ್ಟೆಯಿಂದ ಹೊರಬರುವ ಮರಿಹುಳುವು ಮೊಗ್ಗಿನ ಅಂಡಾಶಯವನ್ನು ಘಾಸಿಗೊಳಿಸುವುದರಿಂದ ಮೊಗ್ಗುಗಳು (ಚಿತ್ರ 2) ಹೂವಾಗಿ ಅರಳಿ ನಂತರ ಕಾಯಿಯಾಗಿ ಬೆಳವಣಿಗೆಯಾಗುವುದರ ಬದಲು ಉರುಟಾದ, ಗೋಲಿಯಾಕಾರದ, ದ್ರಾಕ್ಷಿ ಹಣ್ಣಿನ ಗೊಂಚಲಿನಂತೆ ಮಾರ್ಪಾಡಾಗುತ್ತವೆ (ಚಿತ್ರ 3 ಮತ್ತು ಚಿತ್ರ 4). ಆಂಗ್ಲ ಭಾಷೆಯಲ್ಲಿ ಇವುಗಳನ್ನು 'ಫ್ಲೋರಲ್ ಗಾಲ್ಸ್' ಎಂದು ಕರೆಯುತ್ತಾರೆ. ಈ ರೀತಿ ವಿರೂಪಗೊಂಡ ಅಂಡಾಶಯವು ಮರಿಹುಳುವಿಗೆ ಆಹಾರವನ್ನು ಮತ್ತು ರಕ್ಷಣೆಯನ್ನು ನೀಡುತ್ತದೆ. ಇಂಥಹ ಗಾಲ್ಸ್ ಒಳಗೆ ಮರಿಹುಳು ಹಾಗೂ ಕೋಶಾವಸ್ಥೆಯ ಹಂತಗಳನ್ನು ಮುಗಿಸಿ ಪ್ರೌಢಕೀಟವು ಮುಂದಿನ ವಸಂತ ಕಾಲದಲ್ಲಿ ಹೊರಬರುತ್ತದೆ.

ಒಂದೆರಡು ದಿನಗಳಷ್ಟೆ ಆಯಸ್ಸು ಹೊಂದಿರುವ ಹೆಣ್ಣು ಕೀಟಗಳು ಮಿಲನ ಹೊಂದಿದ ನಂತರ ಹೊಸ ಮೊಗ್ಗುಗಳನ್ನು ಹುಡುಕಿ ಮೊಟ್ಟೆಯಿಡುತ್ತವೆ. ಈ ರೀತಿ ತಮ್ಮ ಜೀವನದ ಹೊಸ ಅಧ್ಯಾಯವನ್ನು ಆರಂಭಿಸುತ್ತವೆ. ಈ ಕೀಟವು ಹೊಂಗೆ ಮರದ ಹೂ-ಮೊಗ್ಗುಗಳ ವಿನಾಃ ಮರದ ಬೇರೆ ಯಾವುದೇ ಭಾಗಗಳನ್ನು ಬಾಧಿಸುವುದಿಲ್ಲ. ಹೊಂಗೆ ಕೃಷಿಯು ಆರ್ಥಿಕತೆಯನ್ನೇ ನಾಶಮಾಡಬಲ್ಲ ಈ ಕೀಟವು ಒಂದು ವರ್ಷದ ಜೀವಿತಾವಧಿಯನ್ನು ಹೊಂದಿದ್ದು ಹೊಂಗೆ ಮರದ ಜೀವನಚಕ್ರಕ್ಕೆ ತನ್ನ ಜೀವನವನ್ನು ಹೊಂದಾವಣಿಕೆ ಮಾಡಿಕೊಂಡು ಕೇವಲ ಹೊಂಗೆ ಮರವನ್ನು ಮಾತ್ರ ಬಾಧಿಸುತ್ತದೆ (ಚಿತ್ರ 5). ಆದರೆ ಇದಾವುದರ ಪರಿವೇ ಇಲ್ಲದೆ ವಸಂತ ಕಾಲದಲ್ಲಿ ಹೂ ಬಿಡುವುದು ತನ್ನ ಕರ್ತವ್ಯವೆಂದು ತಿಳಿದ ಹೊಂಗೆ ಮರವು ತನ್ನ ಬಳಿ ಬರುವವರಿಗೆಲ್ಲಾ ಆಶ್ರಯ ನೀಡುತ್ತದೆ.

ಚಿತ್ರ 5: ಬಾಧೆಗೊಳಗಾದ ಮರ

ಈ ಕೀಟದ ಹತೋಟಿ ಹೇಗೆ? ಈ ಕೀಟವು ಹೊಂಗೆಯನ್ನು ಬಾಧಿಸುವ ಕಾಲ, ಕೀಟದ ಜೀವನಚರಿತ್ರೆ ಹಾಗೂ ಕೀಟದಿಂದಾಗುವ ಆರ್ಥಿಕ ನಷ್ಟ (ಹೊಂಗೆ ಎಣ್ಣೆ ಮತ್ತು ಹೊಂಗೆ ಹಿಂಡಿ) ಇತ್ಯಾದಿ ವಿಷಯಗಳ ಬಗ್ಗೆ ನಿಖರ ಮಾಹಿತಿ ತಿಳಿದಿದ್ದರೂ ಈ ಕೀಟದ ಹತೋಟಿ ಕಷ್ಟಕರ. ಮೊದಲನೆಯದಾಗಿ ವಿಶಾಲ ವೃಕ್ಷಗಳಿಗೆ ಸಿಂಪಡಿಸಲು ಅಪಾರ ಪ್ರಮಾಣದ ಜೈವಿಕ / ರಾಸಾಯನಿಕ ಕೀಟನಾಶಕಗಳ ಅಗತ್ಯವಿರುತ್ತದೆ. ಹೂ ಬಿಡುವ ಸಮಯದಲ್ಲಿ ಕೀಟನಾಶಕಗಳನ್ನು ಸಿಂಪಡಿಸುವುದರಿಂದ ಹೊಂಗೆ ಮರಗಳಿಗೆ ಭೇಟಿ ನೀಡುವ ವೈವಿಧ್ಯಮಯ ಕೀಟಗಳು ನಾಶವಾಗುತ್ತವೆ. ಜನ ವಸತಿ ಸಮೀಪದಲ್ಲಿರುವ ಮರಗಳಿಗೆ ಕೀಟನಾಶಕಗಳನ್ನು ಸಿಂಪಡಿಸುವುದರಿಂದ ಜಲ ಮತ್ತು ವಾಯು ಮಾಲಿನ್ಯಕ್ಕೆ ಕಾರಣವಾಗಿ ಜೀವಹಾನಿ ಆಗುವ ಸಂಭವವಿರುತ್ತದೆ. ಕೀಟನಾಶಕದಿಂದ ಕಲುಷಿತವಾಗಿರುವ ಎಲೆಗಳನ್ನು ತಿಂದರೆ ಜಾನುವಾರುಗಳ ಜೀವಕ್ಕೆ ಕುತ್ತಾಗಬಹುದು. ಆದುದರಿಂದ ಬಾಧೆಗೊಳಗಾದ ಮರದಲ್ಲಿರುವ ವಿರೂಪಗೊಂಡ ಮೊಗ್ಗುಗಳನ್ನು (ಗಾಲ್ಸ್) ನಾಶಪಡಿಸುವುದರಿಂದ ಮುಂದಿನ ವಸಂತ ಕಾಲದಲ್ಲಿ ಕೀಟ ಬಾಧೆಯನ್ನು ತಗ್ಗಿಸಬಹುದು. ಇದರ ಜೊತೆಗೆ ಪ್ರಕೃತಿಯಲ್ಲಿರುವ ಕೆಲವು ಪರತಂತ್ರ ಕೀಟಗಳು ಮೊಗ್ಗಿನೊಳಗೆ ಬೆಳವಣಿಗೆಯಾಗುವ *ಆಸ್ಫಾಂಡ್ಶೈಲಿಯಾ ಪೊಂಗಾಮಿಯೆ* ಕೀಟದ ಮರಿಹುಳುಗಳನ್ನು ನಾಶ ಮಾಡುವ ಮೂಲಕ ಹಾನಿಕಾರಕ ಕೀಟದ ಸಂಖ್ಯೆಯನ್ನು ಸ್ವಲ್ಪ ಮಟ್ಟಿಗೆ ನಿಯಂತ್ರಿಸುತ್ತವೆ. ಆದರೂ ನಿಸರ್ಗದಲ್ಲಿ ತನ್ನ ಉಳಿವಿಗಾಗಿ ಬಲು ನಾಜೂಕಾದ ಚಿಕ್ಕ ಕೀಟವೊಂದು ಬೃಹತ್ ಹೊಂಗೆ ಮರವನ್ನು ತ್ರಿವಿಕ್ರಮನ ಭೇತಾಳದಂತೆ ಬೆನ್ನು ಹತ್ತಿರುವ ಪರಿ ಸೋಜಿಗವೇ ಸರಿ. ●

ರೈತರು ಕೃಷಿಯ ಸಮಸ್ಯೆಗಳಿಗೆ ತಮ್ಮ ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರವನ್ನು ಸಂಪರ್ಕಿಸಬಹುದು

ಕೃಷಿ ವಿಜ್ಞಾನ ಕೇಂದ್ರ
ವಿ.ಸಿ.ಫಾರಂ, ಮಂಡ್ಯ-571 405
ಮೊಬೈಲ್ : 9449864250

ಕೃಷಿ ವಿಜ್ಞಾನ ಕೇಂದ್ರ
ಕಂದಲಿ-573 217, ಹಾಸನ
ಮೊಬೈಲ್ : 9449866932

ಕೃಷಿ ವಿಜ್ಞಾನ ಕೇಂದ್ರ
ಕೊನೆಹಳ್ಳಿ-572 202, ತಿಪಟೂರು, ತುಮಕೂರು
ಮೊಬೈಲ್ : 9449866936

ಕೃಷಿ ವಿಜ್ಞಾನ ಕೇಂದ್ರ
ಹರದನಹಳ್ಳಿ-571 127, ಚಾಮರಾಜನಗರ
ಮೊಬೈಲ್ : 9449866933

ಕೃಷಿ ವಿಜ್ಞಾನ ಕೇಂದ್ರ
ಚಿಂತಾಮಣಿ-563 125, ಚಿಕ್ಕಬಳ್ಳಾಪುರ
ಮೊಬೈಲ್ : 9449866930

ಕೃಷಿ ವಿಜ್ಞಾನ ಕೇಂದ್ರ
ಹಾಡೋನಹಳ್ಳಿ-571 205, ಬೆಂ.ಗ್ರಾಮಾಂತರ
ಮೊಬೈಲ್ : 9449866928

ಕೃಷಿ ವಿಜ್ಞಾನ ಕೇಂದ್ರ
ಚಂದೂರಾಯನಹಳ್ಳಿ-562 120, ರಾಮನಗರ
ಮೊಬೈಲ್ : 9449866918

ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ
ಜಿ.ಕೆ.ವಿ.ಕೆ., ಬೆಂಗಳೂರು-560 065
ಟೋಲ್ ಫ್ರೀ ಸಂಖ್ಯೆ 18004250571

ಕೃಷಿ ವಿಜ್ಞಾನ, ಏಪ್ರಿಲ್–ಜೂನ್, 2022, ಸಂಚಿಕೆ 46(2) / 29–31

ಸಹ್ಯಾದ್ರಿ ಪಂಚಮುಖಿ ಭತ್ತದ ತಳಿಯ ಭಗಿರಥ – ದಯಾನಂದ ಕುಲಾಲ್ ದೇಲಂತುಬೆಟ್ಟು

ಬಿ. ಟಿ. ನವೀನ್ ಕುಮಾರ್, ಟಿ. ಜೆ. ರಮೇಶ ಮತ್ತು ಎಲ್. ಮಲ್ಲಿಕಾರ್ಜುನ್
ಐ.ಸಿ.ಎ.ಆರ್. – ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ, ಮಂಗಳೂರು
e-Mail : kvkdk@rediffmail.com Mob. : 82424 31872

ಕೃಷಿಕ ಯಾವಾಗಲೂ ಕಾಲಕ್ಕೆ ತಕ್ಕಂತೆ ಹೊಸ ಹೊಸ ಬೆಳೆಗಳನ್ನು ಬೆಳೆಯಲು ಪ್ರಯತ್ನಿಸುತ್ತಿರಬೇಕು. ಈಗ ಹವಾಮಾನ ವೈಫಲ್ಯವಾಗುವುದರಿಂದ ರೈತ ಒಂದೇ ಬೆಳೆಯನ್ನು ನಂಬಿಕೊಳ್ಳ ಲಾಗುವುದಿಲ್ಲ. ಸದಾ ಹೊಸ ಹೊಸ ಬೆಳೆಗಳನ್ನು ಬೆಳೆಯಲು ಹಂಬಲಿಸುತ್ತಾ ಸಮಗ್ರ ಕೃಷಿಯನ್ನು ಮಾಡುತ್ತಿರುವವರು ದೇಲಂತುಬೆಟ್ಟಿನವರಾದ ದಯಾನಂದ ಕುಲಾಲ್ ಅವರು ಸಮಾಜಕ್ಕೆ ಮಾದರಿ ಕೃಷಿಕರಾಗಿದ್ದಾರೆ. ತರಕಾರಿ ಕೃಷಿ, ಅಡಿಕೆ, ಬಾಳೆ ಕೃಷಿ, ಭತ್ತದ ಕೃಷಿ ಹೀಗೆ ಸಮಗ್ರ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರು ಎಲೆಕ್ಟ್ರಿಕಲ್ ಡಿಪ್ಲೊಮಾನ್ನು ಮುಗಿಸಿಕೊಂಡು ಸ್ವತಃ ಜನರೇಟರ್ ಸರ್ವಿಸ್ ನಡೆಸುತ್ತಿದ್ದ ಇವರು ಕೋವಿಡ್ –19 ರ ಲಾಕ್‌ಡೌನ್ ಸಮಯದಲ್ಲಿ ಪೂರ್ಣ ಪ್ರಮಾಣದಲ್ಲಿ ಕೃಷಿಯ ಕಡೆಗೆ ಒಲವು ಬೆಳೆಸಿಕೊಂಡವರು, ಅವರು ಪೂರ್ಣ ಪ್ರಮಾಣದ ಕೃಷಿಯನ್ನು ಆರಂಭಿಸಿದಾಗ ತುಂಬ ಜನ ಅವರಿಗೆ ಒಳ್ಳೆಯ ಆದಾಯ ನೀಡುವ ಕೆಲಸ ಬಿಟ್ಟು ಕೃಷಿಗೆ ಬಂದಿದ್ದಾನೆ ಎಂದು ಅಪಹಾಸ್ಯ ಮಾಡಿದರು. ಆದರೂ ಛಲ ಬಿಡದೇ ಒಳ್ಳೆ ಕೃಷಿ ಮಾಡಿ ಈಗ ಎಲ್ಲರಿಗೂ ಮಾದರಿ ಕೃಷಿಕರಾಗಿದ್ದಾರೆ.

ಇವರು ಭತ್ತದಲ್ಲಿ ಏನಾದರು ಹೊಸ ಅವಿಷ್ಕಾರವನ್ನು ಮಾಡಬೇಕೆಂಬ ತುಡಿತದಲ್ಲಿದ್ದ ಶ್ರೀ ದಯಾನಂದ ಅವರಿಗೆ ನೆನಪಾದದ್ದು ಮಂಗಳೂರಿನ ಕೃಷಿ ವಿಜ್ಞಾನ ಕೇಂದ್ರ. ಕೂಡಲೆ ಕೇಂದ್ರಕ್ಕೆ ಭೇಟಿ ನೀಡಿದ ಶ್ರೀಯುತರು, ಬೇಸಾಯಶಾಸ್ತ್ರ ವಿಜ್ಞಾನಿಗಳೊಂದಿಗೆ ಸಮಲೋಚನೆ ಮಾಡುವಾಗ ಕರಾವಳಿ ಭಾಗದಲ್ಲಿ ಭತ್ತದ ಕೃಷಿಕರು ಅನುಭವಿಸುತ್ತಿರುವ ಸಮಸ್ಯೆಗಳ ಬಗ್ಗೆ ಈ ಕೆಳಗಿನಂತೆ ವಿಸ್ತರಿಸಿದರು.

ದಕ್ಷಿಣ ಕನ್ನಡದಲ್ಲಿ ನೆರೆ ಪೀಡಿತ ಗದ್ದೆಗಳ ಸಮಸ್ಯೆ

ದಕ್ಷಿಣ ಕನ್ನಡದಲ್ಲಿ ನೇತ್ರಾವತಿ ನದಿಯ ಅಕ್ಕಪಕ್ಕದ ಗದ್ದೆಗಳು, ಹಲವು ಬಯಲು ಗದ್ದೆಗಳು ಹವಾಮಾನ ವೈಪರೀತ್ಯದಿಂದ ಮುಂಗಾರಿನಲ್ಲಿ ಹೆಚ್ಚಿನ ಮಳೆಯ ಕಾರಣ ವಾರ್ಷಿಕವಾಗಿ ಸುಮಾರು 300 ಹೆಕ್ಟೇರ್‌ಗಿಂತಲೂ ಅಧಿಕ ಭತ್ತ ಬೆಳೆಯುವ

ನೆರೆ ಪೀಡಿತ ರೈತರೊಂದಿಗೆ ವಿಜ್ಞಾನಿಗಳ ಸಂವಾದ

ಪ್ರದೇಶ ನೆರೆ ಪೀಡಿತವಾಗಿದ್ದು, ಈ ಕಾರಣದಿಂದ ರೈತರು ಕಡಿಮೆ ಆದಾಯ ಹೊಂದುವಂತಾಗಿದ್ದು ಜೊತೆಗೆ ಗದ್ದೆಗಳನ್ನು ಕೃಷಿ ಮಾಡದೆ ಹಡಿಲು ಬಿಡುವಂತಾಗಿದೆ. ನೆರೆ ಪೀಡಿತ ಬಯಲು ಗದ್ದೆಗಳಲ್ಲಿ ಕೇವಲ ಸಾಂಪ್ರದಾಯಿಕ ತಳಿಗಳಾದ ಕಜೆ ಜಯ, ಎಂ.ಓ. 4 ತಳಿಗಳನ್ನು ಮಾತ್ರ ಹೆಚ್ಚಾಗಿ ಬೆಳೆಯುತ್ತಿದ್ದು, ಈ ತಳಿಗಳು ಸಾಮಾನ್ಯವಾಗಿ ಎತ್ತರವಾಗಿ ಬೆಳೆಯುವ ಗುಣ ಹೊಂದಿದ್ದು ಸುಲಭವಾಗಿ ನೆಲಕ್ಕುರುಳುವ, ರಾಸಾಯನಿಕ ಗೊಬ್ಬರಗಳಿಗೆ ಸ್ಪಂದಿಸದ ಮತ್ತು ಕಡಿಮೆ ಇಳುವರಿ ತಳಿಗಳಾಗಿರುತ್ತವೆ. ಸಾಮಾನ್ಯ ದಪ್ಪ ಗಾತ್ರದ ಎಂ.ಓ. 4 ಭತ್ತದ ತಳಿಯನ್ನು ವ್ಯಾಪಕವಾಗಿ ಕರಾವಳಿ ಕರ್ನಾಟಕದ ಮುಂಗಾರಿನಲ್ಲಿ ಬೆಳೆಯಲಾಗುತ್ತಿದ್ದರೂ, ಬಯಲು ಗದ್ದೆಗಳಲ್ಲಿ ಇವು ನೆಲಕ್ಕುರುಳುವ ಮತ್ತು ವಾರಮಾತ್ರ ನೆರೆನೀರಿನಲ್ಲಿ ಮುಳುಗಡೆಗೊಂಡರೂ ಕಡಿಮೆ ಇಳುವರಿಗೆ ಕಾರಣವಾಗುವ ಗುಣವನ್ನು ಹೊಂದಿವೆ.

ನೆರೆ ಪೀಡಿತ ಗದ್ದೆಗಳಲ್ಲಿ ಸಹ್ಯಾದ್ರಿ ಪಂಚಮುಖಿ ಭತ್ತದ ತಳಿಯ ಪ್ರಾತ್ಯಕ್ಷಿಕೆ

ಈ ತಳಿಯು ನೆರೆಹಾವಳಿಯನ್ನು 8–12 ದಿನಗಳವರೆಗೂ ತಡೆದುಕೊಳ್ಳುವ ಸಾಮರ್ಥ್ಯ ಹೊಂದಿದ್ದು, ಮಾಗಿದ ಪೈರು ಕೊಯ್ಲಿಗೆ ವಿಳಂಬವಾದರೂ ಮಳೆ ಗಾಳಿಯಿಂದ ಬೆಳೆಯು ನೆಲಕ್ಕೆ ಬೀಳುವುದಿಲ್ಲ. ಈ ತಳಿಯು ಮಧ್ಯಮ ಗಾತ್ರದ

ನೆರೆ ಪೀಡಿತ ಗದ್ದೆಗಳಲ್ಲಿ ಸಹ್ಯಾದ್ರಿ ಪಂಚಮುಖಿ ಭತ್ತದ ತಳಿಯ ಪ್ರಾತ್ಯಕ್ಷಿಕೆ

ಕಾಳುಗಳನ್ನು ಹೊಂದಿದ್ದು, ಹೆಚ್ಚು ಇಳುವರಿ ಕೊಡಬಲ್ಲ ಹಾಗೂ ಜೈವಿಕ ಮತ್ತು ಅಜೈವಿಕ ಒತ್ತಡಗಳನ್ನು ತಡೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಈ ತಳಿಯು ಮುಂಗಾರು ಬೆಳೆಯಾಗಿ ಬಯಲು ಗದ್ದೆಗಳಿಗೆ ಅತ್ಯಂತ ಪ್ರಶಸ್ತವಾಗಿರುತ್ತದೆ.

ಇದು ಕಣೆ ಕೀಟ, ಕಾಂಡ ಕೊರೆಯುವ ಹುಳ, ಎಲೆ ಸುರುಳಿ ಕೀಟ ಮತ್ತು ಬೆಂಕಿರೋಗಗಳಿಗೆ ನಿರೋಧಕ ಸಾಮರ್ಥ್ಯವನ್ನು ಹೊಂದಿರುತ್ತದೆ. ಈ ತಳಿಯ ಭತ್ತದ ಅಕ್ಕಿಯು ರುಚಿಕರವಾಗಿದ್ದು, ಅಲ್ಪ ಪ್ರಮಾಣದ ಪರಿಮಳ, ಕನಿಷ್ಠ ಬೇಯಿಸುವ ಅವಧಿ ಮತ್ತು ಬೇಯಿಸಲು ಕನಿಷ್ಠ ನೀರಿನ ಅಗತ್ಯತೆಯ ಕಾರಣ ಕುಚಲಕ್ಕಿಗೆ ಪ್ರಶಸ್ತವಾಗಿದೆ.

ಕೃಷಿ ವಿಜ್ಞಾನ ಕೇಂದ್ರದಿಂದ ನೆರೆ ಪೀಡಿತ ಗದ್ದೆಗಳ ಸಮಸ್ಯೆಗೆ ಮೂಂಚೂಣಿ ಪ್ರಾತ್ಯಕ್ಷಿಕೆ ಮುಖಾಂತರ ವೈಜ್ಞಾನಿಕ ಪರಿಹಾರ

ನೆರೆ ಬಂದರೆ ಕಜೆ ಜಯ, ಎಂ.ಓ. 4 ತಳಿಗಳಲ್ಲಿ ಕಡಿಮೆ ಇಳುವರಿ ಮತ್ತು ಆದಾಯ ನಷ್ಟವಾಗುವ ಕಾರಣ ಕೃಷಿ ವಿಜ್ಞಾನ ಕೇಂದ್ರವು ನೆರೆ ಬಂದರೂ ರೈತರ ಆದಾಯ ಕಡಿಮೆಯಾಗದಂತೆ ನೆರೆಯನ್ನು ಎದುರಿಸಿ ಬೆಳೆಯಬಲ್ಲ ತಳಿಯ ಬಗ್ಗೆ ಕೇಂದ್ರದ ವಿಜ್ಞಾನಿಗಳು ವಿವಿಧ ನೆರೆ ಪೀಡಿತ ಗದ್ದೆಗಳಿಗೆ ಭೇಟಿ ನೀಡಿ ರೈತರ ಜೊತೆ ಸಮಾಲೋಚನೆ ಕೈಗೊಂಡು ರೈತರಿಗೆ 2020–21ರ ಮೂಂಚೂಣಿ ಪ್ರಾತ್ಯಕ್ಷಿಕೆ ಯೋಜನೆಯಡಿಯಲ್ಲಿ ತರಬೇತಿಯನ್ನು ಹಾಗೂ ಸಹ್ಯಾದ್ರಿ ಪಂಚಮುಖಿ ತಳಿಯ ಗುಣಮಟ್ಟದ ಬೀಜವನ್ನು ರೈತರಿಗೆ ನೀಡಿ ನೆರೆ ನಿರೋಧಕ ತಳಿಯಾದ ಸಹ್ಯಾದ್ರಿ ಪಂಚಮುಖಿ ಕೆಂಪು ಭತ್ತದ ತಳಿಯನ್ನು ಮೊಟ್ಟ ಮೊದಲ ಬಾರಿಗೆ ರೈತರಾದ ದಯಾನಂದರವರ ಗದ್ದೆಯಲ್ಲಿ ಸುಮಾರು 5 ಎಕರೆಯಲ್ಲಿ ಪ್ರಾತ್ಯಕ್ಷಿಕೆಯನ್ನು ಕೈಗೊಂಡಿತು.

ಮೂಂಚೂಣಿ ಪ್ರಾತ್ಯಕ್ಷಿಕೆ ಯೋಜನೆಯಡಿಯಲ್ಲಿ ಬೆಳೆದ ನೆರೆ ನಿರೋಧಕ ಸಹ್ಯಾದ್ರಿ ಪಂಚಮುಖಿ ಕೆಂಪು ಭತ್ತದ ಕೃಷಿಯಲ್ಲಿ ವಿಜ್ಞಾನಿಗಳಿಂದ ತಾಂತ್ರಿಕ ಮಾಹಿತಿ, ಸಲಹೆಗಳನ್ನು ಪಡೆದು ತಮ್ಮ 5 ಎಕರೆಯಲ್ಲಿ ಸಮಗ್ರ ಭತ್ತದ ನಿರ್ವಹಣೆ ಮಾಡಿ 100 ಕ್ವಿಂಟಾಲ್ ಭತ್ತವನ್ನು ಬೆಳೆದು ಭತ್ತದ ಕೃಷಿಯಲ್ಲಿ ಯಶಸ್ವಿಯಾಗಿದ್ದಾರೆ.

ಮೂಡುಬಿದಿರಿ ಶಾಸಕರಾದ ಶ್ರೀ ಉಮನಾಥ್ ಕೊಟ್ಯನ್ ಅವರಿಂದ ನೆರೆ ಪೀಡಿತ ಗದ್ದೆಯಲ್ಲಿ ಸಹ್ಯಾದ್ರಿ ಪಂಚಮುಖಿ ಭತ್ತದ ತಿಯ ಮೂಂಚೂಣಿ ಪ್ರಾತ್ಯಕ್ಷಿಕೆಯನ್ನು ಉದ್ಘಾಟಿಸಿ ಶುಭ ಆರೈಸುತ್ತಿರುವುದು

ದಯಾನಂದ ಕುಲಾಲ್ ಹಾಗೂ ಕರಾವಳಿ ಭತ್ತದ ಕೃಷಿಕರಿಗೆ ವರದಾನವಾದ ಸಹ್ಯಾದ್ರಿ ಪಂಚಮುಖಿ

ತಮ್ಮ 5 ಎಕರೆ ಗದ್ದೆಯಲ್ಲಿ ಬೆಳೆದ ಸಹ್ಯಾದ್ರಿ ಪಂಚಮುಖಿ ಭತ್ತದ ತಳಿಯನ್ನು ಬೆಳೆದ ಪ್ರಾಯೋಗಿಕ ರೈತ ಶ್ರೀಮಾನ್

ಕೋಷ್ಟಕ 1 : ಸಹ್ಯಾದ್ರಿ ಪಂಚಮುಖಿ ಮತ್ತು ಎಂ.ಓ. 4 ತಳಿಗಳ ಇಳುವರಿಯ ಫಲಿತಾಂಶ

ತಳಿಗಳ ಮೌಲ್ಯಮಾಪನ	ಸಹ್ಯಾದ್ರಿ ಪಂಚಮುಖಿ		ಎಂ.ಓ. 4		ಶೇ. ಹೆಚ್ಚಿನ ಇಳುವರಿ
	ಭತ್ತ (ಕ್ವಿಂ./ಹೆ)	ಹುಲ್ಲು (ಟನ್/ಹೆ)	ಭತ್ತ (ಕ್ವಿಂ./ಹೆ)	ಹುಲ್ಲು (ಟನ್/ಹೆ)	
ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು	57	6.8	49	5.4	16
ಕೃಷಿ ವಿಜ್ಞಾನ ಕೇಂದ್ರ, ಉಡುಪಿ	56	6.8	48	5.5	17
ಬಹು ಕ್ಷೇತ್ರ ಪರೀಕ್ಷೆ	57	6.2	45	5.3	26

ಕೋಷ್ಟಕ 2 : ಸಹ್ಯಾದ್ರಿ ಪಂಚಮುಖಿ ಮತ್ತು ಎಂ.ಓ. 4 ತಳಿಗಳಲ್ಲಿ ಕಂಡು ಬರುವ ಗುಣ ಲಕ್ಷಣಗಳು

ತಳಿಗಳು	ಶೇ. 50 ಹೂ ಬಿಡುವಿಕೆ	ಅವಧಿ (ದಿವಸಗಳು)	ಗಿಡದ ಎತ್ತರ (ಸೆಂ.ಮೀ.)	ಹಿಳ್ಳೆಗಳು (ಚ.ಮೀ)	ತೆನೆಯ ಉದ್ದ (ಸೆಂ.ಮೀ.)	1000 ಕಾಳುಗಳ ತೋಕ (ಗ್ರಾಂ.)	ಧಾನ್ಯದ ಗಾತ್ರ	ಕಾಳಿನ ಬಣ್ಣ
ಸಹ್ಯಾದ್ರಿ ಪಂಚಮುಖಿ	95–100	130–135	90–95	380–400	23–24	24	ಮಧ್ಯಮ ದಪ್ಪ	ಕೆಂಪು
ಎಂ.ಓ. 4	100–105	130–135	80–85	320–350	20–21	23	ಮಧ್ಯಮ ದಪ್ಪ	ಕೆಂಪು

ದಯಾನಂದ ಕುಲಾಲ್ ರವರು ಕೃಷಿ ವಿಜ್ಞಾನಿಗಳ ಮಾರ್ಗದರ್ಶನದಲ್ಲಿ ಮುಂಚೂಣಿ ಪ್ರಾತ್ಯಕ್ಷಿಕೆ ಯೋಜನೆಯಡಿಯಲ್ಲಿ ವಿತರಿಸಿದ ಬೀಜದಿಂದ ಬೀಜೋತ್ಪನ್ನ ಮಾಡಿ ಯಶಸ್ಸು ಕಂಡಿದ್ದಾರೆ. ಕೃಷಿ ವಿಜ್ಞಾನ ಕೇಂದ್ರ ಹಾಗೂ ಕೃಷಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ ದಯಾನಂದ ಕುಲಾಲ್‌ರವರ ಗದ್ದೆಯಲ್ಲಿ ದೊಡ್ಡಮಟ್ಟದ ಕ್ಷೇತ್ರೋತ್ಸವವನ್ನು ದಕ್ಷಿಣ ಕನ್ನಡ ನೆರೆ ಪ್ರದೇಶಕ್ಕೆ – ನೆರೆ ನಿರೋಧಕ ತಳಿ ಸಹ್ಯಾದ್ರಿ ಪಂಚಮುಖಿ ಕೆಂಪು ಭತ್ತದ ತಳಿ ಎಂಬ ಶೀರ್ಷಿಕೆಯಡಿ ಜಿಲ್ಲೆಯಲ್ಲಿ ಪರಿಚಯಿಸಲಾಯಿತು.

ಸಹ್ಯಾದ್ರಿ ಪಂಚಮುಖಿ ಭತ್ತದ ತಳಿಯ ಕ್ಷೇತ್ರೋತ್ಸವ

ಒಟ್ಟಾರೆ ಬೆಳೆದ 100 ಕ್ವಿಂಟಾಲ್ ಭತ್ತದಲ್ಲಿ 20 ಕ್ವಿಂಟಾಲ್‌ರಷ್ಟು ಅಕ್ಕಿಗಾಗಿ ಉಪಯೋಗಿಸಿ ಉಳಿದ 80 ಕ್ವಿಂಟಾಲ್ ಗುಣಮಟ್ಟದ ಭತ್ತದ ಬೀಜವನ್ನು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಾದ್ಯಂತ 2021–22ರಲ್ಲಿ ಒಟ್ಟು 210 ರೈತರಿಗೆ ಕೃಷಿ ವಿಜ್ಞಾನ ಕೇಂದ್ರ ಮತ್ತು ಕೃಷಿ ಇಲಾಖೆಯ ಮುಖಾಂತರ ಗುಣಮಟ್ಟದ ಬೀಜವನ್ನು ವ್ಯಾಪಾರ ಮಾಡಿ ಸುಮಾರು ರೂ. 3 ಲಕ್ಷದಷ್ಟು ಲಾಭ ಪಡೆದಿದ್ದಾರೆ. ಕೋವಿಡ್–19ರ ಲಾಕ್‌ಡೌನ್‌ನಿಂದ ಬೆಸತ್ತಿದ್ದ ದಯಾನಂದರವರು ಸಹ್ಯಾದ್ರಿ ಪಂಚಮುಖಿ ಭತ್ತದ ತಳಿಯಿಂದ ಆರ್ಥಿಕತೆಯಲ್ಲಿ ವೃದ್ಧಿಯಾಗಿ ಆದಾಯ ದ್ವಿಗುಣಮಾಡುವುದರಲ್ಲಿ ಯಶಸ್ವಿಯಾಗಿದ್ದಲ್ಲದೆ ಕರಾವಳಿಯಾದ್ಯಂತ ಪಂಚಮುಖಿ ದಯಾನಂದ ಎಂದೆ ಪ್ರಸಿದ್ಧಿಯಾಗಿದ್ದಾರೆ. ●

ವಿಶ್ವವಿದ್ಯಾನಿಲಯದಿಂದ 2021–22ರಲ್ಲಿ ಬಿಡುಗಡೆಯಾದ ಭತ್ತದ ತಳಿಗಳು

ಭತ್ತ : ಕೆ.ಎಂ.ಪಿ. 225

ಭತ್ತ : ಆರ್.ಎನ್.ಆರ್. 15048

ಕೃಷಿ ವಿಜ್ಞಾನ, ಏಪ್ರಿಲ್–ಜೂನ್, 2022, ಸಂಚಿಕೆ 46(2) / 32–35

ಭಾರತದಲ್ಲಿನ ಬೆಳೆ ವಿಮೆಯ ಪ್ರಸ್ತುತ ಸ್ಥಿತಿಯ ಅವಲೋಕನ

ಆರ್. ರಾಜು[1], ಎಂ. ಎಲ್. ನಿತ್ಯಶ್ರೀ[2], ಟಿ. ಎಂ. ಕಿರಣ್ ಕುಮಾರ[3], ಸಿದ್ಧಯ್ಯ[4], ಜಿ. ನಾಗೇಶ[5]
[1&2]ಭಾರತೀಯ ಕೃ ಸಂಶೋಧನಾ ಸಂಸ್ಥೆ, ನವದೆಹಲಿ; [3]ರಾಷ್ಟ್ರೀಯ ಕೃಷಿ ಆರ್ಥಿಕ ಮತ್ತು ನೀತಿ ಸಂಶೋಧನಾ ಸಂಸ್ಥೆ, ನವದೆಹಲಿ
[4]ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.".ಕೆ., ಬೆಂಗಳೂರು; [5]ಕೃಷಿ ಮಹಾವಿದ್ಯಾಲಯ, ವಿ.ಸಿ. ಫಾರಂ. ಮಂಡ್ಯ
e-Mail : r.raju@icar.gov.in Mob. : **80537 26404**

ಭಾರತ ದೇಶದಲ್ಲಿ ಕೇಂದ್ರ ಸರ್ಕಾರವು ರೈತರಿಗಾಗಿ ಹಲವಾರು ಯೋಜನೆಗಳನ್ನು ರೂಪಿಸಿದೆ. ಇವುಗಳಲ್ಲಿ ಬೆಳೆವಿಮೆಯು ಕೂಡ ಒಂದಾಗಿದೆ. ಈ ಯೋಜನೆಯು ರೈತರ ಆರ್ಥಿಕ ಹಿತ ದೃಷ್ಟಿಯಿಂದ ಬಹಳ ಮುಖ್ಯವಾದದ್ದಾಗಿದೆ. ಇದರ ಬಗ್ಗೆ ಹಲವು ರೈತರಿಗೆ ಪರಿಚಯವಿದ್ದರೂ ಇನ್ನೂ ಕೆಲವರಿಗೆ ಇದರ ಪರಿಚಯವೇ ಇಲ್ಲ. ರೈತರಿಗೆ ಹಾಗೂ ಜನ ಸಾಮಾನ್ಯರಿಗೆ ರೂಪಿತವಾದ ಸರ್ಕಾರದ ಯೋಜನೆಗಳನ್ನು ಅವರ ಗಮನಕ್ಕೆ ಬರಲು ಮಾಧ್ಯಮಗಳಲ್ಲಿ ಜಾಹೀರಾತು ಮತ್ತು ಪತ್ರಿಕೆಗಳ ಮೂಲಕ ಸಕಾಲಕ್ಕೆ ಪ್ರಚಾರ ಮಾಡಿ ತಲುಪಿಸುವ ವ್ಯವಸ್ಥೆಗಳು ಇದ್ದರೂ ಹೆಚ್ಚು ಜನ, ಅದರಲ್ಲೂ ಅನಕ್ಷರಸ್ಥ ರೈತರಿಗೆ ತಿಳಿಯದಿರುವುದು ವಿಷಾದದ ಸಂಗತಿ. ಇದಕ್ಕೆ ಒಂದು ಪರಿಹಾರವಾಗಿ ರೈತರ ಸ್ವಸಹಾಯ ಗುಂಪುಗಳಿಂದ ಯೋಜನಾ ಮಾಹಿತಿಯನ್ನು ತಲುಪಿಸುತ್ತಿದ್ದರೂ ಕೆಲವು ರೈತರಿಗೆ ಇದು ತಲುಪುತ್ತಿಲ್ಲ. ರೈತ ಮತ್ತು ಸರಕಾರದ ಸಂಬಂಧಗಳನ್ನು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ಪಠ್ಯದಲ್ಲಿ ಪಾಠಗಳಿರುವಂತೆ ನೋಡಿಕೊಳ್ಳುವುದರಿಂದ ಗ್ರಾಮೀಣ ಶಿಕ್ಷಣದ ಮೂಲಕ ಸಹ ಈ ಅರಿವನ್ನು ರವಾನೆ ಮಾಡಿದಂತೆ ಆಗುತ್ತದೆ. ಕೆಲವೊಮ್ಮೆ ರೈತರ ಅಭಿವೃದ್ಧಿ ಮಾರ್ಗಗಳನ್ನು ಎಷ್ಟು ಬಗೆಯಲ್ಲೂ ಯೋಚಿಸದರೂ ಸಾಲದು ಎಂಬಂತಿದೆ.

ಬೆಳೆವಿಮೆ : ಬೆಳೆವಿಮೆ ಎಂದರೇನು ಎಂಬುದರ ಅರ್ಥ ತಿಳಿಯುವುದಕ್ಕಿಂತ ಪೂರ್ವದಲ್ಲಿ ವಿಮೆ ಎಂದರೇನು? ಎಂಬುದರ ಅರ್ಥವಾಗುವುದು ಅಗತ್ಯವಾಗಿದೆ. ವಿಮೆ ಎಂದರೆ; ಜೀವಹಾನಿ, ವಾಹನಹಾನಿ ಮುಂತಾದ ವಿಪತ್ತುಗಳಲ್ಲಿ, ಅವಲಂಭಿತರಿಗೆ ಅರ್ಥಿಕ ನೆರವಿನ ನಿರೀಕ್ಷೆಯಿಂದ, ಪರಿಹಾರಕ್ಕಾಗಿ ವಿಮಾಕಂತಿನ ಮಾದರಿಯಲ್ಲಿ ಹಣವನ್ನು ಅಧಿಕೃತ ಸಂಸ್ಥೆಗಳಿಗೆ ಸಂದಾಯಿಸುವುದು ಮತ್ತು ಅದರ ಪ್ರತಿ ನೆರವನ್ನು ಪಡೆಯುವುದು. ಉದಾರಹಣೆಗೆ ಜೀವವಿಮೆ, ವಾಹನವಿಮೆ ಮುಂತಾದವುಗಳನ್ನು ಹೆಸರಿಸಬಹುದು. ಇದೇ ರೀತಿಯಲ್ಲಿ ರೈತರ ಬೆಳೆಗೆ ವಿಪತ್ತಿನ ಕಾಲದಲ್ಲಿ ದೊರೆಯುವ ಆರ್ಥಿಕ ನೆರವಿನ ಮೂಲ ಬೆಳೆವಿಮೆ. ರೈತರ ಬೆಳೆವಿಮೆಯು ಒಂದು ರೀತಿಯಲ್ಲಿ ರೈತರ ಜೀವವಿಮೆಯಾಗಿದೆ. 'ರೈತರು ಬೆಳೆಯ ನಷ್ಟ ಅಥವಾ ಬೆಳೆಹಾನಿಯ ಸಂದರ್ಭದಲ್ಲಿ ಆರ್ಥಿಕ ನೆರವಿನ ನಿರೀಕ್ಷೆಯಿಂದ ಪರಿಹಾರಕ್ಕಾಗಿ ಏಕಕಂತಿನಲ್ಲಿ ಇಲಾಖೆಗೆ ಸಂದಾಯಮಾಡಿ, ಬೆಳೆನಷ್ಟವಾದಾಗ ಇಲಾಖೆಯ ಮೂಲಕ ಪರಿಹಾರಧನವನ್ನು ಹೊಂದುವ ಒಂದು ಆರ್ಥಿಕ ವ್ಯವಸ್ಥೆ ಮತ್ತು ಕ್ರಮವೇ ಬೆಳೆವಿಮೆಯಾಗಿದೆ'.

ಬೆಳೆವಿಮೆ ಯೋಜನೆ : ಕೃಷಿಕರ ಕೃಷಿ ವೃತ್ತಿಯಲ್ಲಿ ಬೆಳೆ ನಷ್ಟದಿಂದ ಉಂಟಾಗುವ ಹಣಕಾಸಿನ ನಷ್ಟದಿಂದ ಅವರನ್ನು ರಕ್ಷಿಸುವ ಒಂದು ಆರ್ಥಿಕ ನೆರವಿನ ಯೋಜನೆ. ಪ್ರಕೃತಿ ವಿಕೋಪಗಳಿಂದ ಉಂಟಾಗಬಹುದಾದ ಬೆಳೆ ವೈಫಲ್ಯ ಅಥವಾ ಬೆಳೆಯ ಇಳುವರಿ ನಷ್ಟವನ್ನು ಭರಿಸುವುದರ ಮೂಲಕ ರೈತರಿಗೆ ನೆರವಾಗಿ ಕಾಪಾಡುವುದು ಇದರ ಉದ್ದೇಶವಾಗಿದೆ. ಬೆಳೆ ನಷ್ಟಕ್ಕೆ; ಬರ, ಪ್ರವಾಹ, ಆಲಿಕಲ್ಲು ಮಳೆ, ಅತಿಯಾದ ತಾಪಮಾನ, ವ್ಯಾಪಕವಾಗಿ ಹರಡುವ ಕ್ರಿಮಿಕೀಟಗಳ ಬಾಧೆ, ಬೆಳೆ ರೋಗದ ಹಾವಳಿ, ಭೂಕುಸಿತ, ನೈಸರ್ಗಿಕವಾಗಿ ಹರಡುವ ಬೆಂಕಿಯಿಂದ ಗತಿಸುವ ಬೆಳೆ ನಷ್ಟ, ಚಂಡಮಾರುತ ಮುಂತಾದ ಪ್ರಮುಖ ಕಾರಣಗಳಾಗಿರುತ್ತವೆ. ಇಂತಹ ಸಂದರ್ಭಗಳಲ್ಲಿ ಎದುರಾಗುವ ಬೆಳೆ ನಷ್ಟಕ್ಕೆ ಬೆಳೆ ವಿಮೆ ಮಾಡಿಸಿದ ರೈತರಿಗೆ ಆರ್ಥಿಕವಾಗಿ ಈ ಬೆಳೆವಿಮೆ ಬೆಂಬಲವಾಗಿ ನಿಲ್ಲುತ್ತದೆ.

ಬೆಳೆವಿಮೆ ಯೋಜನೆಯು ಭಾರತದಲ್ಲಿ ಕಳೆದ ಶತಮಾನದ 70ರ ದಶಕದಿಂದ ಚಾಲ್ತಿಗೆ ಬಂದಿದೆ. ತರುವಾಯದಲ್ಲಿ ಈ ಯೋಜನೆಯು ಕಾಲಕಾಲಕ್ಕೆ ಅಗತ್ಯ ತಿದ್ದುಪಡಿಗೆ ಒಳಗಾಗಿ, 2006ರ ಏಪ್ರಿಲ್ ತಿಂಗಳಿನಿಂದ ಇದು 'ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ' ಎಂಬ ಹೆಸರಿನಿಂದ ಮುಂದುವರೆದಿದೆ.

ಬೆಳೆವಿಮೆ ಯೋಜನೆಯ ಮುಖ್ಯ ಉದ್ದೇಶಗಳು : ಅ) ಬೆಳೆಹಾನಿಯಿಂದ ಆರ್ಥಿಕ ಸಂಕಟಕ್ಕೆ ಒಳಗಾಗಿರುವ ರೈತರಿಗೆ ಆರ್ಥಿಕ ಬೆಂಬಲವನ್ನು ಒದಗಿಸುವುದು, ಆ) ಕೃಷಿಯಲ್ಲಿ ನಿರಂತರತೆಯನ್ನು ಕಾಪಾಡಿಕೊಂಡು ರೈತರ ಆದಾಯವನ್ನು

ಸ್ಥಿರಗೊಳಿಸುವುದು, ಇ) ನವೀನ ಮತ್ತು ಆಧುನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ರೈತರನ್ನು ಪ್ರೋತ್ಸಾಹಿಸುವುದು, ಈ) ಬೆಳೆ ನಷ್ಟದ ಅಪಾಯಗಳಿಂದ ರೈತರನ್ನು ರಕ್ಷಿಸುವುದು, ಉ) ರೈತರ ಸಾಲದ ಪ್ರಮಾಣವನ್ನು ಖಾತ್ರಿಪಡಿಸುವುದು ಮತ್ತು ಊ) ಬೆಳೆ ವೈವಿಧ್ಯೀಕರಣ ಮತ್ತು ವರ್ಧನೆ, ಸ್ಪರ್ಧಾತ್ಮಕ ಉತ್ಪಾದನೆ ಮತ್ತು ಕೃಷಿ ಕ್ಷೇತ್ರದ ಬೆಳವಣಿಗೆಗೆ ಸಹಕರಿಸುವುದು. ಒಟ್ಟಿನಲ್ಲಿ ಇದು ಕೃಷಿ ವಲಯದಲ್ಲಿ ಸುಸ್ಥಿರ ಉತ್ಪಾದನೆಯನ್ನು ಬೆಂಬಲಿಸುವ ಉದ್ದೇಶವನ್ನು ಹೊಂದಿದೆ.

ಬೆಳೆವಿಮೆ ಫಲಾನುಭವಿಗಳ ಸಂಕ್ಷಿಪ್ತ ವಿವರಗಳು : ದೇಶದಲ್ಲಿ ಬೆಳೆವಿಮೆಗೆ ಸಲ್ಲಿಕೆಯಾದ ವಿಮೆ ಅರ್ಜಿಗಳು, ವಿಮೆ ಮಾಡಿಸಲಾದ ಬೆಳೆಭೂಮಿ, ಹಾಗೂ ಫಲಾನುಭವಿಗಳ ವಿವರಗಳು ಮತ್ತು ಸಮೀಕ್ಷೆಯ ಅಂಕಿಅಂಶಗಳ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ. ಬೆಳೆವಿಮೆ ಯೋಜನೆ ಆರಂಭವಾದಾಗಿನಿಂದಲೂ ರೈತ ಸಮುದಾಯವು ಇದರ ಪ್ರಯೋಜನೆಗಳನ್ನು ಪಡೆಯುತ್ತಲೇ ಇದೆ. 2016–17 ಸಾಲಿನಿಂದ 2019–2020ನೆಯ ಸಾಲಿನವರೆಗೆ ಬೆಳೆವಿಮೆ ಫಲಾನುಭವಿಗಳನ್ನು ಅವಲೋಕಿಸಿದಾಗ ಆ ಸಮೀಕ್ಷಾ ವಿವರಗಳು ಇಂತಿವೆ; ಪ್ರತಿವರ್ಷ ಸರಾಸರಿ 5.77 ಕೋಟಿ ರೈತರು, ಸುಮಾರು 5.24 ಕೋಟಿ ಹೆಕ್ಟೇರ್ ಕೃಷಿ ಭೂಮಿಯ ಬೆಳೆಗೆ, ಬೆಳೆವಿಮೆ ಮಾಡಿಸಿದ್ದು, 1.93 ಕೋಟಿ ರೈತರು ಇದರ ಲಾಭ ಪಡೆದುಕೊಂಡಿದ್ದಾರೆ. ಬೆಳೆವಿಮೆ ಫಲಾನುಭವಿಗಳ ಮಾಹಿತಿಯನ್ನು ರಾಜ್ಯವಾರು ಅವಲೋಕಿಸಿದಾಗ; ಮಹಾರಾಷ್ಟ್ರ ರಾಜ್ಯದ ರೈತರು ಮೊದಲನೆಯ ಸ್ಥಾನದಲ್ಲಿದ್ದಾರೆ. ವಿಮೆ

ಕೋಷ್ಟಕ 1 : ಬೆಳೆವಿಮೆಗೆ ಸಲ್ಲಿಕೆಯಾದ ವಿಮೆ ಅರ್ಜಿಗಳು, ವಿಮೆ ಮಾಡಿಸಲಾದ ಬೆಳೆಭೂಮಿ ಹಾಗೂ ಫಲಾನುಭವಿಗಳ ತ್ರೈವಾರ್ಷಿಕ ವಿವರ (ಸರಾಸರಿ: 2016–17ರಿಂದ 2019–20ರವರೆಗೆ)

ರಾಜ್ಯಗಳು	ಅರ್ಜಿಗಳು (ಲಕ್ಷಗಳಲ್ಲಿ)		ಕೃಷಿ ಭೂಮಿ (ಲಕ್ಷ ಹೆಕ್ಟೇರ್)		ಫಲಾನುಭವಿಗಳು (ಲಕ್ಷಗಳಲ್ಲಿ)		ಬೆಳೆ ನಷ್ಟ ಪರಿಹಾರದ ಮೊತ್ತ (ಕೋಟಿ ರೂಪಾಯಿಗಳು)	
ಆಂಧ್ರಪ್ರದೇಶ	22.10	(3.83)	18.80	(3.59)	11.77	(6.09)	1123.92	(4.87)
ಬಿಹಾರ	12.54	(2.18)	11.52	(2.20)	1.09	(0.56)	187.34	(0.81)
ಛತ್ತೀಸ್‌ಗಢ್	21.53	(3.73)	22.48	(4.29)	7.34	(3.80)	981.21	(4.25)
ಗುಜರಾತ್	20.99	(3.64)	27.81	(5.31)	6.39	(3.31)	1308.15	(5.67)
ಹರಿಯಾಣ	14.58	(2.53)	20.75	(3.96)	3.80	(1.97)	764.04	(3.31)
ಕರ್ನಾಟಕ	22.88	(3.97)	21.72	(4.15)	11.29	(5.85)	1761.01	(7.63)
ಮಧ್ಯಪ್ರದೇಶ	74.51	(12.92)	120.08	(22.93)	22.96	(11.89)	4381.81	(18.99)
ಮಹಾರಾಷ್ಟ್ರ	128.89	(22.35)	74.74	(14.27)	62.81	(32.54)	4599.18	(19.94)
ಒಡಿಶಾ	26.73	(4.63)	15.07	(2.88)	6.95	(3.60)	1137.72	(4.93)
ರಾಜಸ್ಥಾನ	85.43	(14.82)	94.94	(18.13)	25.20	(13.05)	3104.61	(13.46)
ತಮಿಳುನಾಡು	23.27	(4.04)	12.62	(2.41)	13.80	(7.15)	2354.64	(10.21)
ಉತ್ತರ ಪ್ರದೇಶ	58.83	(10.20)	49.54	(9.46)	8.33	(4.32)	629.32	(2.73)
ಪಶ್ಚಿಮ ಬಂಗಾಳ	33.25	(5.77)	13.59	(2.59)	6.12	(3.17)	303.05	(1.31)
ಇತರ ರಾಜ್ಯಗಳು	31.12	(5.40)	20.11	(3.84)	5.21	(2.70)	434.30	(1.88)
ಒಟ್ಟು	**576.64**	**(100.00)**	**523.77**	**(100.00)**	**193.06**	**(100.00)**	**230690.38**	**(100.00)**

ಸೂಚನೆ : ಆವರದಲ್ಲಿಯ ಅಂಕಿಅಂಶಗ ಶೇಕಡಾವಾರು ಮೊತ್ತವನ್ನು ಸೂಚಿಸುತ್ತದೆ

ಮಾಡಲಾದ ಕೃಷಿ ಭೂಮಿಯ ಆಧಾರವಾಗಿ ನೋಡಿದಾಗ ಮಧ್ಯಪ್ರದೇಶ ರಾಜ್ಯವು ಮೊದಲನೆಯ ಸ್ಥಾನದಲ್ಲಿದೆ. ಬೆಳೆವಿಮೆ ಫಲಾನುಭವಿಗಳು ಹಾಗೂ ವಿಮೆಮಾಡಿಸಿದ ಜಮೀನಿನ ವಿವರಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ರೈತರನ್ನು ಅವಲೋಕಿಸಿದಾಗ 22.88 ಲಕ್ಷ ರೈತರು ಬೆಳೆವಿಮೆಗೆ ಅರ್ಜಿಗಳನ್ನು ಸಲ್ಲಿಸಿದ್ದಾರೆ. ಒಟ್ಟು 21.72 ಲಕ್ಷ ಬೆಳೆಭೂಮಿಯನ್ನು ವಿಮೆಮಾಡಿಸಿದ್ದಾರೆ. ಇದರಲ್ಲಿ ಒಟ್ಟು 11.29 ಲಕ್ಷ ಜನ ಫಲಾನುಭವಿಗಳು ವಿಮೆ ಪ್ರಯೋಜನೆಗಳನ್ನು ಪಡೆದಿದ್ದಾರೆ.

ಪ್ರತಿ ವರ್ಷವು ಬೆಳೆವಿಮೆಯನ್ನು ಮಾಡಿಸಿ ಅದರ ಪ್ರಯೋಜನೆಗಳನ್ನು ರೈತ ಸಮುದಾಯ ಪಡೆಯುತ್ತಿದೆ. ವರ್ತಮಾನದ ಕೃಷಿ ಪದ್ಧತಿಯಲ್ಲಿ ರೈತರು ಇದೊಂದು ಒಂದು ಉತ್ತಮ ಸಂಪ್ರದಾಯದಂತೆ ಭಾವಿಸಿ ಅನುಸರಿಸುತ್ತಿದ್ದಾರೆ.

ಬೆಳೆವಿಮೆ ಬೆಳೆಗಳು ಮತ್ತು ಕಂತಿನ ವಿವರಗಳು : ಬೆಳೆವಿಮೆ ಮಾಡಿಸಬಹುದಾದ ಬೆಳೆಗಳು ಮತ್ತು ಅದಕ್ಕೆ ರೈತರು ಪಾವತಿಸಬೇಕಾದ ಕಂತಿನ ಹಣಗಳು ನಿರ್ದಿಷ್ಟವಾಗಿರುತ್ತವೆ. ಬೆಳೆಗಳು ಇಂತಿವೆ; ಮುಂಗಾರು ಮತ್ತು ಹಿಂಗಾರಿನಲ್ಲಿ ಬೆಳೆಯಬಹುದಾದ ಎಲ್ಲಾ ಬಗೆಯ ಆಹಾರ ಧಾನ್ಯ ಬೆಳೆಗಳು, ಎಣ್ಣೆಕಾಳಿನ ಬೆಳೆಗಳು, ವಾರ್ಷಿಕವಾಗಿ ಬೆಳೆಯಬಹುದಾದಂತಹ ವಾಣಿಜ್ಯ ಮತ್ತು ತೋಟಗಾರಿಕಾ ಬೆಳೆಗಳಿಗೂ ಸಹ ಈ ಬೆಳೆವಿಮೆಯು ಅನ್ವಯಿಸುತ್ತದೆ.

ಬೆಳೆಗಳಿಗೆ ರೈತರು ಪಾವತಿಸಬೇಕಾದ ಗರಿಷ್ಠ ವಿಮಾ ಕಂತು ಬೆಳೆಯವಾರು ಭಿನ್ನವಾಗಿರುತ್ತದೆ. ಮುಂಗಾರು ಬೆಳೆಗೆ ವಿಮೆಯ ಕಂತಿನ ಮೊತ್ತವು ವಿಮಾ ಮೊತ್ತದ ಶೇ. 2ರಷ್ಟಾದರೆ, ಹಿಂಗಾರು ಬೆಳೆಗೆ ವಿಮಾ ಮೊತ್ತದ ಶೇ. 1.5 ಆಗಿದೆ. ವಾಣಿಜ್ಯ ಹಾಗೂ ತೋಟಗಾರಿಕಾ ಬೆಳೆಗೆ ವಿಮಾ ಮೊತ್ತದ ಶೇ. 5ರಷ್ಟಾಗಿರುತ್ತದೆ. ಬೆಳೆವಿಮೆ ಮಾಡಿಸುವಲ್ಲಿ ವಿಮೆಕಂತಿನ ಮೊತ್ತದ ವಿವರಗಳನ್ನು ಒಂದು ಪ್ರಾಂತ್ಯಕ್ಕೆ ಆಧರಿಸಿ ವಿವರಿಸುವುದರಿಂದ ಈ ಕುರಿತು ಇರುವ ಹೆಚ್ಚಿನ ಗೊಂದಲಗಳು ಸ್ಪಷ್ಟವಾಗುತ್ತದೆಂದು ವಿಶ್ವಾಸಿಸಬಹುದು. ಗೊಂದಲ ನಿವೃತ್ತಿಗೆ ಇಲ್ಲಿ ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದ ರೈತರು 2021–22ನೆಯ ಸಾಲಿನಲ್ಲಿ ಕೆಲವು ಪ್ರಮುಖ ಬೆಳೆಗಳಾದ; ಭತ್ತ, ರಾಗಿ, ಮೆಕ್ಕೆ ಜೋಳ, ಶುಂಠಿ, ಮೆಣಸು ಬೆಳೆಗಳಿಗೆ ಸಂಬಂಧಿಸಿದಂತೆ ಬೆಳೆವಿಮೆ ವಿವರಗಳು ಮುಂದಿನ ಕೋಷ್ಟಕದಲ್ಲಿ ಪ್ರಸ್ತಾಪಿಸಿದಂತೆ ಇವೆ.

ಕರ್ನಾಟಕ ರಾಜ್ಯದ ಇನ್ನು ಉಳಿದ ಜಿಲ್ಲಾ ಪ್ರಾಂತದ ಬೆಳೆಗೆ ಸಂಬಂಧಿಸಿದಂತಹ ಬೆಳೆವಿಮಾ ಕಂತಿನ ಮಾಹಿತಿಯನ್ನು ಇಲಾಖೆಯ ವಿಮಾ ಜಾಲತಾಣದಿಂದ ಪಡೆಯಬಹುದು.



ಬೆಳೆ ವಿಮೆಯ ಸಮಸ್ಯೆಗಳು: ಬೆಳೆವಿಮೆಯ ಪ್ರಯೋಜನಗಳನ್ನು ಪಡೆಯುವಲ್ಲಿ ರೈತರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳು ಇಂತಿವೆ: ಅ) ಬೆಳೆವಿಮೆ ಯೋಜನೆ ಬಗ್ಗೆ ಹಲವು ರೈತರಿಗೆ ಅರಿವು ಇಲ್ಲದಿರುವುದು ಆ) ಅಸಮರ್ಪಕ ಪರಿಹಾರ ಅಥವಾ ಬೆಳೆ ಹಾನಿಯಿಂದ ನಷ್ಟವಾದರೂ ಅದಕ್ಕೆ ಪರಿಹಾರ ಸಿಗದಿರುವುದು. ಇ) ಬೆಳೆ ನಷ್ಟದ ಪರಿಹಾರ ಪಡೆಯುವಲ್ಲಿ ವಿಳಂಬವಾಗುವುದು ಈ) ಬೆಳೆ ನಷ್ಟದ ಮೌಲ್ಯಮಾಪನದಲ್ಲಿ ಅಧಿಕಾರಿಗಳ ಪಕ್ಷಪಾತ ಉ) ಬ್ಯಾಂಕಿನಿಂದ ಸಾಲ ಪಡೆಯುದ ರೈತರನ್ನು ಬೆಳೆ ವಿಮೆಗೆ ಸೇರಿಸಲು ಬ್ಯಾಂಕ್ ಅಧಿಕಾರಿಗಳ ನಿರಾಕರಣೆ ಮತ್ತು ಊ) ಬ್ಯಾಂಕುಗಳ ದೂರ, ನಿರಂತರ ಭೇಟಿ ನೀಡಲು ಸಾಧ್ಯವಾಗದಿರುವುದು, ಬೆಳೆ ನಷ್ಟ ಪ್ರಕ್ರಿಯೆಯಲ್ಲಿ ವಿಳಂಬ ಇತ್ಯಾದಿ.

ಕೋಷ್ಟಕ 2 : 2021–22ನೆಯ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯ ರೈತರು ಪಾವತಿಸಬೇಕಾದ ಬೆಳೆವಿಮಾ ಮೊತ್ತದ ವಿವರಗಳು

ಬೆಳೆಗಳು	ವಿಮೆಯ ಗರಿಷ್ಠ ಮೊತ್ತ (ಒಂದು ಎಕರೆಗೆ)	ರೈತರು ಪಾವತಿಸಬೇಕಾದ ವಿಮೆಯ ಕಂತಿನ ಮೊತ್ತ (ರೂ.ಗಳು)
ಭತ್ತ	34,804	696
ರಾಗಿ	15,379	308
ಮೆಕ್ಕೆ ಜೋಳ	20,235	405
ಶುಂಠಿ	52,611	2631
ಮೆಣಸು	19,021	951
ಮಾವು	32,376	1619
ಅಡಿಕೆ	51,802	2590

ಬೆಳೆ ವಿಮೆಯ ಪ್ರಯೋಜನೆಗಳನ್ನು ಪಡೆಯಲು ಸಲಹೆಗಳು: ಬೆಳೆವಿಮೆಯ ಪ್ರಯೋಜನಗಳನ್ನು ಪಡೆಯುವಲ್ಲಿ ಪ್ರಮುಖ ಸಲಹೆಗಳು ಇಂತಿವೆ: ಅ) ಬೆಳೆ ವಿಮೆಯ ಬಗ್ಗೆ ಜಾಗೃತಿ ಮೂಡಿಸಲು ಹೆಚ್ಚಿನ ಜಾಹಿರಾತು ನೀಡುವುದು, ರೈತರಿಗೆ ತರಬೇತಿಗಳನ್ನು ಆಯೋಜಿಸುವುದು ಮತ್ತು ಪ್ರತಿಯೊಬ್ಬ ರೈತರಿಗೆ ಮಾಹಿತಿ ತಲುಪುವಂತೆ ಮಾಡುವುದು; ಆ) ಬೆಳೆ ವಿಮೆಗೆ ಅರ್ಜಿ ಸಲ್ಲಿಸುವ ವಿಧಾನ ಮತ್ತು ಕಾರ್ಯ ವೈಖರಿಗಳನ್ನು ಸರಳವಾಗಿಸುವುದು; ಇ) ಬೆಳೆ ನಷ್ಟವಾದ ತಕ್ಷಣ ಅಥವಾ ಮುಂದಿನ ಬೆಳೆ ಸೀಸನ್ ಪ್ರಾರಂಭವಾಗುವ ಮೊದಲು ಪರಿಹಾರವನ್ನು ವಿತರಿಸುವುದು ಮತ್ತು ಈ) ಗ್ರಾಮ/ ತಾಲೂಕು ಮಟ್ಟದಲ್ಲಿ ಪ್ರತ್ಯೇಕ ವಿಮಾ ಸೇವೆಗಳನ್ನು ಒದಗಿಸುವುದು.

ಬೆಳೆ ವಿಮೆಯ ಫಲಾನುಭವಿಗಳು : ಕರ್ನಾಟಕ ಸರಕಾರ ಅಧಿಸೂಚಿತ ಪ್ರದೇಶದಲ್ಲಿ ಅಧಿಸೂಚಿತ ಬೆಳೆಗಳನ್ನು ಬೆಳೆಯುತ್ತಿರುವ ಎಲ್ಲಾ ರೈತರು ಬೆಳೆವಿಮೆಗೆ ಅರ್ಜಿ ಸಲ್ಲಿಸಲು ಮತ್ತು ಅದರ ಫಲಾನುಭವವನ್ನು ಪಡೆಯಲು ಅರ್ಹರಾಗಿರುತ್ತಾರೆ. ಅರ್ಜಿ ಸಲ್ಲಿಸುವ ಸಮಯವು ಬೆಳೆಯ ಬಿತ್ತನೆ ಹಂತದಿಂದ ಕೊಯ್ಲಿನವರೆಗೆ ಇಳುವರಿಯ ನಷ್ಟದ ಅಪಾಯವನ್ನು ಒಳಗೊಂಡು ನಿಂತಿರುವ ಬೆಳೆಗಳಿಗೆ ಈ ವಿಮೆಯನ್ನು ಮಾಡಿಸಬಹುದು.

ಸರ್ಕಾರಿ ಬ್ಯಾಂಕಿನಿಂದ ಕೃಷಿಸಾಲ ಪಡೆಯುತ್ತಿರುವ ರೈತರು ತಮ್ಮ ಬ್ಯಾಂಕಿನ ಸಾಲದಲ್ಲಿ ವಿಮಾ ಕಂತನ್ನು ಕಟಾಯಿರಿಸಿ ನೇರವಾಗಿ ಇದರ ಲಾಭವನ್ನು ಪಡೆದುಕೊಳ್ಳಬಹುದು ಮತ್ತು ಇತರೆ ರೈತರು ತಮ್ಮ ಹತ್ತಿರದ ಬ್ಯಾಂಕಿನಲ್ಲಿ ಬೆಳೆವಿಮೆಗೆ ಅರ್ಜಿಯನ್ನು ಸಲ್ಲಿಸಬಹುದು. ಅಲ್ಲದೆ ರೈತರು ನೇರವಾಗಿ www.samrakshane.karnataka.gov.in ಜಾಲತಾಣದ ಮೂಲಕ ಸಹ ಬೆಳೆವಿಮೆಯನ್ನು ಮಾಡಿಸಬಹುದು. ಇಂದು ಬೆಳೆವಿಮೆ ಎಲ್ಲ ರೈತರ ಆಯ್ಕೆಯಾಗಿದೆ. 'ಬೆಳೆವಿಮೆಯನ್ನು ಮಾಡಿ, ಬೆಳೆನಷ್ಟದಿಂದ ರಕ್ಷಿಸಿಕೊಳ್ಳಿ' ಎಂಬುವುದು ರೈತರ ಅನುಭವದ ನುಡಿಯಾಗಿದೆ.

ಬೆಳೆ ವಿಮೆ : ರೈತರ ಸುಸ್ಥಿರತೆಗೆ ಆರ್ಥಿಕ ಬೆಂಬಲ

●

ವಿಶ್ವವಿದ್ಯಾನಿಲಯದಿಂದ 2021-22ರಲ್ಲಿ ಬಿಡುಗಡೆಯಾದ ತಳಿಗಳು

ಮುಸುಕಿನ ಜೋಳ (ಸಂಕರಣ ತಳಿ) **: ಎಂ.ಎ.ಹೆಚ್. 14-138**

ಎಳ್ಳು : ಜಿ.ಕೆ.ವಿ.ಕೆ.ಎಸ್. 1

ಕೊರಲೆ : ಜಿ.ಪಿ.ಯು.ಬಿ.ಟಿ. 2

ಭಾರತದ ಆರ್ಥಿಕಾಭಿವೃದ್ಧಿಯ ಓಟದಲ್ಲಿ – ಕರ್ನಾಟಕದ ಕಡೆ ಒಂದು ನೋಟ

ಆರ್. ರಘುಪತಿ ಮತ್ತು ಕೆ. ಬಿ. ಉಮೇಶ್
ಪ್ರೊ. ನಂಜುಂಡಸ್ವಾಮಿ ಸಂಶೋಧನಾ ಪೀಠ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ., ಬೆಂಗಳೂರು – 560 065
e-Mail : prof.nsrc@gmail.com Mob. : 76196 91094

ಪ್ರತಿವರ್ಷ 'ಕರ್ನಾಟಕ ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ನಿರ್ದೇಶನಾಲಯದ' ವತಿಯಿಂದ ಪ್ರಕಟಗೊಳ್ಳುವ ರಾಜ್ಯ ಆರ್ಥಿಕ ಸಮೀಕ್ಷೆಯ ರಾಷ್ಟ್ರಮಟ್ಟದ ಹಣಕಾಸು ಸಚಿವಾಲಯ ಪ್ರಕಟಪಡಿಸುವ ಕೇಂದ್ರ ಆರ್ಥಿಕ ಸಮೀಕ್ಷೆಯ ಸ್ವರೂಪದಲ್ಲಿರುತ್ತದೆ. ಕರ್ನಾಟಕ ರಾಜ್ಯವು ದೇಶದಲ್ಲಿ ಒಟ್ಟು ಜನಸಂಖ್ಯೆಯಲ್ಲಿ 8ನೇ ಸ್ಥಾನದಲ್ಲಿದ್ದು (ಗ್ರಾಮೀಣ ಜನಸಂಖ್ಯೆ– 61.33, ನಗರ ಜನಸಂಖ್ಯೆ – 38.67 ಮತ್ತು ಲಿಂಗಾನುಪಾತ ಪ್ರಮಾಣ: 973). 2001 ರಿಂದ 2011ರ ಅವಧಿಯಲ್ಲಿ 15.6 ರಷ್ಟು ಜನಸಂಖ್ಯೆ ಬೆಳವಣಿಗೆ ಪ್ರಮಾಣ ಹೊಂದಿರುತ್ತದೆ. ಕರ್ನಾಟಕ ರಾಜ್ಯದ ಸಾಕ್ಷರತೆ: ಶೇ. 75.36 (ಪುರುಷರು ಶೇ. 82.47 ಮತ್ತು ಮಹಿಳೆಯರು 68.08). ದೇಶದಲ್ಲಿ ಕರ್ನಾಟಕ ರಾಜ್ಯ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ 6ನೇ ಸ್ಥಾನ ಹೊಂದಿದ್ದು ಒಟ್ಟು 4 ಕಂದಾಯ ವಿಭಾಗಗಳನ್ನು ಹೊಂದಿದೆ, ಅವುಗಳು ಬೆಂಗಳೂರು (9 ಜಿಲ್ಲೆಗಳು), ಮೈಸೂರು (8 ಜಿಲ್ಲೆಗಳು), ಬೆಳಗಾವಿ (7 ಜಿಲ್ಲೆಗಳು) ಮತ್ತು ಕಲಬುರಗಿ (7 ಜಿಲ್ಲೆಗಳು).

ಭಾರತದ ಆರ್ಥಿಕತೆ

ಭಾರತ ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿದ್ದು ಗ್ರಾಮೀಣ ಜನಸಂಖ್ಯೆಯ, 68.85 ನ್ನು ಹೊಂದಿದೆ. ಭಾರತವು ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಜಗತ್ತಿನಲ್ಲಿ 7ನೇ ಸ್ಥಾನದಲ್ಲಿದೆ.

ಕರ್ನಾಟಕ ಆರ್ಥಿಕ : 2021–22 ರ ಸಂಕ್ಷಿಪ್ತ ಮಾಹಿತಿ

ಆರ್ಥಿಕ ಸ್ಥಿತಿಗತಿ

2021–22ನೇ ಸಾಲಿನ ಕರ್ನಾಟಕದ ತಲಾವಾರು ಒಟ್ಟು ಆಂತರಿಕ ಉತ್ಪನ್ನ (GSDP) ರೂ 3.05 ಲಕ್ಷ ಗಳಿದ್ದು ಮೊದಲ 5 ರಾಜ್ಯಗಳ ಪಟ್ಟಿಯಲ್ಲಿದೆ. ಪ್ರಸ್ತುತ ಸಾಲಿನಲ್ಲಿ ಸೇವಾ ವಲಯ ಅತ್ಯಧಿಕ ಪಾಲನ್ನು ಹೊಂದಿದೆ (ಕರ್ನಾಟಕ ರಾಜ್ಯದ ಒಟ್ಟಾರೆ ಮೌಲ್ಯವರ್ಧನೆಯಲ್ಲಿ 66.1 ರಷ್ಟು ಪಾಲನ್ನು ಹೊಂದಿದೆ). ರಾಷ್ಟ್ರದ ಒಟ್ಟು ಆಂತರಿಕ ಉತ್ಪನ್ನಕ್ಕೆ ಕರ್ನಾಟಕ 8.8 ರಷ್ಟು ಕೊಡುಗೆಯನ್ನು ನೀಡಿದೆ. 2021–22ರಲ್ಲಿ ಕರ್ನಾಟಕ ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಮತ್ತು ತಲಾವಾರು ರಾಜ್ಯದ ಒಟ್ಟು ಆಂತರಿಕ ಉತ್ಪನ್ನ ಕೃಷಿಯಿಂದ 16.6, ಕೈಗಾರಿಕೆಯಿಂದ 6.1 ಮತ್ತು ಸೇವೆಯಿಂದ 11.6 ಕೊಡುಗೆ ನೀಡುತ್ತಿದೆ.

ಭಾರತದಲ್ಲಿ ಕರ್ನಾಟಕದ ಸ್ಥಾನ

ಭಾರತದ ಮೊದಲ ಮೂರು ರಾಜ್ಯಗಳಲ್ಲಿ ಕರ್ನಾಟಕವು ಒಂದಾಗಿದ್ದು, ದೇಶದ ಜಿಡಿಪಿಗೆ ಶೇ. 8.8 ರಷ್ಟು ಕೊಡುಗೆ ನೀಡಿದೆ. ದೇಶದ ಜಿಡಿಪಿಗೆ ಅತಿ ಹೆಚ್ಚು ಕೊಡುಗೆ ನೀಡುವ ಮೂರು ಪ್ರಮುಖ ರಾಜ್ಯಗಳೆಂದರೆ ಮಹಾರಾಷ್ಟ್ರ (ಶೇ. 13.5) ತಮಿಳುನಾಡು (ಶೇ. 9.6) ಕರ್ನಾಟಕ (ಶೇ. 8.8) ಉತ್ತರ ಪ್ರದೇಶ (ಶೇ. 8.6) ಮತ್ತು ಗುಜರಾತ್ (ಶೇ. 8.4). ಪ್ರಸ್ತುತ ಸಾಲಿನಲ್ಲಿ ಸೇವಾ ವಲಯ ಅತ್ಯಧಿಕ ಪಾಲನ್ನು ಹೊಂದಿದೆ (ಇದು ರಾಜ್ಯದ ಒಟ್ಟಾರೆ ಮೌಲ್ಯವದಲ್ಲಿ ಶೇ. 66.1 ರಷ್ಟು ಪಾಲನ್ನು ಹೊಂದಿದೆ). ರಾಷ್ಟ್ರದ ಒಟ್ಟು ಆಂತರಿಕ ಉತ್ಪನ್ನಕ್ಕೆ ಕರ್ನಾಟಕ ಶೇ. 8.8 ರಷ್ಟು ಕೊಡುಗೆಯನ್ನು ನೀಡುತ್ತದೆ. ಭಾರತದ ಜಿಡಿಪಿಗೆ ಕರ್ನಾಟಕದ ಪಾಲು (ಕೃಷಿ ಶೇ. 14.3, ಕೈಗಾರಿಕೆ ಶೇ. 19.4 ಮತ್ತು ಸೇವೆ ಶೇ. 66.3).

ರಾಜ್ಯ ಆದಾಯ ಬೆಲೆಗಳು ಮತ್ತು ಹಣದುಬ್ಬರ

ರಾಷ್ಟ್ರೀಯ ಹಾಗೂ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ವಾರ್ಷಿಕ ಬೆಳವಣಿಗೆ ದರಗಳು ವರ್ಷ: 2021–22

2011–12ರ ಮೂಲ ಬೆಲೆಗಳಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ ದರ (9.5). ರಾಷ್ಟ್ರೀಯ ಒಟ್ಟು ಆಂತರಿಕ ಉತ್ಪನ್ನದ ಬೆಳವಣಿಗೆ ದರ (9.2) ಕ್ಕಿಂತ ಹೆಚ್ಚಾಗಿದೆ. ಇದ್ದು ಪ್ರಸಕ್ತ ಬೆಲೆಗಳಲ್ಲಿ ಕ್ರಮವಾಗಿ 18.4 ಮತ್ತು 17.6 ರಷ್ಟಾಗಿದೆ.

ಕರ್ನಾಟಕದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದಲ್ಲಿ ವಲಯ ವಾರು ಕೊಡುಗೆ (2021–22ರಂತೆ) ನೋಡಲಾಗಿದೆ

2019–20ನೇ ಸಾಲಿನ ಆದಾಯ ಹಾಗೂ ತಲಾದಾಯ ಮೊದಲ ಸ್ಥಾನ ಆಂಧ್ರ ಪ್ರದೇಶ ನಂತರ ಬಿಹಾರ್ ಗೋವಾ ,ಹರಿಯಾಣ, ಹಿಮಾಚಲ ಪ್ರದೇಶದ ನಂತರ ಕರ್ನಾಟಕ ಆರನೇ ಸ್ಥಾನದಲ್ಲಿದೆ. ರಾಜ್ಯದ ಆದಾಯ– 17,30,991 (ಕೋಟಿಗಳಲ್ಲಿ) ತಲಾದಾಯ (1,94,767 ರೂಪಾಯಿ). 2019 20ನೇ ಸಾಲಿನ ಜಿಲ್ಲಾವಾರು ತಲಾದಾಯ ಕೊಡುಗೆ ಬೆಂಗಳೂರು ನಗರ ಮೊದಲ ಸ್ಥಾನ ನಂತರ ದಕ್ಷಿಣ ಕನ್ನಡ, ಧಾರವಾಡ 11ನೇ ಸ್ಥಾನ ಮತ್ತು ಕೊನೆಯ ಸ್ಥಾನದಲ್ಲಿ ಕಲಬುರಗಿ.

ಭಾರತದಲ್ಲಿ ಹಣದುಬ್ಬರವನ್ನು ಸಗಟು ಬೆಲೆ ಸೂಚ್ಯಂಕ ಮತ್ತು ಗ್ರಾಹಕ ಬೆಲೆ ಸೂಚ್ಯಂಕದಿಂದ ಅಳೆಯಲಾಗುತ್ತದೆ. 2021–22ನೇ ಸಾಲಿನ ಅಖಿಲ ಭಾರತ ಸಗಟು ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರ ಪ್ರಮಾಣ 8.2 ರಷ್ಟು ಇದ್ದು ಭಾರತ ಔದ್ಯಮಿಕ ಕಾರ್ಮಿಕ ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರ ಪ್ರಮಾಣ 4.66 ರಷ್ಟಾಗಿರುತ್ತದೆ.

ಬಂಡವಾಳ ಹೂಡಿಕೆ ಮತ್ತು ರಫ್ತು

ಕರ್ನಾಟಕಕ್ಕೆ ಮತ್ತು ಭಾರತಕ್ಕೆ ಹರಿದುಬಂದಿರುವ ವಿದೇಶಿ ನೇರ ಬಂಡವಾಳ ಹೂಡಿಕೆ 2021–22ರಲ್ಲಿ 13,954 ಮಿಲಿಯನ್ ಅಮೆರಿಕನ್ ಡಾಲರ್ ಮತ್ತು 31,153 ಮಿಲಿಯನ್ ಅಮೆರಿಕನ್ ಡಾಲರ್. ಭಾರತಕ್ಕೆ ಬಂದ ಒಟ್ಟು ವಿದೇಶಿ ಬಂಡವಾಳ ಹೂಡಿಕೆ (FDI)ನಲ್ಲಿ ಕರ್ನಾಟಕದ ಪಾಲು 44.79. 2019 ರಿಂದ 2021 ರವರೆಗೆ ರಾಜ್ಯಕ್ಕೆ ಬಂದಿರುವ ಒಟ್ಟು ವಿದೇಶಿ ಬಂಡವಾಳ ಹೂಡಿಕೆಯಲ್ಲಿ ಮೊದಲ 5 ರಾಜ್ಯಗಳು ಯಾವುವೆಂದರೆ ಮಹಾರಾಷ್ಟ್ರ, ಗುಜರಾತ್, ಕರ್ನಾಟಕ, ದೆಹಲಿ ಮತ್ತು ತಮಿಳುನಾಡು.

ಕರ್ನಾಟಕ ರಾಜ್ಯದಲ್ಲಿ 2016–17 ರಿಂದ 2021–22 ರವರೆಗೆ ಮುಂಚೂಣಿಯಲ್ಲಿರುವ 5 ರಫ್ತು ಸರಕು–ಸಾಮಗ್ರಿಗಳೆಂದರೆ ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸಾಫ್ಟ್ವೇರ್–(80.59), ಇಂಜಿನಿಯರಿಂಗ್(8.08), ಮೂಲ ರಾಸಾಯನಿಕಗಳು ಔಷಧಿಗಳು ಮತ್ತು ಕಾಸ್ಮೆಟಿಕ್ಸ್ (3.06), ಪೆಟ್ರೋಲಿಯಂ (2.24) ಮತ್ತು ರೆಡಿಮೇಡ್ ಗಾರ್ಮೆಂಟ್ಸ್ (1.74). ಒಟ್ಟಾರೆ ಭಾರತದ ರಫ್ತಿನಲ್ಲಿ ಕರ್ನಾಟಕದ ಪಾಲು 18.89. ಭಾರತವಾರು ರಫ್ತಿನಲ್ಲಿ ಕರ್ನಾಟಕದ ಜಿಲ್ಲೆಗಳ ಸ್ಥಾನ ಬೆಂಗಳೂರು ನಗರ 10ನೇ ಸ್ಥಾನದಲ್ಲಿದೆ, ಬಳ್ಳಾರಿ 26ನೇ ಸ್ಥಾನ. ಮತ್ತು ದಕ್ಷಿಣ ಕನ್ನಡ 75ನೇ ಸ್ಥಾನ.

ಸಾಂಕ್ರಾಮಿಕ ಸಮಯದಲ್ಲಿ ತೆರಿಗೆ/ಹಣಕಾಸಿನ ನಿರ್ವಹಣೆ ವಿವರ ಶೇಕಡಾ (2021–22)

1) ರಾಜ್ಯ ತೆರಿಗೆಗಳು	7.3
2) ಕೇಂದ್ರ ತೆರಿಗೆಗಳ ಪಾಲು	1.43
3) ಕೇಂದ್ರದಿಂದ ಅನುದಾನ	0.91
4) ತೆರಿಗೆಯೇತರ ಆದಾಯ	0.49
5) ರಾಜಸ್ವ ಜಮೆಗಳು	7.87
6) ಬಂಡವಾಳ ಜಮೆಗಳು	3.41
7) ರಾಜಸ್ವ ವೆಚ್ಚಗಳು	4.58
8) ಬಂಡವಾಳ ಜಮೆಗಳು	11.99

2021–22 ರ ಸಾಲಿನ ಜಿಲ್ಲಾವಾರು ವೆಚ್ಚದ ಹಂಚಿಕೆ, ಪ್ರಮಾಣ ಬೆಂಗಳೂರು ನಗರಕ್ಕೆ ಶೇ. (3.68%) ಅತಿ ಹೆಚ್ಚು ಇದ್ದು ಅತಿ ಕಡಿಮೆ ಯಾದಗಿರಿ (1.64%).

ಕರ್ನಾಟಕ ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯಲ್ಲಿ ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳ ಪಾತ್ರ ಆದ್ಯತಾ ವಲಯದ ಮುಂಗಡಗಳು

1.	ಕೃಷಿ ವಲಯ	18
2.	ಸಣ್ಣ ಮತ್ತು ಮಧ್ಯಮ ಕೈಗಾರಿಕೆ ವಲಯ	12.94
3.	ದುರ್ಬಲ ವಲಯ	10.95
4.	ಒಟ್ಟು	38.87

ಜಿಲ್ಲಾವಾರು ಬ್ಯಾಂಕ್ ಶಾಖೆಗಳನ್ನು ಹೊಂದಿರುವ ಗ್ರಾಮಗಳ ಪ್ರಮಾಣ

ಬಾಗಲಕೋಟೆ ಅರೇ ನಗರ ಪ್ರದೇಶ–100 ಗ್ರಾಮೀಣ –15 ಬೆಂಗಳೂರು ಗ್ರಾಮಾಂತರ ಅರೆ ನಗರ ಪ್ರದೇಶ– 100 ಗ್ರಾಮೀಣ – 16.9 ಕೊನೆಯ ಸ್ಥಾನ ಯಾದಗಿರಿ ಅರೆ ನಗರ ಪ್ರದೇಶ–100 ಗ್ರಾಮೀಣ –7.9.

ಸುಸ್ಥಿರ ಅಭಿವೃದ್ಧಿ ಮತ್ತು ಹವಾಮಾನ ಬದಲಾವಣೆ

ಸುಸ್ಥಿರ ಅಭಿವೃದ್ಧಿ ಗುರಿಗಳು 'ಎಲ್ಲರ ಒಳಗೊಳ್ಳುವಿಕೆಯನ್ನು' ಹೊಂದಿವೆ. Millennium development goals – ಸಹಸ್ರಮಾನದ ಅಭಿವೃದ್ಧಿ ಗುರಿಗಳು 2015ರ ವೇಳೆಗೆ ವಿಶ್ವದಾದ್ಯಂತ ಸಾಧಿಸಬೇಕಾದ ಕುರಿತು ಒಂದು ಪ್ರಯತ್ನವಾಗಿತ್ತು.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 2030ರ ಕಾರ್ಯಸೂಚಿಯ ಭಾಗಗಳಾಗಿದ್ದು ಇವುಗಳನ್ನು ಸಾಧಿಸಲು 17 ವಿವಿಧ ಗುರಿಗಳನ್ನು ಹಾಕಿಕೊಳ್ಳಲಾಯಿತು. ನೀತಿ ಆಯೋಗದ ಭಾರತದ ಸುಸ್ಥಿರ ಅಭಿವೃದ್ಧಿ ಗುರಿಗಳ ಸೂಚ್ಯಂಕ ವರದಿ 2020–21 ರ ಪ್ರಕಾರ ಕರ್ನಾಟಕವು ಮೂರನೇ ಸ್ಥಾನದಲ್ಲಿದೆ. ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳ ಜೊತೆಗೆ Strategy for new India @ 75 ಮೂಲಕ ಸರ್ಕಾರದ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ.

ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಕರ್ನಾಟಕದ ಸ್ಥಾನ

1) ಬಡತನ ಮತ್ತು ನಿರ್ಮೂಲನೆಯಲ್ಲಿ	10
2) ಹಸಿವು ಮುಕ್ತ	10
3) ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ	5
4) ಗುಣಮಟ್ಟದ ಶಿಕ್ಷಣ	6
5) ಲಿಂಗ ಸಮಾನತೆ	6
7) ಅಗ್ಗವಾದ ಮತ್ತು ಶುದ್ಧ ಶಕ್ತಿ	1
8) ಗೌರವಿತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ	6
9) ಉದ್ಯಮ ಆವಿಷ್ಕಾರ ಮತ್ತು ಮೂಲಸೌಕರ್ಯಗಳು	6
10) ಅಸಮಾನತೆಗಳ ಇಳಿಕೆ	12
11) ಸುಸ್ಥಿರ ನಗರಗಳು ಮತ್ತು ಸಮುದಾಯಗಳು	7
12) ಸುಸ್ಥಿರವಾದ ಉತ್ಪಾದನೆ ಮತ್ತು ಬಳಕ	3
13) ಹವಾಮಾನ ಕ್ರಮಗಳು	7
14) ಜಲ ಜೀವರಾಶಿ	11
15) ಭೂಮಿ ಮೇಲಿನ ಜೀವರಾಶಿ	11
16) ಶಾಂತಿ ನ್ಯಾಯ ಮತ್ತು ಸದೃಢ ಸಂಸ್ಥೆಗಳು	7
17) ಗುರಿ ಮತ್ತು ಪಾಲುದಾರಿಕೆ	11

ಕೃಷಿ ಮತ್ತು ಆಹಾರ ನಿರ್ವಹಣೆ

ಕರ್ನಾಟಕ ರಾಜ್ಯವು 31 ಜಿಲ್ಲೆಯ 227 ತಾಲೂಕುಗಳಲ್ಲಿ ಸುಮಾರು 30,000 ಗ್ರಾಮಗಳನ್ನು ಹೊಂದಿದೆ. 2011ರ ಜನಗಣತಿಯ ಪ್ರಕಾರ ಕೃಷಿ ಕ್ಷೇತ್ರವು 13.74 ದಶಲಕ್ಷ ಕಾರ್ಮಿಕರಿಗೆ ಆಶ್ರಯ ನೀಡಿದ್ದು, ಇದರಲ್ಲಿ 23.61 ರಷ್ಟು ಜನರು ಕೃಷಿಕರಾಗಿದ್ದಾರೆ. 2021–2022ನೇ ಸಾಲಿನಲ್ಲಿ ಕೃಷಿ ಇಲಾಖೆಯ ಯೋಜನೆಗಳ ಅನುಷ್ಠಾನಕ್ಕೆ ಒಟ್ಟು 3,850.62 ಕೋಟಿಗಳನ್ನು ಮೀಸಲಿಡಲಾಗಿದೆ. ವಿವಿಧ ಬೆಳೆಗಳ ಉತ್ಪಾದನೆಯಲ್ಲಿ ಕರ್ನಾಟಕದ ಪ್ರಗತಿಯನ್ನು ಅವಲೋಕಿಸಲಾಗಿ ತರಕಾರಿ ಬೆಳೆಗಳ ಉತ್ಪಾದನೆಯಲ್ಲಿ 5ನೇ ಸ್ಥಾನ, ಹಣ್ಣುಗಳ ಉತ್ಪಾದನೆಯಲ್ಲಿ ಮೂರನೇ ಸ್ಥಾನ ಮತ್ತು ಗುಜರಾತ್ ರಾಜ್ಯದ ನಂತರ ಎರಡನೇ ಅತಿ ಹೆಚ್ಚು ಹಾಲು ಉತ್ಪಾದದಿಸುವ ರಾಜ್ಯ. ದ್ರಾಕ್ಷಿ ಹಣ್ಣುಗಳ ಉತ್ಪಾದನೆಯಲ್ಲಿ ಎರಡನೇ ಸ್ಥಾನ, ಒಟ್ಟಾರೆ ಕಾಫಿ ಬೆಳೆಯ ಶೇ. 70 ರಷ್ಟು ಕರ್ನಾಟಕ ಬೆಳೆಯುತ್ತದೆ, ಕಬ್ಬು ಉತ್ಪಾದನೆಯಲ್ಲಿ 4ನೇ ಸ್ಥಾನ, ಸಕ್ಕರೆ ಉತ್ಪಾದನೆಯಲ್ಲಿ ರಾಜ್ಯಕ್ಕೆ 3 ಸ್ಥಾನ, ಪುಷ್ಪಕೃಷಿಯಲ್ಲಿ 2 ಸ್ಥಾನ ಮತ್ತು ರೇಷ್ಮೆ ಕೃಷಿಯಲ್ಲಿ 1 ಸ್ಥಾನ.

ಮಳೆ ಹಂಚಿಕೆ ಮತ್ತು ಪ್ರಮಾಣ

ಮಣ್ಣಿನ ಗುಣ ಲಕ್ಷಣ, ಸಮುದ್ರ ಮಟ್ಟದಿಂದ ಎತ್ತರ ಮತ್ತು ಪ್ರಮುಖ ಬೆಳೆಗಳ ಆಧಾರದ ಮೇಲೆ ರಾಜ್ಯವನ್ನು 10 ವಿವಿಧ ಕೃಷಿ ಹವಾಮಾನಿಕ ವಲಯಗಳಾಗಿ ವಿಂಗಡಿಸಲಾಗಿದೆ:–



ಈ ವರ್ಷದ ಆಯವ್ಯಯದಲ್ಲಿ ಘೋಷಣೆಯಾದ ನೂತನ ಯೋಜನೆಗಳ ಆದಾರದ ಮೇಲೆ ಸ್ಥಾಪನೆಯಾದ ಗೋಶಾಲೆ, ಬೆಂಗಳೂರಿನ ಹೆಸರಘಟ್ಟದಲ್ಲಿ ಥೀಮ್ ಪಾರ್ಕ್ (ಇದರ ಉದ್ದೇಶ: ದೇಶಿಯ ಜಾನುವಾರುಗಳ, ಕುರಿ ಮೇಕೆ ತಳಿಗಳ, ಮತ್ತು ಕುಕ್ಕುಟ ತಳಿಗಳ ಪ್ರದರ್ಶನದ ಮಾಹಿತಿ ಹಾಗೂ ತರಬೇತಿ). ರಾಜ್ಯದಲ್ಲಿ ಹೆಚ್ಚಿನ ಮಾಂಸ ಉತ್ಪಾದನೆ ಮತ್ತು

ಅಧಿಕ ಮರಿಗಳನ್ನು ನೀಡುವ ಉತ್ತಮ ಮೇಕೆ ತಳಿಯಾದ ನಂದಿದುರ್ಗ ಮೇಕೆ ತಳಿ ಅಭಿವೃದ್ಧಿ, ಹೊರರಾಜ್ಯದ ದೇಶಿ ತಳಿಗಳಾದ ಗಿರ್, ಸಾಹಿವಾಲ್ ಥಾರ್ಪಾರ್ಕರ್ ಮತ್ತು ದೇವಣಿ ತಳಿಗಳನ್ನು ಅಭಿವೃದ್ಧಿಪಡಿಸಿ ರಾಜ್ಯದ ರೈತರಿಗೆ ಪರಿಚಯಿಸಲು 'ಸಮಗ್ರ ಗೋ ಸಂಕುಲ ಸಮೃದ್ಧಿ ಯೋಜನೆ' ಜಾರಿ ಮಾಡಲಾಗಿದೆ ಮತ್ತು ಕೊಪ್ಪಳದಲ್ಲಿ ನಾರಿ ಸುವರ್ಣ ಕುರಿ ತಳಿ ಸಂವರ್ಧನಾ ಕೇಂದ್ರ ಸ್ಥಾಪಿಸಲಿದ್ದು. ಶಿವಮೊಗ್ಗದಲ್ಲಿ ಪಶುವೈದ್ಯಕೀಯ ಕಾಲೇಜಿನಲ್ಲಿ ಸಂಶೋಧನೆ ಕೇಂದ್ರ ಸ್ಥಾಪನೆಯಾಗಲಿದೆ.

ರಾಜ್ಯದ ಹಾಲು ಒಕ್ಕೂಟ

ರಾಜ್ಯದ 14 ಜಿಲ್ಲಾ ಹಾಲು ಒಕ್ಕೂಟಗಳ ವ್ಯಾಪ್ತಿಯಲ್ಲಿ, 14,914 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ಹಾಲು ಉತ್ಪಾದಕರಿಗೆ ಉತ್ತೇಜನ ನೀಡಲು ಕ್ಷೀರಧಾರೆ ಯೋಜನೆ ಜಾರಿಗೆ ತರಲಾಗಿದೆ. ಕ್ಷೀರ ಸಂಜೀವಿನಿ ಹಂತ–2 ಇದರ ಅಡಿಯಲ್ಲಿ ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳಲ್ಲಿ ಗುಂಪಿನ ಸದಸ್ಯರಿಗೆ ಸೌಲಭ್ಯ ಒದಗಿಸುವ ಕ.ಹಾ.ಮ. ಸಂಜೀವಿನಿ ಯೋಜನೆ ಜಾರಿಗೆ ತರಲಾಗಿದೆ.

ಮೀನುಗಾರಿಕೆ

ಕರ್ನಾಟಕ ರಾಜ್ಯವು ಕರಾವಳಿ ಮೀನು ಉತ್ಪಾದನೆಯಲ್ಲಿ 6ನೇ ಸ್ಥಾನ ಮತ್ತು ಒಳನಾಡು ಉತ್ಪಾದನೆಯಲ್ಲಿ 9ನೇ ಸ್ಥಾನದಲ್ಲಿದೆ. ಕರ್ನಾಟಕದಲ್ಲಿ ಮೀನು ಉತ್ಪನ್ನಗಳ ರಫ್ತು 2021–22ರಲ್ಲಿ 1,00,000 ಮೆಟ್ರಿಕ್ ಟನ್. ಮೀನುಗಾರಿಕೆ ಅಭಿವೃದ್ಧಿಗಾಗಿ ಯೋಜನೆಗಳಾದ ಮತ್ಸ್ಯ ಕೃಷಿ, ಆಶಾಕಿರಣ ಸಿಗಡಿ ಮತ್ತು ಹಿನ್ನೀರು ಮೀನು ಕೃಷಿ ಯೋಜನೆ ಹೀಗೆ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ.

ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳು

ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಪೌಷ್ಟಿಕತೆಯ ಸ್ಥಿತಿಗತಿಯನ್ನು ಅವಲೋಕಿಸಿದಾಗ. 2021 ಮಾರ್ಚ್ ಅಂತ್ಯದ ವೇಳೆಗೆ ಅಪೌಷ್ಟಿಕ ಮಕ್ಕಳಲ್ಲಿ 89.2 4ರಷ್ಟು ಮಕ್ಕಳು ಸಾಮಾನ್ಯ ಅಪೌಷ್ಟಿಕತೆಯ ಶ್ರೇಣಿಯಲ್ಲಿ ಇದ್ದಾರೆ. 10.57 ರಷ್ಟು ಮಕ್ಕಳು ಮಧ್ಯಮ ಅಪೌಷ್ಟಿಕತೆ ಮತ್ತು 0.19 ರಷ್ಟು ಮಕ್ಕಳು ತೀವ್ರ ಅಪೌಷ್ಟಿಕತೆಯ ಶ್ರೇಣಿಯಲ್ಲಿ ಇದ್ದಾರೆ.

2021–22 ರ ಕರ್ನಾಟಕದ ಆಯವ್ಯಯದಲ್ಲಿ ಮತ್ತೊಂದು ಪ್ರಮುಖ ಹೆಚ್ಚು, ಒಂದು ಜಿಲ್ಲೆ ಒಂದು ಉತ್ಪನ್ನ ನೀತಿಗೆ ಉತ್ತೇಜನ ನೀಡಲು ಯೋಚಿಸಿದೆ ಇದರಡಿಯಲ್ಲಿ ನಿಯೋಜಿಸಿದ ಜಿಲ್ಲಾವಾರು ಉತ್ಪನ್ನಗಳು ಈ ಕೆಳಗಿನಂತಿವೆ.

ಜಿಲ್ಲಾವಾರು	ಉತ್ಪನ್ನಗಳು
ಬಾಗಲಕೋಟೆ	ಈರುಳ್ಳಿ
ಬಳ್ಳಾರಿ	ಅಂಜೂರ
ಬೆಳಗಾವಿ	ಕಬ್ಬು
ಬೆಂಗಳೂರು ಗ್ರಾಂ.	ಕುಕ್ಕುಟೋದ್ಯಮ
ಬೆಂಗಳೂರು ನಗರ	ಬೇಕರಿ ತಿಂಡಿ ತಿನಿಸು ಉತ್ಪನ್ನಗಳು
ಬೀದರ್	ಶುಂಠಿ
ಚಾಮರಾಜನಗರ	ಅರಶಿನ ಉತ್ಪನ್ನ
ಚಿಕ್ಕಬಳ್ಳಾಪುರ	ಟೊಮ್ಯಾಟೋ
ಧಾರವಾಡ	ಮಾವು
ಚಿಕ್ಕಮಗಳೂರು	ಮೆಣಸು & ಸಾಂಬಾರು ಪದಾರ್ಥ
ಚಿತ್ರದುರ್ಗ	ಕಡಲೆಕಾಯಿ
ದಾವಣಗೆರೆ	ಸಿರಿಧಾನ್ಯ
ದಕ್ಷಿಣ ಕನ್ನಡ	ಮೀನು ಸೇರಿದಂತೆ ಸಮುದ್ರ ಉತ್ಪನ್ನಗಳು
ಗದಗ	ಬ್ಯಾಡಗಿ ಮೆಣಸಿನಕಾಯಿ
ಕೊಡಗು	ಕಾಫಿ
ಹಾಸನ	ತೆಂಗು
ತುಮಕೂರು	ಕೊಬ್ಬರಿ ಉತ್ಪನ್ನ
ಹಾವೇರಿ	ಮಾವು
ಕಲಬುರಗಿ	ತೊಗರಿ
ಕೋಲಾರ	ಟೊಮ್ಯಾಟೋ
ಕೊಪ್ಪಳ	ಸೀಬೆ ಹಣ್ಣು
ಮಂಡ್ಯ	ಕಬ್ಬು,
ಮೈಸೂರು	ಬಾಳೆಹಣ್ಣು
ರಾಯಚೂರು	ಮೆಣಸಿನಕಾಯಿ
ರಾಮನಗರ	ತೆಂಗು
ಶಿವಮೊಗ್ಗ	ಪೈನಾಪಲ್
ಶಿರಸಿ	ಜೇನು
ಉಡುಪಿ	ಮೀನು ಸೇರಿ ಸಮುದ್ರದ ಉತ್ಪನ್ನಗಳು
ಉತ್ತರ ಕನ್ನಡ	ಸಾಂಬಾರು ಪದಾರ್ಥಗಳು
ವಿಜಯಪುರ	ನಿಂಬೆಹಣ್ಣು
ಯಾದಗಿರಿ	ಕಡಲೆಕಾಯಿ

ಕರ್ನಾಟಕದಲ್ಲಿ ರೈತ ಉತ್ಪಾದಕರ ಸಂಘ ಹಾಗೂ ಆಹಾರ ಪಾರ್ಕ್ ಗಳ ಕಾರ್ಯಕ್ಷಮತೆ ಸುಧಾರಣೆ

ರಾಜ್ಯದಲ್ಲಿ ಈ ಕೆಳಗಿನ ಪ್ರಮುಖ ಸಂಸ್ಥೆಗಳನ್ನು ಪ್ರಾರಂಭಿಸಲಾಗಿದೆ :

- ಕರ್ನಾಟಕ ರಾಜ್ಯದಲ್ಲಿ ಫುಡ್ ಪಾರ್ಕ್‌ಗಳು
- ಇಂಡಿಯಾ ಫುಡ್ ಪಾರ್ಕ್, ತುಮಕೂರು
- ಇನೋವ ಅಗ್ರಿ ಬಯೋ ಪಾರ್ಕ್ ಲಿಮಿಟೆಡ್, ಮಾಲೂರು
- ಅಕ್ಷಯ ಫುಡ್ ಪಾರ್ಕ್, ಹಿರಿಯೂರು
- ಗ್ರೀನ್ ಪಾರ್ಕ್, ಬಾಗಲಕೋಟೆ
- ಜೇವರ್ಗಿ ಅಗ್ರೋ ಫುಡ್ ಪಾರ್ಕ್, ಕಲಬುರ್ಗಿ

ಕರ್ನಾಟಕದಲ್ಲಿ ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉದ್ಯಮಗಳು

ಕರ್ನಾಟಕ ರಾಜ್ಯವು 2.3 ಲಕ್ಷಕ್ಕೂ ಹೆಚ್ಚು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ನೆಲೆಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಕೈಗಾರಿಕಾ ಬೆಳವಣಿಗೆಯಲ್ಲಿ ದೇಶದಲ್ಲಿ ಐದನೇ ಸ್ಥಾನದಲ್ಲಿದೆ ಮತ್ತು MSME ವಲಯ ಕೃಷಿಯ ನಂತರ ಎರಡನೇ ಅತಿದೊಡ್ಡ ಉದ್ಯೋಗವಕಾಶಗಳ ವಲಯವಾಗಿದೆ. MSME ಗಳನ್ನು ಉತ್ತೇಜಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದ ಉಪಕ್ರಮಗಳಲ್ಲಿ ಪ್ರಧಾನ ಮಂತ್ರಿಗಳ ಉದ್ಯೋಗ ಸೃಷ್ಟಿ ಕಾರ್ಯಕ್ರಮ, MSME ಕ್ಲಸ್ಟರ ಅಭಿವೃದ್ಧಿ ಕಾರ್ಯಕ್ರಮ, ಪ್ರೋತ್ಸಾಹ ಮತ್ತು ರಿಯಾಯಿತಿಗಳು ಮತ್ತು ಕರ್ನಾಟಕ ಕೈಗಾರಿಕಾ ನೀತಿ 2020-25 ಪ್ರಮುಖವಾಗಿವೆ.

ಕರ್ನಾಟಕದಲ್ಲಿ ಸೇವಾವಲಯದ ಕಾರ್ಯಕ್ಷಮತೆ

ಪ್ರಸಕ್ತ ಶತಮಾನದ ಪ್ರಾರಂಭದಲ್ಲಿ ದೇಶದ ಆರ್ಥಿಕತೆಯಲ್ಲಿ 50ರಷ್ಟು ಇದ್ದ ಸೇವಾ ವಲಯದ ಇಂದು ಪಾಲು 70ರಷ್ಟು ಮೌಲ್ಯವರ್ಧನೆಯೊಂದಿಗೆ ಬೆಳವಣಿಗೆ ಹೊಂದಿದೆ. ಸೇವಾ ವಲಯದಲ್ಲಿ ಉದ್ಯೋಗದ ಶೇಕಡವಾರು ಪ್ರಮಾಣ (2019-20) ರಾಷ್ಟ್ರಮಟ್ಟದಲ್ಲಿ 43.3. ಕರ್ನಾಟಕದಲ್ಲಿ 41.4 ರಷ್ಟಾಗಿದೆ. ರಾಜ್ಯದ ಸೇವಾವಲಯುದ ಪಾಲಿನಲ್ಲಿ ಅತಿ ಹೆಚ್ಚು ಕೊಡುಗೆಯನ್ನು ಬೆಂಗಳೂರು ನಗರ, ಧಾರವಾಡ, ಹಾಸನ ಉತ್ತರ ಕನ್ನಡ ಜಿಲ್ಲೆಗಳು ನೀಡುತ್ತಿರುವುದು ಕಂಡುಬರುತ್ತವೆ. ಅತಿ ಕಡಿಮೆ ಕೊಡುಗೆ ಕೊಡುವ ಜಿಲ್ಲೆ ರಾಮನಗರ.

ಕರ್ನಾಟಕದಲ್ಲಿ ಸಾಮಾಜಿಕ ಮೂಲ ಸೌಕರ್ಯ ಮತ್ತು ಮಾನವ ಅಭಿವೃದ್ಧಿ

2011ರ ಶಿಕ್ಷಣ ಜನಗಣತಿಯ ಪ್ರಕಾರ ಸಾಕ್ಷರತೆ ಪ್ರಮಾಣ 75.6 ಕ್ಕೆ ಏರಿಕೆಯಾಗಿದ್ದು ರಾಷ್ಟ್ರೀಯ ಮಟ್ಟಕ್ಕಿಂತ ಹೆಚ್ಚಾಗಿದೆ. ಆರೋಗ್ಯ ರಾಜ್ಯದ ಒಟ್ಟು ಫಲವತ್ತತೆ ಪ್ರಮಾಣ 2.0 ದಿಂದ 1.7 ಕ್ಕೆ ಕುಸಿದಿದೆ. 15 ರಿಂದ 19 ರ ವಯಸ್ಸಿನ ಮಕ್ಕಳು, ಮಹಿಳೆಯರು ಮತ್ತು ಪುರುಷರಲ್ಲಿ ರಕ್ತ ಹೀನತೆ ಪ್ರಮಾಣ ಹೆಚ್ಚಾಗಿದೆ.

ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ

2011ರ ಜನಗಣತಿಯ ಪ್ರಕಾರ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಆಂಧ್ರಪ್ರದೇಶ ಮೊದಲ ಸ್ಥಾನದಲ್ಲಿದ್ದು, ಕರ್ನಾಟಕ 6ನೇ ಸ್ಥಾನದಲ್ಲಿದೆ. ಜಿಲ್ಲಾವಾರು ಗಮನಿಸುವುದಾದರೆ ಬೆಂಗಳೂರು ನಗರ ಮೊದಲ ಸ್ಥಾನದಲ್ಲಿದೆ. ಕರ್ನಾಟಕ ಜನಸಂಖ್ಯೆ ಮತ್ತು ಆರೋಗ್ಯ ಸೂಚ್ಯಂಕಗಳ ಸಾಧನೆ ವರ್ಷ 2021ರ ಜನನ ಪ್ರಮಾಣ 16.9, ಮರಣ ಪ್ರಮಾಣ 6.2, ತಾಯಂದಿರ ಮರಣ ಪ್ರಮಾಣ 9.2ರಷ್ಟು, ಸರಾಸರಿ ಜೀವನ ನಿರೀಕ್ಷೆಗಳು ವರ್ಷ ಪುರುಷ 67 ವರ್ಷ ಮತ್ತು ಮಹಿಳೆಯ 70 ವರ್ಷ.

ಉದ್ಯೋಗದ ಔಪಚಾರಿಕರಣ

ಒಟ್ಟು ಉದ್ಯೋಗಿಗಳಲ್ಲಿ ಸುಮಾರು 93 ರಷ್ಟು ಜನರು ಅನೌಪಚಾರಿಕ ವಲಯದಲ್ಲಿ ದುಡಿಯುತ್ತಿದ್ದಾರೆ. ರಾಜ್ಯದಲ್ಲಿ ನಿರುದ್ಯೋಗ ದರ 2019-20ರ ಗ್ರಾಮೀಣ ಪ್ರದೇಶದಲ್ಲಿ ಪುರುಷರು (3) ಮತ್ತು ಮಹಿಳೆಯರು (2.2). ನಗರ ಪ್ರದೇಶದಲ್ಲಿ ಪುರುಷರು (3.9), ಮಹಿಳೆಯರು (15.4). ಭಾರತದಲ್ಲಿ ಕೃಷಿಯೇತರ ವಲಯದ 69.5 ರಷ್ಟು ಕಾರ್ಮಿಕರು ಅನೌಪಚಾರಿಕ ವಲಯದಲ್ಲಿ (ಪುರುಷರು 72.9 ಮತ್ತು ಮಹಿಳೆಯರು 56.5) ತೊಡಗಿಸಿಕೊಂಡಿದ್ದಾರೆ.

ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರೀಕೃತ ಯೋಜನೆ

2011ರ ಜನಗಣತಿ ಪ್ರಕಾರ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ 40.62 ಲಕ್ಷ ಕುಟುಂಬಗಳು ವಸತಿರಹಿತವಾಗಿವೆ. 2020 ರಲ್ಲಿ ವಸತಿ ರಹಿತ ಕುಟುಂಬಗಳ ಸಂಖ್ಯೆ 18.71 ಲಕ್ಷಕ್ಕೆ ಇಳಿದಿದೆ. ಬೆಂಗಳೂರು ನಗರ, ದಕ್ಷಿಣ ಕನ್ನಡ, ಕೊಡಗು, ಉಡುಪಿ ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲಿ ವಸತಿರಹಿತ ಸಂಖ್ಯೆ 80 ರಿಂದ 100 ರಷ್ಟು ಕಡಿಮೆಯಾಗಿದೆ. ಧಾರವಾಡ, ಬಳ್ಳಾರಿ, ರಾಯಚೂರು, ಬೀದರ್, ವಿಜಯಪುರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವಸತಿರಹಿತ ಸಂಖ್ಯೆ 20 ರಿಂದ 40 ರಷ್ಟು ಕಡಿಮೆಯಾಗಿದೆ, ಯಾದಗಿರಿ ಮತ್ತು ಕಲಬುರ್ಗಿ ಜಿಲ್ಲೆಗಳಲ್ಲಿ 20ಕ್ಕಿಂತ ಕಡಿಮೆಯಾಗಿದೆ. 2012ರ ಸಮೀಕ್ಷೆಯ ಪ್ರಕಾರ ಕರ್ನಾಟಕದ 70 ಲಕ್ಷ ಕುಟುಂಬಗಳಲ್ಲಿ 24.84 ಲಕ್ಷ

ಕುಟುಂಬಗಳು ಶೌಚಾಲಯವನ್ನು ಹೊಂದಿದ್ದವು. 2018ರ ವೇಳೆಗೆ ಎಲ್ಲಾ ಕುಟುಂಬಗಳಿಗೆ ಶೌಚಾಲಯ ನಿರ್ಮಿಸಿ November 19, 2018 ರಂದು ಬಯಲು ಶೌಚ ಮುಕ್ತ ಎಂದು ಘೋಷಿಸಲಾಯಿತು.

ಕರ್ನಾಟಕದಲ್ಲಿ ಸುಸ್ಥಿರ ನಗರೀಕರಣ

ಕರ್ನಾಟಕ 2011 ರ ಹೊತ್ತಿಗೆ 38.67ರಷ್ಟು ನಗರ ಜನಸಂಖ್ಯೆಯನ್ನು ಹೊಂದಿರುವ ಮೂಲಕ ಭಾರತದಲ್ಲಿ 7ನೇ ದೊಡ್ಡ ರಾಜ್ಯವಾಗಿದೆ. ಕರ್ನಾಟಕದಲ್ಲಿ ಬೆಂಗಳೂರು 90.94 ನಗರೀಕರಣವನ್ನು ಸಾಧಿಸಿದೆ.

ಬೆಂಗಳೂರು ಪ್ರದೇಶದ ಅಭಿವೃದ್ಧಿ

ಬೆಂಗಳೂರು ನಗರ ಸರಳ ಜೀವನೋಪಾಯ (ease of living index) ಸೂಚ್ಯಂಕದಲ್ಲಿ ಮೊದಲ ಸ್ಥಾನದಲ್ಲಿದೆ. ಇತ್ತೀಚಿಗೆ ನೀತಿ ಆಯೋಗ ಬಿಡುಗಡೆ ಮಾಡಿರುವ ಸುಸ್ಥಿರ ಅಭಿವೃದ್ಧಿ ಗುರಿಗಳ ಸೂಚ್ಯಂಕದಲ್ಲಿ ಬೆಂಗಳೂರು 13ನೇ ಸ್ಥಾನದಲ್ಲಿರುತ್ತದೆ.

2011ರ ಜನಗಣತಿಯ ಪ್ರಕಾರ

30 ರಷ್ಟು ನಗರವಾಸಿಗಳು ಕೊಳಗೇರಿ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಕರ್ನಾಟಕ ಕೊಳಗೇರಿ ಪ್ರದೇಶ ಅಭಿವೃದ್ಧಿ ಮಂಡಳಿಯ ಅಂಕಿಸಂಖ್ಯೆಯ ಪ್ರಕಾರ ರಾಜ್ಯದ 2,804 ಕೊಳಗೇರಿ ಪ್ರದೇಶದಲ್ಲಿ 597 ಪ್ರದೇಶಗಳು ಬೆಂಗಳೂರು ನಗರದಲ್ಲಿ ಇರುತ್ತದೆ.

ಆರೋಗ್ಯ

ಬೆಂಗಳೂರು ನಗರ ಆರೋಗ್ಯ ಸ್ಥಿತಿಯಲ್ಲಿ ಅತ್ಯಂತ ಹಿಂದುಳಿದಿದೆ. 100 ಅಂಕಗಳಲ್ಲಿ 45 ಅಂಕಗಳನ್ನು ಪಡೆದು ಕಳಪೆ ಸಾಧನೆಯನ್ನು ತೋರಿದೆ. ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಸಮೀಕ್ಷೆ–5 ರ ವರದಿಯ ಪ್ರಕಾರ 2019–20 ರ ಅವಧಿಯಲ್ಲಿ ಆರೋಗ್ಯದ ಪ್ರಮಾಣ 38.6 ರಿಂದ 34.95 ಕುಸಿದಿದೆ.

ಶಿಕ್ಷಣ

ಆರೋಗ್ಯ ಕ್ಷೇತ್ರಕ್ಕೆ ಹೋಲಿಸಿದರೆ ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕದ ಸಾಧನೆ ಉತ್ತಮವಾಗಿದೆ. ಬೆಂಗಳೂರಿನಲ್ಲಿ ಕೂಡ ಇದೇ ಮುಂದುವರೆದಿದೆ. ಬಾಲ್ಯವಿವಾಹದ ಪ್ರಮಾಣ ಕೂಡ ಕಡಿಮೆ ಇದೆ.

ಕಲೆ ಸಂಸ್ಕೃತಿ ಮತ್ತು ವಿಜ್ಞಾನ

ದೆಹಲಿ ಮತ್ತು ಮುಂಬೈ ಹೊರತುಪಡಿಸಿದರೆ. ಈ ಕ್ಷೇತ್ರದಲ್ಲಿ ಬೆಂಗಳೂರು ಮುಂದಿದೆ.

ಸುರಕ್ಷತೆ ಸ್ವಾತಂತ್ರ್ಯ–ಸಮಾನತೆ ಮತ್ತು ಹವಾಮಾನ ವೈಪರಿತ್ಯ

ಕಡಿಮೆ ಅಪರಾಧ ಪ್ರಮಾಣವನ್ನು ಹೊಂದಿರುವ ನಗರಗಳ ಪೈಕಿ ಬೆಂಗಳೂರು ನಾಲ್ಕನೇ ಸ್ಥಾನದಲ್ಲಿದೆ. ಉಳಿದ ಭಾರತೀಯ ನಗರಗಳಿಗೆ ಹೋಲಿಸಿದರೆ ಬೆಂಗಳೂರು ಮಹಿಳೆಯರಿಗೆ ಸುರಕ್ಷಿತ ನಗರ ಎಂದು ಹೆಸರು ಪಡೆದಿದೆ.

ಬೆಂಗಳೂರು ಅರ್ಥವ್ಯವಸ್ಥೆ ಮತ್ತು ಆಡಳಿತ

ಬೆಂಗಳೂರು ನಗರ ಗ್ರಾಮಾಂತರ ಮತ್ತು ರಾಮನಗರ ಈ ಮೂರು ಜಿಲ್ಲೆಗಳು ರಾಜ್ಯದ 2 ರಷ್ಟು ಭೂಪ್ರದೇಶವನ್ನು ಹೊಂದಿದ್ದ ಬೆಂಗಳೂರು 2.5 ಲಕ್ಷ ಜನರಿಗೆ ಉದ್ಯೋಗವನ್ನು ನೀಡಿದೆ. ದೇಶದ ಇತರ ನಗರಗಳಿಗೆ ಹೋಲಿಸಿದರೆ ಅತಿ ಹೆಚ್ಚು ಸಂಬಳ ನೀಡುವ ನಗರವಾಗಿದೆ. 2020ರ ನಡುವೆ ವರ್ಷದಲ್ಲಿ ಭಾರತಕ್ಕೆ ಹರಿದುಬಂದ ವಿದೇಶಿ ಬಂಡವಾಳದ ಶೇಕಡ ಎಂಟರಷ್ಟು ಭಾಗ ಕರ್ನಾಟಕಕ್ಕೆ ಹರಿದುಬಂದಿದೆ.

ಇತರೆ

ರಾಜ್ಯದಲ್ಲಿ 7ನೇ ಆರ್ಥಿಕ ಗಣತಿ ಪೂರ್ಣಗೊಂಡಿದ್ದು ಹಿಂದಿನ ಆರ್ಥಿಕ ಜನಗಣತಿಗಿಂತ 52 ರಷ್ಟು ಹೆಚ್ಚಿರುವ 43.78 ಲಕ್ಷ ಆರ್ಥಿಕ ಉದ್ಯಮಗಳನ್ನು ಗುರುತಿಸಲಾಗಿದೆ. ಜನನ ಮತ್ತು ಮರಣಗಳ ನೋಂದಣಿಗಾಗಿ ಇ–ಜನ್ಮ ತಂತ್ರಾಂಶವಾದ 'ಸಕಾಲ' ಯೋಜನೆಯನ್ನು ಅಭಿವೃದ್ಧಿಪಡಿಸದೆ. ಆಡಳಿತದಲ್ಲಿ ಪಾರದರ್ಶಕತೆಯನ್ನು ಒದಗಿಸಲು ಜನವರಿ 20, 2021 ರಂದು ಅವಲೋಕನ ಎಂಬ ತಂತ್ರಾಂಶವನ್ನು ಜಾರಿಗೆ ತರಲಾಗಿದೆ.

ಕರ್ನಾಟಕದಲ್ಲಿ ತ್ಯಾಜ್ಯದ ನಿರ್ವಹಣೆ

ದೇಶದಲ್ಲಿ ಪ್ರತಿವರ್ಷ 72 ಮಿಲಿಯನ್ ಟನ್ ಘನತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಇದರಲ್ಲಿ 31 ಮಿಲಿಯನ್ ಟನ್ ತ್ಯಾಜ್ಯವನ್ನು ಭೂಮಿಗೆ ಸುರಿಯಲಾಗುತ್ತಿದೆ ಮತ್ತು ನೀರನ್ನು ಕಲುಷಿತಗೊಳಿಸುತ್ತದೆ. ಹಾಗೂ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತಿದೆ.

ಕರ್ನಾಟಕದಲ್ಲಿ ಘನತ್ಯಾಜ್ಯ ನಿರ್ವಹಣೆಯ ಪ್ರಸ್ತುತ ಸ್ಥಿತಿಗತಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಘನತಾಜ್ಯ ನಿರ್ವಹಣೆ ಅಧಿನಿಯಮ 2016ರಲ್ಲಿ 5–ಖ ಸೂತ್ರವನ್ನು

ಜಾರಿಗೆ ತಂದಿದೆ Reduce, reuse, recycle, recovery and replenish.

ಕರ್ನಾಟಕದಲ್ಲಿ ಕೊಳಚೆ ನೀರಿನ ನಿರ್ವಹಣೆ

ಭಾರತದಲ್ಲಿ ಸಂಸ್ಕರಿಸದಿರುವ ಕೊಳಚೆ ನೀರಿನಿಂದಾಗಿ 70ರಷ್ಟು ಜಲಮಾಲಿನ್ಯ ಉಂಟಾಗುತ್ತದೆ. ಭಾರತದಲ್ಲಿ ಉತ್ಪಾದನೆಯಾಗುವ ಒಟ್ಟಾರೆ ಕೊಳಚೆ ನೀರಿನಲ್ಲಿ ಶೇ. ಆರರಷ್ಟು ಕರ್ನಾಟಕ ರಾಜ್ಯದಿಂದ ಉತ್ಪಾದನೆಯಾಗುತ್ತಿದೆ. ವಿವಿಧ ನದಿಗಳಲ್ಲಿರುವ (biological oxygen demand) ಇದನ್ನು ಆಧರಿಸಿ ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ ಭಾರತದಲ್ಲಿ 351 ನದಿಗಳ ವಿವಿಧ ಭಾಗಗಳು ಮಾಲಿನ್ಯ ಪೀಡಿತ ಎಂದು ಗುರುತಿಸಿದೆ. ಇಂತಹ 17 ನದಿಗಳು ಕರ್ನಾಟಕದಲ್ಲಿ ಇದ್ದು, ಇವು 42 ನಗರ ಸ್ಥಳೀಯ ಸಂಸ್ಥೆಗಳ ಮೂಲಕ ಹರಿದು ಹೋಗುತ್ತವೆ.

ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ

ರಾಜ್ಯದಲ್ಲಿ ಕೃಷಿಯ ನಂತರ ಅರಣ್ಯ 2ನೇ ಅತಿ ಹೆಚ್ಚು ಬಳಸಲ್ಪಡುವ ಭೂ ಪ್ರದೇಶವಾಗಿದೆ. ರಾಜ್ಯದ ಒಟ್ಟು ಅರಣ್ಯ ಪ್ರದೇಶ ಭೌಗೋಳಿಕ ಪ್ರದೇಶದ 22 ರಷ್ಟು ಭಾಗದಿಂದ ಆವೃತವಾಗಿದೆ. ಪಶ್ಚಿಮ ಘಟ್ಟಗಳ 60ರಷ್ಟು ಭಾಗ ಕರ್ನಾಟಕದಲ್ಲಿದೆ. ಪಶ್ಚಿಮಘಟ್ಟ ಭಾರತದ ನಾಲ್ಕು ಜೀವವೈವಿಧ್ಯ ಹಾಟ್ ಸ್ಪಾಟ್‌ಗಳಲ್ಲಿ ಒಂದಾಗಿದೆ.

ಪ್ರವಾಸೋದ್ಯಮ ಚಟುವಟಿಕೆಗಳು

ಅಭಯಾರಣ್ಯಗಳಿಗೆ ಭೇಟಿ ನೀಡುವವರಲ್ಲಿ ಹೆಚ್ಚಿನವರು (ಶೇಕಡ 99.97) ರ ಭಾರತೀಯರಾಗಿದ್ದಾರೆ. ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ಮತ್ತು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಗರಿಷ್ಠ ಸಂಖ್ಯೆಯಲ್ಲಿ ವಿದೇಶಿಗರು ಭೇಟಿ ನೀಡಿದ್ದಾರೆ. ಅರಣ್ಯ ಉತ್ಪನ್ನಗಳ ಮಾರಾಟದಿಂದ 2021–22ರಲ್ಲಿ ರಾಜ್ಯ 18,136.76 ಲಕ್ಷ ಆದಾಯವನ್ನು ಗಳಿಸಿದೆ.

ರಾಜ್ಯ ಯೋಜನೆಗಳಾದ :– ಗಿರಿಜನ ಉಪಯೋಜನೆ; ಸಿರಿ ಚಂದನವನ ಯೋಜನೆ; ಅರಣ್ಯಗಳ ಅಭಿವೃದ್ಧಿ ಯೋಜನೆ; ರಸ್ತೆಬದಿ ನೆಡುತೋಪು ಯೋಜನ; ತಾಲೂಕಿಗೊಂದು ಹಸಿರು ಗ್ರಾಮ ಯೋಜನೆ; ದೇವರಕಾಡು ಅಭಿವೃದ್ಧಿ ಯೋಜನೆ.

ಕರ್ನಾಟಕ ಜೀವವೈವಿಧ್ಯ ಮಂಡಳಿ

ಜೈವಿಕ ವೈವಿಧ್ಯ ಅಧಿನಿಯಮ 2002ರ ಕಲಂ 22ರ ಪ್ರಕಾರ ಕರ್ನಾಟಕ ಜೀವವೈವಿಧ್ಯ ಮಂಡಳಿಯನ್ನು 2003 ರಲ್ಲಿ ಸ್ಥಾಪಿಸಲಾಯಿತು. ರಾಜ್ಯವು 2030ರ ವೇಳೆಗೆ ಶೇ. 33ರಷ್ಟು ಪ್ರದೇಶ ಅರಣ್ಯವನ್ನು ಹೊಂದುವ ಗುರಿ ಹೊಂದಿದೆ.

ಆರ್ಥಿಕ ಹಸಿರೀಕರಣ

ಭಾರತ ಡಿಸೆಂಬರ್ 1, 2022 ರಿಂದ ನವಂಬರ್ 30, 2023 ರವರಿಗೆ ಜಿ–20 ಅಧ್ಯಕ್ಷ ಸ್ಥಾನವನ್ನು ಹೊಂದಲಿದೆ. 2021ರಲ್ಲಿ ನಡೆದಿದ್ದ ಹವಾಮಾನ ಬದಲಾವಣೆ ಶೃಂಗಸಭೆಯಲ್ಲಿ (cop–26) ಪ್ರಧಾನಿಗಳು 2070 ರ ವೇಳೆಗೆ ನಿವ್ವಳ ಶೂನ್ಯ ಹೊರಸೂಸುವಿಕೆಯನ್ನು ಸಾಧಿಸುವುದು ಭಾರತದ ಗುರಿಯಾಗಿದೆ ಎಂದು ಘೋಷಿಸಿದ್ದರು. ಈ ಗುರಿಯನ್ನು ಹೊಂದಲು ಭಾರತಕ್ಕೆ 10.1 ಟ್ರಿಲಿಯನ್ ಡಾಲರ್ ಹೂಡಿಕೆಯ ಅಗತ್ಯವಿದೆ.

ಹಸಿರು ಬಾಂಡ್

2007ರಲ್ಲಿ ಯುರೋಪಿಯನ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್ ಇದನ್ನು ಬಿಡುಗಡೆ ಮಾಡಿದ್ದು. ಹವಾಮಾನ ಜಾಗೃತಿ ಬಾಂಡ್ ಎಂಬ ಶೀರ್ಷಿಕೆಯಡಿಯಲ್ಲಿ 800 ಮಿಲಿಯನ್ ಅಮೆರಿಕನ್ ಡಾಲರ್‌ಗೆ ನವೀಕರಿಸಬಹುದಾದ ಇಂಧನ ಮತ್ತು ಇಂಧನ ದಕ್ಷತೆ ಯೋಜನೆಗಳಿಗೆ ಮೀಸಲಾದ ಒಂದು ಬಾಂಡ್.

ವಿವಿಧ ವಲಯಗಳಲ್ಲಿ ಕರ್ನಾಟಕದ ಸಾಧನೆ

1) ***ಸೇವೆಗಳು:*** ದೇಶದ ಸೇವಾ ವಲಯಕ್ಕೆ ಕೊಡುಗೆ ರಾಜ್ಯದ (14.3) ಮತ್ತು ಎರಡನೇ ಸ್ಥಾನದಲ್ಲಿದೆ
2) ***ಬ್ಯಾಂಕಿಂಗ್ ಮತ್ತು ವಿಮಾ ಸೇವೆ:*** ಈ ವಲಯಕ್ಕೆ ಕರ್ನಾಟಕದ ಕೊಡುಗೆ 11.5
3) ***ಕೈಗಾರಿಕೆ:*** ಈ ವಲಯಕ್ಕೆ ಕರ್ನಾಟಕದ ಕೊಡುಗೆ 9.4 ಇದು ದೇಶದಲ್ಲಿ ಮೊದಲ ಸ್ಥಾನದಲ್ಲಿದೆ.
4) ***ತಯಾರಿಕಾ ವಲಯ:*** ಈ ವಲಯಕ್ಕೆ ಕರ್ನಾಟಕದ ಕೊಡುಗೆ 13.6.

ಸಾರಂಶ

ಒಟ್ಟಾರೆಯಾಗಿ ನೋಡುವುದಾದರೆ ಕರ್ನಾಟಕವು ಮುಂಚೂಣಿ ಯಲ್ಲಿರುವ ರಾಜ್ಯಗಳಲ್ಲಿ ಒಂದಾಗಿದೆ. ಬೆಂಗಳೂರು ದೇಶದ ಉತ್ತಮ ಟೆಕ್ನಾಲಜಿ ಹಬ್ ಆಗಿ ವಿಶ್ವದ ಮೊದಲ 5 ನಗರಗಳಲ್ಲಿ ಸ್ಥಾನ ಪಡೆದಿದೆ ಮುಂದಿನ ಐವತ್ತು ವರ್ಷಗಳ ಆರ್ಥಿಕ ಬೆಳವಣಿಗೆಗೆ ಪೂರಕವಾಗಿರುವ ನಾವಿನ್ಯತೆ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರೀಕೃತವಾಗಿರುವ ಭವಿಷ್ಯಕ್ಕಾಗಿ ರಾಜ್ಯ ಮೂಲ ಸೌಕರ್ಯಗಳನ್ನು ನಿರ್ಮಿಸಬೇಕು. ●

ಕೃಷಿ ವಿಜ್ಞಾನ, ಏಪ್ರಿಲ್–ಜೂನ್, 2022, ಸಂಚಿಕೆ 46(2) / 43–44

ಅಪ್ಪಾರಾವ ಭೋಸಲೆ ಕೆಂಪು ಭೂಮಿಯಲ್ಲಿ ಕೊನರಿದ ಸೇಬು

ಜಿ. ಚಂದ್ರಕಾಂತ
ನಿವೃತ್ತ ಉಪನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕಲಬುರಗಿ
e-Mail : chandrakanth1957@gmail.com Mob. : 9480107133

ಗುಲಾಬಿ ಕುಟುಂಬದಲ್ಲಿನ (ರೋಸೇಸೀ) ಮೇಲಸ್ ಡೊಮೆಸ್ಟಿಕಾಗೆ ಸೇರಿದ ಮತ್ತು ಸಮಶೀತೋಷ್ಣ ವಲಯದ ಕಾಶ್ಮೀರಿ ಕೆಂಪು ಚೆಲುವೆಯ ಸೇಬು ಹಣ್ಣು ಬೀದರ ಜಿಲ್ಲೆಯಲ್ಲಿಯೂ ಕೊನರಬಹುದೆಂದು ಯಾರೂ ಊಹಿಸಿರಲಿಲ್ಲ. ಇಲ್ಲಿನ ಹವಾಗುಣಕ್ಕೆ ಈ ಬೆಳೆ ಹೊಂದಿಕೊಳ್ಳುವುದಿಲ್ಲವೆಂದೇ ಬಹಳಷ್ಟು ಜನ ಭಾವಿಸಿದ್ದರು. ಸೇಬು ಹಣ್ಣನ್ನು ನಮ್ಮ ನೆಲದಲ್ಲಿಯೂ ಬೆಳೆಯಬಹುದೆಂದು ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನ ಘಾಟಬೋರಳ ಗ್ರಾಮದ ಅಪ್ಪಾರಾವ ದಿಗಂಬರರಾವ ಭೋಸಲೆ ಅವರು ತೋರಿಸಿಕೊಟ್ಟು ಜಿಲ್ಲೆಯ ಇತರ ರೈತರಿಗೆ ಮಾದರಿಯಾಗಿದ್ದಾರೆ.

ಬಡ ಕೃಷಿಕ ಕುಟುಂಬದಲ್ಲಿ ಹುಟ್ಟಿದ 51 ವರ್ಷ ವಯಸ್ಸಿನ ಅಪ್ಪಾರಾವ ಓದಿದ್ದು ಕೇವಲ ಏಳನೆಯ ತರಗತಿ. ಕಡು ಬಡತನದಿಂದಾಗಿ ಶಿಕ್ಷಣವನ್ನು ಮೊಟಕುಗೊಳಿಸಿ ಕೃಷಿ ಕಾರ್ಯದಲ್ಲಿ ತೊಡಗಿಸಿಕೊಂಡರು. ಇವರಿಗಿರುವ ಏಳು ಎಕರೆ ಭೂಮಿಯಲ್ಲಿ ಮೊದಲು ಹೀರೇಕಾಯಿ, ಕುಂಬಳಕಾಯಿ, ಜೋಳ, ತೊಗರಿ ಮುಂತಾದ ಸಾಂಪ್ರದಾಯಿಕ ಬೆಳೆಗಳನ್ನು ಬೆಳೆಯುತ್ತಿದ್ದರು.

ಭೋಸಲೆ 1992ರಲ್ಲಿ ಪಂಜಾಬ, ಹರಿಯಾಣಾ, ಮಹಾರಾಷ್ಟ್ರ, ಆಂಧ್ರಪ್ರದೇಶ, ಬೆಂಗಳೂರು, ಮೈಸೂರು ಮುಂತಾದೆಡೆ ಪ್ರಯಾಣ ಮಾಡಿ ಸೇಬು ಮತ್ತಿತರ ತೋಟಗಾರಿಕೆ ಬೆಳೆಗಳ ಮಾಹಿತಿ ಸಂಗ್ರಹಿಸಿದರು. ಸದಾ ಕೃಷಿಯಲ್ಲಿ ಪ್ರಯೋಗಶೀಲತೆ ಮತ್ತು ಹೊಸತನ ಕಂಡುಕೊಳ್ಳುವ ಛಲ, ಬದ್ಧತೆ, ದೃಢವಿಶ್ವಾಸ ದೊಂದಿಗೆ ಒಂದು ಎಕರೆ ಕೆಂಪು ಮತ್ತು ಬರಡು ಭೂಮಿಯಲ್ಲಿ ಹಿಮಾಚಲ ಪ್ರದೇಶ ಸಿಮ್ಲಾದ ಹೆಚ್‌ಆರ್‌ಎಂಎನ್–99 (ಹರಿಮನ್) ತಳಿಯ ಸೇಬು ಹಣ್ಣನ್ನು ಬೆಳೆದು ಯಶಸ್ವಿ ಯಾಗಿದ್ದಾರೆ. ಈ ಭೂಮಿ ಇವರ ಪಾಲಿಗೆ ಬಂದಿದ್ದು, ಸಹೋದರ ರಾಮರಾವ ಹೆಸರಿನಲ್ಲಿದೆ.

ಕೆಂಪು ಬಣ್ಣಕ್ಕೆ ತಿರುಗುತ್ತಿರುವ ಮತ್ತು ನಳನಳಿಸುತ್ತಿರುವ ಸೇಬಿನ ಹಣ್ಣು

ಸೇಬಿನ ಸಸಿಗಳ ನಾಟಿಗಾಗಿ ಜೆಸಿಬಿಯಿಂದ 11 ದಿನ 4 x 5 ಅಡಿ ಆಳದ ನಾಲೆ ತೆಗೆದು 8 ಟ್ರ್ಯಾಕ್ಟರ್ ಕೊಟ್ಟಿಗೆ ಗೊಬ್ಬರ ಹಾಕಿ ಮಣ್ಣಿನಿಂದ ಮುಚ್ಚಿ, 100 ಚೀಲ ಕೋಕೋವಿಟ್ ಗೊಬ್ಬರ ಮತ್ತು ಕೋನಿಕಾ ಔಷಧ ಸಿಂಪಡಿಸಿದರು. ಎಂಟು ದಿನಗಳ ಬಳಿಕ ಹಿಮಾಚಲ ಪ್ರದೇಶದ ರೂಪೇಶ ಸುನವಾನೆಯವರಿಂದ ಪ್ರತಿ ಸಸಿ 210ರೂ. ದಂತೆ ಖರೀದಿಸಿದ 222 ಸೇಬು ಸಸಿಗಳನ್ನು 2021ರ ನವೆಂಬರಿನಲ್ಲಿ ಗಿಡದಿಂದ ಗಿಡಕ್ಕೆ 14 x 14 ಅಡಿ ಮತ್ತು ಸಾಲಿನಿಂದ ಸಾಲಿಗೆ 14 x 14 ಅಡಿ ಅಂತರದಲ್ಲಿ ನಾಟಿ ಮಾಡಿದ್ದಾರೆ. ಸಸಿಗಳ ಸಾಗಾಣಿಕೆಗಾಗಿ 9000ರೂ. ನೀಡಿದ್ದಾರೆ.

ಎರಡು ತೆರೆದ ಬಾವಿಗಳಿಂದ ಹನಿ ನೀರಾವರಿ ಅಳವಡಿಸಿಕೊಂಡಿದ್ದು, ಈ ಹಿಂದೆ ಹೂವಿನ ಬೇಸಾಯಕ್ಕೆ ತೋಟಗಾರಿಕೆ ಇಲಾಖೆಯಿಂದ ಹನಿ ನೀರಾವರಿಗಾಗಿ ಸಹಾಯಧನ ಪಡೆದಿದ್ದರು. ಸೇಬಿನ ಸಸಿಗಳಿಗೆ ತಂಪು ವಾತಾವರಣ ಕಲ್ಪಿಸಲು ಅನುವಾಗುವಂತೆ ಮಿಶ್ರಬೆಳೆಯಾಗಿ ಗಂಗಾ ತಳಿಯ ತೆಂಗನ್ನೂ ಬೆಳೆದಿದ್ದಾರೆ. ಇಪ್ಪತ್ತು ದಿನಕ್ಕೊಮ್ಮೆ ಕಾಲುವೆಯ ಮೂಲಕ ಮತ್ತು ಪ್ರತಿದಿನ ಒಂದು ಗಂಟೆ ಹನಿ ನೀರಾವರಿ ಮೂಲಕ ನೀರುಣಿಸುವರು. ಪತ್ನಿ ಕಸ್ತೂರಬಾಯಿ, ಐದಾರು ಆಳುಗಳ ಸಹಾಯದಿಂದ ಕೃಷಿಕಾರ್ಯದಲ್ಲಿ ತೊಡಗಿದ್ದು, ಐದು ಹೈನು ದನಗಳ ಸಾಕಣೆಯಿಂದ ಹಾಲನ್ನು ಪಡೆಯುತ್ತಿದ್ದಾರಲ್ಲದೆ ಇವುಗಳ

ತ್ಯಾಜ್ಯದಿಂದ ಜೀವಾಮೃತವನ್ನು ತಯಾರಿಸಿ ಸೇಬಿಗೆ 20 ದಿನಕ್ಕೊಮ್ಮೆ ಸಿಂಪಡಿಸುತ್ತಿರುವುದರಿಂದ ಸೇಬಿಗೆ ರೋಗಗಳ ಬಾಧೆ ಕಡಿಮೆ.

ನಾಟಿ ಮಾಡಿದ 11 ತಿಂಗಳಿಗೇ ಸಸಿಗಳ ಟ್ರಿಮ್ ಮಾಡಿದ್ದು, ಡಿಸೆಂಬರಿನಲ್ಲಿ ಹೂಬಿಟ್ಟು ಈಗ ಪ್ರತಿ ಗಿಡದಲ್ಲಿ 20–25 ಹಣ್ಣುಗಳು ಬಿಟ್ಟು ಪಕ್ವವಾಗುತ್ತಿವೆ. ಇಲ್ಲಿನ ಹವಾಗುಣಕ್ಕನುಗುಣವಾಗಿ 15 ತಿಂಗಳ ಸೇಬಿನ ಗಿಡಗಳು ಪೂರಕವಾಗಿ ಮತ್ತು ಸಮೃದ್ಧವಾಗಿ ಏಳೆಂಟು ಅಡಿ ಎತ್ತರ ಬೆಳೆದು ನಳನಳಿಸುತ್ತಿವೆ. ಈವರೆಗೆ ಸೇಬಿನ ಬೇಸಾಯಕ್ಕಾಗಿ ಒಟ್ಟು 5.50 ಲಕ್ಷ ರೂ. ವೆಚ್ಚವಾಗಿದ್ದು, 7–8 ಲಕ್ಷ ರೂ. ಆದಾಯ ನಿರೀಕ್ಷಿಸಿದ್ದಾರೆ.

ಅಪ್ಪಾರಾವ ಗುಜರಾತಿನ 500 ವಿಶೇಷ ಸಪೋಟಾ ಗಿಡಗಳಿಂದ 2018ರಿಂದ ವರ್ಷಕ್ಕೆ ಮೂರು ಬಾರಿಯಂತೆ ಇಳುವರಿ ಪಡೆದು ಸುಮಾರು 12 ಲಕ್ಷ ರೂ. ಆದಾಯ ಮತ್ತು 2009ರಲ್ಲಿ ಗಂಗಾ ತಳಿಯ ತೆಂಗನ್ನು, ವಿವಿಧ ತಳಿಯ ಮಾವು, ನಾಗಪುರ ಕಿತ್ತಳೆ, ಅಂಜೂರ, ನೇರಳೆ, ಲಿಂಬೆ ಮತ್ತು ಗಜಲಿಂಬೆ, ಗೋಡಂಬಿ ಗಿಡಗಳನ್ನು ಸಹ ಬೆಳೆದು ಲಾಭ ಪಡೆಯುತ್ತಿದ್ದಾರೆ.

ಗುಜರಾತಿನ ವಿಶೇಷ ತಳಿಯ ಸಪೋಟ ಗಿಡ ಮತ್ತು ಹಣ್ಣುಗಳು

‘ಈಗ ನೆಮ್ಮದಿಯ ಬದುಕು ರೂಪುಗೊಂಡಿದ್ದು, ಕುಟುಂಬದಲ್ಲಿ ಸಂತೋಷ ಹರಿದಾಡುತ್ತಿದೆ. ಹಿಮಾಲಯ ಪರ್ವತದ ತಪ್ಪಲು ಪ್ರದೇಶದಲ್ಲಿ ಸೇಬು ವರ್ಷಕ್ಕೊಮ್ಮೆ ಬಂದರೆ ನಾವು ಬೆಳೆದ ಸೇಬು ಇಲ್ಲಿನ ವಾತಾವರಣದಲ್ಲಿ ವರ್ಷಕ್ಕೆರಡು ಸಲ ಅಂದರೆ ಡಿಸೆಂಬರ್ ಮತ್ತು ಮೇ ತಿಂಗಳಲ್ಲಿ ಇಳುವರಿ ಕೊಡುವುದು ವಿಶೇಷ. ಹಿತಮಿತ ನೀರು, ಸಾವಯುವ ಗೊಬ್ಬರ, ಜೀವಾಮೃತ ದಿಂದ ಸೇಬು ಗಿಡಗಳ ಸರಿಯಾಗಿ ನಿರ್ವಹಣೆ ಮಾಡಿದರೆ ಗಿಡಗಳ ಜೀವಿತಾವಧಿ ಸುಮಾರು 25 ವರ್ಷವಿರುತ್ತದೆ. ಸೇಬು ಕೃಷಿಯನ್ನು ಸವಾಲಾಗಿ ಸ್ವೀಕರಿಸಿ ಕೇವಲ 15 ತಿಂಗಳಲ್ಲೇ ಇಳುವರಿ ಪಡೆಯಲಾದ ಸೇಬು ಹೆಚ್ಚು ರುಚಿಕಟ್ಟಾಗಿದ್ದು, ಹಣ್ಣಿನ ಗಾತ್ರ, ಆಕಾರ, ಬಣ್ಣ ಅತ್ಯಾಕರ್ಷಕವಾಗಿದೆ. ಈ ಸಲ ಹಣ್ಣು ಮಾರಾಟದ ಬಗ್ಗೆ ಯೋಚಿಸಿಲ್ಲ. ಮುಂದಿನ ಬೆಳೆ ಬಂದಾಗ ಹಣ್ಣು ಯೋಚಿಸುವೆ. ಸೇಬು ಬೆಳೆಯನ್ನು ಗಾಳಿಮಳೆಯಿಂದ ಮತ್ತು ಜಾನುವಾರುಗಳಿಂದ ಸಂರಕ್ಷಿಸಲು ಪಾಲಿಹೌಸ್ ನಿರ್ಮಿಸಲು ಮತ್ತು ಹೊಲದ ಸುತ್ತ ತಂತಿಬೇಲಿ ಅಳವಡಿಸಲು ಯೋಜಿಸಲಾಗಿದೆ’ ಎನ್ನುತ್ತಾರೆ ಅಪ್ಪಾರಾವ ಭೋಸಲೆ.

ಕೃಷಿಕ ಅಪ್ಪಾರಾವ ಭೋಸಲೆ ಸೇಬಿನ ಗಿಡದಲ್ಲಿರುವ ಸೇಬುಗಳನ್ನು ಪ್ರದರ್ಶಿಸುತ್ತಿರುವ ದೃಶ್ಯ

ಸಾಂಪ್ರದಾಯಿಕವಾಗಿ ಸೇಬು ಬೆಳೆಯಲು ಬೇಸಿಗೆಯಲ್ಲಿ 21 ರಿಂದ 24 ಡಿಗ್ರಿ ಸೆಲ್ಸಿಯಸ್ ತಾಪಮಾನವಿರಬೇಕು. ಬೀದರ ಜಿಲ್ಲೆಯ ಬೇಸಿಗೆ ತಾಪಮಾನ 35 ರಿಂದ 40 ಡಿಗ್ರಿ ಸೆಲ್ಸಿಯಸ್ ಇರುವುದರಿಂದ ಸೇಬು ಬೆಳೆಯಲು ಜಿಲ್ಲೆಯ ಹವಾಗುಣ ಸೂಕ್ತವಲ್ಲ. ಆದರೂ ಕೆಲವು ರೈತರು ಸ್ವ–ಇಚ್ಛೆಯಿಂದ ಹೆಚ್‌ಆರ್‌ಎಂಎನ್–99 ತಳಿಯ ಸೇಬು ಬೆಳೆಯಲು ಪ್ರಯತ್ನಿಸುತ್ತಿದ್ದಾರೆ. ಇವರಲ್ಲಿ ಸೇಬು ಕೃಷಿಯ ವಿಧಾನಗಳನ್ನು ಸರಿಯಾಗಿ ಅಳವಡಿಸಿಕೊಂಡ ಅಪ್ಪಾರಾವ ಭೋಸಲೆ ಸೇಬನ್ನು ಯಶಸ್ವಿಯಾಗಿ ಬೆಳೆದಿದ್ದಾರೆ ಎಂಬುದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ವಿಶ್ವನಾಥ ಝಿಳ್ಳೆ ಮತ್ತು ಹಿರಿಯ ಸಹಾಯಕ ನಿರ್ದೇಶಕ ಮಾರುತಿ ಅವರ ಅಭಿಪ್ರಾಯ. ●

FORM IV (See Rule 8)

1. Name of Publication - KRISHI VIJNANA
2. Registration No. - KRN-T-28/1/73
3. Place of Publication - Bengaluru
4. Periodicity of Publication - Quarterly
5. Publisher's Name: University of Agril. Sciences
   : GKVK, Bengaluru-560 065
6. Editor's Name : Dr. K. H. Nagaraj
   Nationality : Indian
   Address : Editor, Communication Centre
   University of Agril. Sciences
   GKVK, Bengaluru-560 065
7. Names and addresses of individuals who own the newspaper and partners, or shareholders holding more than one per cent of the total capital : University of Agril. Sciences, GKVK Bangalore-560 065

I, Dr. K. H. Nagaraj hereby declare that the particulars given above are true to the best of my knowledge and behalf.

(Sd.)
Dr. K. H. Nagaraj
Publisher

ಕೃಷಿ ವಿಜ್ಞಾನದ ಮಹಾಪೋಷಕರು

ಕೃಷಿ ವಿಜ್ಞಾನ ಕೇಂದ್ರ
ಕಂದಲಿ–573 217, ಹಾಸನ

ಕೃಷಿ ವಿಜ್ಞಾನ ಕೇಂದ್ರ
ಮೂಡಿಗೆರೆ–577 132, ಚಿಕ್ಕಮಗಳೂರು

ಕೃಷಿ ವಿಜ್ಞಾನ ಕೇಂದ್ರ
ಕೊನೆಹಳ್ಳಿ–572 202, ತಿಪಟೂರು

ಕೃಷಿ ವಿಜ್ಞಾನ ಕೇಂದ್ರ
ನವಿಲೆ–577 204, ಶಿವಮೊಗ್ಗ

ಕೃಷಿ ವಿಜ್ಞಾನ ಕೇಂದ್ರ
ಬ್ರಹ್ಮಾವರ–576 213, ಉಡುಪಿ

ಕೃಷಿ ವಿಜ್ಞಾನ ಕೇಂದ್ರ
ಹರದನಹಳ್ಳಿ–571 127, ಚಾಮರಾಜನಗರ

ಕೃಷಿ ವಿಜ್ಞಾನ ಕೇಂದ್ರ
ಚಿಂತಾಮಣಿ–563 125, ಚಿಕ್ಕಬಳ್ಳಾಪುರ

ಕೃಷಿ ವಿಜ್ಞಾನ ಕೇಂದ್ರ
ವಿ.ಸಿ.ಫಾರಂ, ಮಂಡ್ಯ–571 405

ಕೃಷಿ ವಿಜ್ಞಾನ ಕೇಂದ್ರ
ಹಿರಿಯೂರು–572 143, ಚಿತ್ರದುರ್ಗ

ಕೃಷಿ ವಿಜ್ಞಾನ ಕೇಂದ್ರ
ಕಂಕನಾಡಿ–575 002, ಮಂಗಳೂರು

ಕೃಷಿ ವಿಜ್ಞಾನ ಕೇಂದ್ರ
ಹಾಡೋನಹಳ್ಳಿ–571 205, ಬೆಂ.ಗ್ರಾಮಾಂತರ

ಕೃಷಿ ವಿಜ್ಞಾನ ಕೇಂದ್ರ
ಟಮಕ–563 103, ಕೋಲಾರ

ಕೃಷಿ ವಿಜ್ಞಾನ ಕೇಂದ್ರ
ಚಂದೂರಾಯನಹಳ್ಳಿ–562 120, ರಾಮನಗರ

ಸಂಪಾದಕರು ಮತ್ತು ಪ್ರಕಾಶಕರು
ಡಾ. ಕೆ. ಹೆಚ್. ನಾಗರಾಜ್, ಸಂಪಾದಕರು, ಸಂವಹನ ಕೇಂದ್ರ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ., ಬೆಂಗಳೂರು–560065

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

UNIVERSITY OF AGRICULTURAL SCIENCES, BANGALORE

ವೃತ್ತಪತ್ರಿಕೆಗಳ ರಿಜಿಸ್ಟ್ರಾರ್‌ರವರಲ್ಲಿ ನೋಂದಾಯಿಸಿದ ಸಂಖ್ಯೆ : K.R.N-T-28/1/73 **UNREGISTERED PARCEL**

ಇವರಿಗೆ,

<u>ಇವರಿಂದ,</u>

ಸಂಪಾದಕರು
ಸಂವಹನ ಕೇಂದ್ರ
ಕೃಷಿ ವಿಶ್ವವಿದ್ಯಾನಿಲಯ
ಜಿ.ಕೆ.ವಿ.ಕೆ., ಬೆಂಗಳೂರು–560065
ದೂರವಾಣಿ : 080–23622684